ಫೆಬ್ರವರಿ 2023

₹ 15/-

# ಯುಗರಶ್ಮಿ

## ತ್ರೈಮಾಸಿಕ




- ಸಾಮಾಜಿಕ ಶಾಂತಿ
- ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು
- ಶಾಂತಿ ಸ್ಥಾಪನೆಗೆ ಸಂಬಂಧಿಸಿ ಪೈಗಂಬರರ(ಸ) ಉಪದೇಶಗಳು ಮತ್ತು ಉತ್ತಮ ಮಾದರಿ
- ನೀನು ಮಾಡು – ಮಾಡಬೇಡ

"ದೇವ ಮಾರ್ಗದಲ್ಲಿ ಹತ್ಯೆಗೀಡಾದವರ ಕುರಿತು ಅವರು ಮೃತಪಟ್ಟವರೆಂದು ಹೇಳಬೇಡಿರಿ. ಅವರು ಮೃತರಲ್ಲ; ಜೀವಂತರು. ಆದರೆ ನೀವು ಅದನ್ನು ಗ್ರಹಿಸುವುದಿಲ್ಲ."

(ಪವಿತ್ರ ಖುರ್‌ಆನ್ 2: 155)

ವಿಷಯ ಸೂಚಿಕೆ | ಪುಟ


- ಹಿಂದೂ – ಮುಸ್ಲಿಂ ಐಕ್ಯ 1
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
- ಸಾಮಾಜಿಕ ಶಾಂತಿ 3
- ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು – 2 7
- ಶಾಂತಿ ಸ್ಥಾಪನೆಗೆ ಸಂಬಂಧಿಸಿ ಹಝ್ರತ್ ಪೈಗಂಬರರ(ಸ) ಉಪದೇಶಗಳು ಮತ್ತು ಅವರ ಉತ್ತಮ ಮಾದರಿ 14
- ನೀನು ಮಾಡು – ಮಾಡಬೇಡ 22
- ನೆನಪಿನಂಗಳದಿಂದ – ಮರೆತುಬಿಡಲು ಅಸಾಧ್ಯವಾದ ಕೆಲವು ನೆನಪುಗಳು 25
- ವಾರ್ತೆಗಳು : • ಬೆಂಗಳೂರು ಸಾಹಿತ್ಯೋತ್ಸವ – 2022 • ರೋಗಿಗಳಿಗೆ ಹಣ್ಣು ಹಂಪಲು ವಿತರಣೆ • ಉಚಿತ ನೇತ್ರ ಪರೀಕ್ಷೆ ಕ್ಯಾಂಪ್ • ಬುರ್ಕಿನಾ ಫಾಸೋದ ಮಸೀದಿಯಲ್ಲಿ ಉಂಟಾದ ಭೀಕರಾಕ್ರಮಣದಲ್ಲಿ ಒಂಬತ್ತು ಅಹ್ಮದಿ ಮುಸ್ಲಿಮರು ಕೊಲ್ಲಲ್ಪಟ್ಟರು 32, 40
- ನಿಧನ ವಾರ್ತೆಗಳು : •ಜ. ಸಿ. ಸಲೀಂ ಅಹ್ಮದ್ ಸಾಹಿಬ್ •ಜ. ಮೌಲವಿ ಮುಹಮ್ಮದ್ ಸಲೀಂ ಸಾಹಿಬ್ •ಎಂ. ಮುಸ್ತಫ ಸಾಹಿಬ್ 33
- ಸಂಪಾದಕರಿಗೆ ಪತ್ರ 34
- ಓದಿದ್ದು : 35
  - •2021ರ ವಿಶ್ವಸಂಸ್ಥೆ ಮಾನವ ಅಭಿವೃದ್ಧಿ ಸೂಚ್ಯಂಕ 132ನೇ ಸ್ಥಾನಕ್ಕೆ ಕುಸಿದ ಭಾರತ
  - •ಗಮನ ಸೆಳೆದ 10 ಕೋ. ರೂ. ಬೆಲೆಯ ಭೀಮ ! • ದುಬೈಯಲ್ಲಿ ದೇಗುಲ ಲೋಕಾರ್ಪಣೆ
  - • ಇಮ್ರಾನ್ ಪ್ರಮಾಣಿಕೃತ ಕಳ್ಳ – ಪಾಕ್ ಪ್ರಧಾನಿ ಟೀಕೆ • ಬಾಲಕ ಕಚ್ಚಿದ್ದರಿಂದ ಸತ್ತೇ ಹೋದ ಹಾವು
  - • ಮಾನವನ ದೇಹಕ್ಕೆ ಕೃತಕ ರಕ್ತ ಕಣಗಳು ! • ಒಂದು ಊಟಕ್ಕೆ 19000 ರೂ. !
  - •ನಾಟಕ ವೀಕ್ಷಿಸಿದ್ದಕ್ಕೆ ಮರಣದಂಡನೆ • ಅನಾನಸಿನ ಬೆಲೆ 1 ಲಕ್ಷ ರೂ. • ತಾಜ್‌ಗೆ 9.81 ಕೋಟಿ ತೆರಿಗೆ ನೋಟಿಸ್
  - • ದಿನಗೂಲಿಗೆ 14 ಕೋಟಿ ತೆರಿಗೆ ನೋಟಿಸ್ ! • ಅಂಬೇಡ್ಕರ್ ದೇಶದ ಸಂವಿಧಾನದಲ್ಲಿ ಪ್ರವಾದಿ ಮುಹಮ್ಮದರ ಪರಿಕಲ್ಪನೆಗಳನ್ನು ಅಳವಡಿಸಿದ್ದಾರೆ : ರಮೇಶ್ ಕುಮಾರ್ • ಕೂಲಿ ಆಗಿದ್ದಾತ ಅಮೇರಿಕದಲ್ಲಿ ಜಡ್ಜ್
  - • 7 ವರ್ಷದ ಬಾಲಕನ ಬಾಯಲ್ಲಿ 527 ಹಲ್ಲು ! • ಯಾವುದೇ ದಿನಾಂಕ ಹೇಳಿದರೂ ಇಂಥದ್ದೇ ವಾರ ಎನ್ನುವ ವಿದ್ಯಾರ್ಥಿ ! • ಈ ಮೀನಿನ ಬೆಲೆ 13 ಕೋಟಿ ರೂ. • ಮಕ್ಕಳ ಊಟಕ್ಕಾಗಿ ಕೇಶ ಮುಂಡನ !


# ಯುಗರಶ್ಮಿ

ಮುಖಪುಟ ಚಿತ್ರ : ಅಹ್ಮದಿಯಾ ಖಲೀಫರು 7–10–2022ರಂದು ಅಮೇರಿಕದ ಡಲ್ಲಾಸ್‌ನಲ್ಲಿ (ಟೆಕ್ಸಾಸ್) ಉದ್ಘಾಟಿಸಿದ "ಬೈತುಲ್ ಇಕ್ರಾಮ್" ಮಸೀದಿ


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

*ಸಂಪಾದಕ : ಮುಹಮ್ಮದ್ ಯೂಸುಫ್*

**ಫೆಬ್ರವರಿ 2023**

| ಆರಂಭ : 1975 | ಸಂಪುಟ : 39 | ತಬ್ಲೀಗ್ : 1402 ಹಿಜರೀ ಶಮ್ಸೀ | ಸಂಚಿಕೆ : 3 |
|---|---|---|---|

## ಹಿಂದೂ – ಮುಸ್ಲಿಂ ಐಕ್ಯ

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಯಾವುದೇ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದುಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಅಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಛೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟುಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯದವರು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

ಮಿತ್ರರೇ, ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಘಟ್ಟದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ಅತ್ಯಾವಶ್ಯಕವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಬಿಟ್ಟು ಅನುಕಂಪಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವಿತ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ. **(ಮೈತ್ರಿ ಸಂದೇಶ)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಧರ್ಮದ ಸಾರಾಂಶ ಒಳಿತು ಬಯಸುವುದಾಗಿದೆ.
- ಕಠಿಣ ಕೋಪದಿಂದ ದೂರವಿರಿ.
- ನೀವು ನಿಮ್ಮ ಝಕಾತ್ ನೀಡಿರಿ.
- ನಿನ್ನ ನಾಲಗೆಯನ್ನು ನಿಯಂತ್ರಿಸು.
- ನಿಮ್ಮ ರಕ್ತ ಸಂಬಧಿಗಳೇ ನಿಮ್ಮ ಕುಟುಂಬಸ್ಥರು.
- ನಿಮ್ಮ ಸಹೋದರನಿಗೆ ಸನ್ಮಾರ್ಗ ಉಪದೇಶಿಸಿರಿ.
- ನಿನ್ನ ಪಿತನನ್ನು ಅನುಸರಿಸು.
- ಹಿರಿಯರನ್ನು ಆದರಿಸಿರಿ.
- ದೃಢಜ್ಞಾನವನ್ನು ಗಳಿಸಿರಿ.
- ನಿಮ್ಮ ಮಕ್ಕಳನ್ನು ಗೌರವಿಸಿರಿ.
- ಮಾತೃ ಸಹೋದರಿಯೂ ತಾಯಿಯೇ.
- ಪ್ರಾರ್ಥನೆಯೇ ಯಥಾರ್ಥ ಆರಾಧನೆ.
- ಇಹಲೋಕವು ಪರಲೋಕದ ಕೃಷಿ ಸ್ಥಳವಾಗಿದೆ.
- ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ.
- ಒಬ್ಬ ಮುಸ್ಲಿಂ ಮತ್ತೊಬ್ಬ ಮುಸ್ಲಿಮನ ಸಹೋದರನು.
- ನೀಡಿದ ದಾನವನ್ನು ಮರಳಿ ಪಡೆಯಬಾರದು.
- ಎಲ್ಲ ವಿಧ ಮಾದಕ ಪದಾರ್ಥಗಳಿಂದ ದೂರವಿರಿ.
- ಮರಣವನ್ನು ಬಯಸಬಾರದು.
- ಅಳೆದು ಕೊಡುವಾಗ ಹೆಚ್ಚು ಕೊಡಿರಿ.
- ದುಆ (ಪ್ರಾರ್ಥನೆ) ಮಾಡದಿರುವುದು ಪಾಪವಾಗಿದೆ.
- ಸಂಭಾಷಣೆ ಪ್ರಾರಂಭಿಸುವುದಕ್ಕೆ ಮುಂಚೆ ಸಲಾಂ ಹೇಳಿರಿ.
- ಒಬ್ಬ ಮುಸ್ಲಿಂ ಮತ್ತೊಬ್ಬ ಮುಸ್ಲಿಮನಿಗೆ ಕನ್ನಡಿ.
- ಕೊಡುವ ಕೈ ಪಡೆಯುವ ಕೈಗಿಂತ ಶ್ರೇಷ್ಠ.
- ಕೇಳಿದ ವಾರ್ತೆ ಕಂಡ ಹಾಗೆ ಅಲ್ಲ.
- ಸಮುದಾಯದ ನೇತಾರ ಅವರ ಸೇವಕನಾಗಿದ್ದಾನೆ.
- ಯಥಾರ್ಥ ಐಶ್ವರ್ಯ ಮನಸ್ಸಿನ ಐಶ್ವರ್ಯವಾಗಿದೆ.
- ಮಾಡಿದ ಪಾಪಕ್ಕೆ ಲಜ್ಜೆಪಡುವುದು ಯಥಾರ್ಥ ಪಶ್ಚಾತ್ತಾಪ.
- ಶಿಫಾರಸು ಮಾಡಿರಿ, ಶಿಫಾರಸಿಗೂ ಪ್ರತಿಫಲ ಲಭಿಸುವುದು.
- ಪ್ರೀತಿ ವರ್ಧಿಸಲಿಕ್ಕಾಗಿ ಪರಸ್ಪರ ಪಾರಿತೋಷಿಕಗಳನ್ನು ನೀಡಿರಿ.
- ಕಾರ್ಯಗಳಲ್ಲಿ ಉತ್ತಮವಾದುದು ಮಧ್ಯ ನೆಲೆಯಲ್ಲಿರುವಂಥದ್ದು.
- ಧರ್ಮಬದ್ಧವಾದ ಉಪಜೀವನ ಹುಡುಕುವುದು ಜಿಹಾದ್ ಆಗಿದೆ.
- ಒಳಿತಿನ ಬಗ್ಗೆ ಮಾರ್ಗದರ್ಶನ ನೀಡುವವನು ಅದನ್ನು ಮಾಡಿದವನಂತೆ.
- ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು.
- ಒಂದು ಸಮುದಾಯದ ಆದರಣೀಯ ವ್ಯಕ್ತಿ ನಿಮ್ಮ ಬಳಿಗೆ ಬಂದರೆ ನೀವು ಅವರನ್ನು ಗೌರವಿಸಿರಿ.
- ನೆರೆಕರೆಯವರೊಡನೆ ಉತ್ತಮ ರೀತಿಯಲ್ಲಿ ವರ್ತಿಸಲಿಕ್ಕೆ ನಾನು ನಿಮಗೆ ತಾಕೀತು ನೀಡುತ್ತೇನೆ.
- ಧಾನ್ಯವನ್ನು (ಬೆಲೆ ವರ್ಧಿಸುವಾಗ ಮಾರಾಟ ಮಾಡಲಿಕ್ಕೆ) ಬಚ್ಚಿಡುವವನು ದೇವಕಾರುಣ್ಯದಿಂದ ವಿದೂರನಾಗುತ್ತಾನೆ.

("ಹದೀಸ್ ಸಮಾಹಾರಂ" ಪುಸ್ತಕದಿಂದ ಆಯ್ದುದು)

# ಸಾಮಾಜಿಕ ಶಾಂತಿ

♦ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ವೃದ್ಧರ ಸಂರಕ್ಷಣೆ

ವೃದ್ಧರ ಸಂರಕ್ಷಣೆ ಕ್ರಮೇಣ ಸರಕಾರದ ಹೊಣೆಗಾರಿಕೆಯಾಗುತ್ತಾ ಇದೆ. ವೃದ್ಧರ ಸಂರಕ್ಷಣೆಗೋಸ್ಕರ ಮಾಡುವ ಖರ್ಚು ಸರಕಾರಕ್ಕೆ ಭಾರವಾದ ಹೊರೆಯಾಗುತ್ತಿದೆ. ಸರಕಾರ ಎಷ್ಟು ಖರ್ಚು ಮಾಡಲು ಸಿದ್ಧವಾದರೂ ವೃದ್ಧರಿಗೆ ಶಾಂತಿಯನ್ನೂ ಸಮಾದಾನವನ್ನೂ ನೀಡಲಾರದು. ತಮ್ಮನ್ನು ತಿರಸ್ಕರಿಸಲಾಗಿದೆ, ಬಿಟ್ಟುಬಿಡಲಾಗಿದೆ ಎಂಬ ಭಾವನೆ ವೃದ್ಧರಿಗೆ ಅತ್ಯಂತ ನೋವುಂಟುಮಾಡುತ್ತದೆ ಮತ್ತು ಕುಟುಂಬದಿಂದ ದೂರವಾಗಿ ವಾಸಿಸುವುದು ಅವರಿಗೆ ಅಸಹನೀಯವಾಗುತ್ತದೆ. ದೂರದ ಒಬ್ಬ ಸಂಬಂಧಿಯನ್ನು ನೋಡಿಕೊಳ್ಳುವುದನ್ನು ಯೋಚಿಸುವುದು ಕೂಡ ಅಸಾಧ್ಯವೇ ಆಗಿದೆ.

ಇಂತಹ ಸಮಾಜದಲ್ಲಿ ವೃದ್ಧಾಶ್ರಮಗಳ ಆವಶ್ಯಕತೆ ಸಮಯ ಕಳೆದಂತೆ ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ಅವರಿಗೆ ಮರ್ಯಾದೆಯಿಂದ ಕೂಡಿದ ಜೀವಿತಕ್ಕೆ ಆವಶ್ಯಕವಾದ ಕನಿಷ್ಠ ವ್ಯವಸ್ಥೆ ಕೂಡ ಮಾಡಲು ಸಾಕಷ್ಟು ಹಣವನ್ನು ಸರಕಾರಕ್ಕೆ ಬಿಡುಗಡೆ ಮಾಡಲು ಸಾಧ್ಯವಾಗುವುದಿಲ್ಲ. ಶಾರೀರಿಕ ರೋಗಗಳನ್ನು ಚಿಕಿತ್ಸೆ ನಡೆಸಿ ಗುಣಪಡಿಸಬಹುದಾದರೂ ಇಂದಿನ ಸಮಾಜದಲ್ಲಿ ವೃದ್ಧ ಜನರಲ್ಲಿ ಬಹುಸಂಖ್ಯಾತರು ಅನುಭವಿಸುತ್ತಿರುವ ಮಾನಸಿಕ ಅಸ್ವಸ್ಥತೆಯನ್ನು ಗುಣಪಡಿಸುವುದು ಅಸಾಧ್ಯವಾಗಿದೆ.

ಮುಸ್ಲಿಮರು ಬಹುಸಂಖ್ಯಾತರಾಗಿರುವ ದೇಶಗಳಲ್ಲಿ ಅನೇಕ ಉತ್ತಮ ಮೌಲ್ಯಗಳಿಗೆ ಚ್ಯುತಿಯುಂಟಾಗಿದ್ದರೂ ಅನ್ಯ ಸಮಾಜಗಳಲ್ಲಿರುವ ಇಂತಹ ದುಸ್ಥಿತಿ ಮುಸ್ಲಿಮ್ ದೇಶಗಳಲ್ಲಿ ಯೋಚಿಸಲು ಕೂಡ ಸಾಧ್ಯವಿಲ್ಲ. ವೃದ್ಧರನ್ನು ಈ ರೀತಿ ಹೀನೈಸುವುದು ಅಪಮಾನಕರವೆಂದು ಗಣಿಸಲಾಗುತ್ತಿದೆ. ವೃದ್ಧರನ್ನು ನೋಡಿಕೊಳ್ಳಲು ಸರಕಾರಗಳು ಸಿದ್ಧವಾಗಿದ್ದರೂ ತಮ್ಮ ಸಂಬಂಧಿಕರನ್ನು ಸರಕಾರಕ್ಕೆ ವಹಿಸಿಕೊಡುವುದನ್ನು ಮುಸ್ಲಿಮರು ನಾಚಿಕೆಗೇಡೆಂದು ಗಣಿಸುತ್ತಾರೆ.

ಆದುದರಿಂದ ಮುಸ್ಲಿಮ್ ಮಹಿಳೆಯ ಪಾತ್ರ ಮಕ್ಕಳು ದೊಡ್ಡವರಾದಾಗ ಕೊನೆಗೊಳ್ಳುವುದಿಲ್ಲ. ಆಕೆ ಹಿಂದಿನ ಕಾಲಕ್ಕೂ ಮುಂದಿನ ಕಾಲಕ್ಕೂ ಬಿಗಿಯಾಗಿ ಸಂಬಂಧ ಸ್ಥಾಪಿಸಿರುತ್ತಾಳೆ. ಆಕೆಯ ದಯಾಪೂರ್ಣವಾದ ನಡೆವಳಿಕೆ, ಆರೈಕೆ ಮಾಡಬೇಕಾದವರನ್ನು ನೋಡಿಕೊಳ್ಳಲು ಆಕೆಯಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯ ಕುಟುಂಬದ ಹಿರಿಯರನ್ನು ರಕ್ಷಿಸಲು ಮುಂದಾಗುತ್ತದೆ. ವೃದ್ಧರು ಅಮೂಲ್ಯರೆಂದು ಗೌರವಿಸಲ್ಪಡುತ್ತಾರೆ ಮತ್ತು ಕುಟುಂಬದ ಅವಿಭಾಜ್ಯ ಅಂಗಗಳಾಗಿ ಮುಂದುವರಿಯುತ್ತಾರೆ. ತಾಯಿ ಅವರನ್ನು ನೋಡಿಕೊಳ್ಳುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತಾಳೆ ಮತ್ತು ಅವರೊಂದಿಗೆ ಸಹವಾಸ ಮಾಡಿ ಅದೊಂದು ಅನಿಷ್ಟಕರವಾದ ಕೆಲಸವೆಂದು ಗಣಿಸದೆ ಅವರೊಂದಿಗೆ ಜೀವಂತ ಮಾನವೀಯ ಸಂಬಂಧ ಪ್ರಕಟಿಸುತ್ತಾಳೆ. ಹೀಗೆ ವರ್ತಿಸಿ ಅವಳು ವೃದ್ಧೆಯಾದಾಗ ಸಮಾಜವು ತನ್ನನ್ನು ಕಡೆಗಣಿಸಲಾರದೆಂದು ಮತ್ತು ಪುರಾತನ ಅವಶೇಷವೆಂದು ತ್ಯಜಿಸಲಾರದೆಂದು ಖಾತರಿ ಮಾಡಿಕೊಳ್ಳುತ್ತಾಳೆ.

ವಾಸ್ತವಿಕವಾಗಿ ಕೆಲವು ಅಪವಾದಗಳು ಸಹ ಪ್ರತಿಯೊಂದು ಸಮಾಜದಲ್ಲಿರಬಹುದಾಗಿದೆ. ಆಧುನಿಕ ಸಮಾಜದ ಪ್ರಭಾವಕ್ಕೊಳಗಾದ ಕೆಲವು ಮುಸ್ಲಿಮ್ ಕುಟುಂಬಗಳು ತಮ್ಮ ಕುಟುಂಬದ ವೃದ್ಧರನ್ನು ತಮಗೆ ಹೊರೆಯೆಂದು ಗಣಿಸುತ್ತಿರಬಹುದು. ಆದರೆ ಒಟ್ಟಾಗಿ ನೋಡುವುದಾದರೆ, ಮುಸ್ಲಿಮ್ ಸಮಾಜಗಳಲ್ಲಿ ತ್ಯಜಿಸಲ್ಪಟ್ಟ ತಂದೆ ತಾಯಿಗಳು ಬೇರೆ ಸಮಾಜಕ್ಕೆ ಹೋಲಿಸಿದರೆ ಇಲ್ಲವೆಂದೇ ಹೇಳಬಹುದು.

ನನಗೆ ಒಂದು ನಗಿಸುವ ಕಥೆ ನೆನಪಿಗೆ ಬರುತ್ತದೆ. ಕೆಲವರು ಅದನ್ನು ಆಲಿಸಿ ನಗಬಹುದಾದರೂ ಬೇರೆ ಕೆಲವರಿಗೆ ಅಳು ಸಹ ಬರಬಹುದಾಗಿದೆ. ಆ ಕಥೆ ಹೀಗಿದೆ: ತನ್ನ ತಂದೆ ತನ್ನ ಅಜ್ಜನೊಂದಿಗೆ ಕೆಟ್ಟ ರೀತಿಯಲ್ಲಿ ವರ್ತಿಸುವುದನ್ನು ಒಂದು ಮಗು ಕಂಡಿತು. ಆ ಮಗುವಿನ ಅಜ್ಜನನ್ನು ಆಡಂಬರದ ವಾಸದ ಕೋಣೆಯಿಂದ ಬೇರೆ ಚಿಕ್ಕ ಮತ್ತು ಅನುಕೂಲತೆಗಳಿಲ್ಲದ ವಾಸದ ಕೋಣೆಗೆ ಮೊದಲು ವರ್ಗಾಯಿಸಲಾಯಿತು. ಅನಂತರ ಆ ವೃದ್ಧನನ್ನು ನೌಕರರು ವಾಸಿಸುವ ಕೋಣೆಯಲ್ಲಿ ಇರಿಸಲಾಯಿತು. ಆ ಕೋಣೆಯಲ್ಲಿ ಬಹಳ ಚಳಿಯಾಗುತ್ತಿತ್ತು ಮತ್ತು ಹೊದಿಸಲು ನೀಡಲಾದ ಕಂಬಳಿ ಸಹ ತೆಳುವಾಗಿತ್ತು. ಆ ವೃದ್ಧ ಬೇರೊಂದು ಕಂಬಳಿಗೆ ಅಪೇಕ್ಷಿಸಿದಾಗ ಆ ಮಗುವಿನ ತಂದೆ ಹಳೆಯ ಉಪಯೋಗಶೂನ್ಯ ಕಂಬಳಿಗಳ ಕಡೆಗೆ ನೋಡುತ್ತಿದ್ದಾಗ ಆ ಮಗು ಹೇಳಿತು: ಎಲ್ಲ ಹಳೆಯ ಕಂಬಳಿಗಳನ್ನು ಅಜ್ಜನಿಗೆ ಕೊಡಬೇಡಿರಿ. ಕೆಲವು ಕಂಬಳಿಗಳನ್ನು ನನಗೋಸ್ಕರ ಇರಿಸಿರಿ. ನೀವು ವೃದ್ಧರಾದಾಗ ಅವುಗಳನ್ನು ನಿಮಗೆ ಕೊಡಲಿಕ್ಕೆ ನನಗೆ ಬೇಕಾಗಬಹುದು.

ಮಗು ತನ್ನ ಅಜ್ಜನನ್ನು ತನ್ನ ತಂದೆ ನೋಡಿಕೊಳ್ಳುವ ಬಗ್ಗೆ ನಿಷ್ಕಳಂಕವಾಗಿ ತನ್ನ ಅತೃಪ್ತಿಯನ್ನು ಸೂಚಿಸಿತು. ಆಧುನಿಕ ಕಾಲದಲ್ಲಿ ವೃದ್ಧರ ಸ್ಥಿತಿ ಹೀಗೆಯೇ ಇದೆ.

ಮುಸ್ಲಿಮ್ ಸಮಾಜಗಳಲ್ಲಿ ಇಂತಹ ಉದಾಹರಣೆಗಳನ್ನು ಕಾಣುವುದು ಅತ್ಯಪೂರ್ವವಾಗಿದೆ. ಆಧುನಿಕ ಸಮಾಜದಲ್ಲಿ ತಮ್ಮ ವೃದ್ಧ ಜನರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವಂತೆ ಕಾಣುವುದು ಕೂಡ ಅತ್ಯಪೂರ್ವವಾಗುತ್ತಾ ಇದೆ. ಮುಸ್ಲಿಮರಿಗೆ ಹೀಗೆ ಉಪದೇಶಿಸಲಾಗಿದೆ:

**ನಿನ್ನ ಪ್ರಭು ಆಜ್ಞಾಪಿಸುತ್ತಾನೆ, "ಅವನ (ಅಲ್ಲಾಹನ) ಹೊರತು ಬೇರೆ ಯಾರನ್ನೂ ಆರಾಧಿಸಬೇಡ. ಮಾತಾಪಿತರೊಡನೆ ಉತ್ತಮವಾಗಿ ವರ್ತಿಸು. ಅವರಲ್ಲಿ ಒಬ್ಬರು ಅಥವಾ ಇಬ್ಬರು ಸಹ ನಿನ್ನ ಬಳಿ ವೃದ್ಧಾಪ್ಯ ಪಡೆದರೆ ನೀನು ಅವರೊಂದಿಗೆ ನಿಂದನೆಯ ಮಾತನ್ನು ಆಡಬಾರದು. ನೀನು ಅವರೊಡನೆ ಗದರಿಸಿ ಮಾತನಾಡಲೂಬಾರದು. ಅವರಿಬ್ಬರೊಡನೆಯೂ ನೀನು ಸೌಮ್ಯವಾಗಿಯೂ ಆದರದಿಂದಲೂ ಮಾತನಾಡು.**

**"ಕರುಣೆಯಿಂದ ಕೂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿಕೊಡು ಹಾಗೂ 'ನನ್ನ ಪ್ರಭೂ, ಅವರೀರ್ವರೂ ನನ್ನ ಬಾಲ್ಯಕಾಲದಲ್ಲಿ ನನ್ನನ್ನು ಸಾಕಿ ಸಲಹಿದಂತೆ ನೀನು ಸಹ ಅವರಿಗೆ ಕರುಣೆದೋರು' ಎಂದು ಪ್ರಾರ್ಥಿಸು."**

(ಪವಿತ್ರ ಖುರ್‌ಆನ್ 17 : 24, 25).

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನಗಳು ಈ ವಿಷಯಕ್ಕೆ ಸಂಬಂಧಿಸಿ ಮಹತ್ವಪೂರ್ಣವಾಗಿವೆ. ದೇವನ ಏಕತ್ವದ ಬಗ್ಗೆ ದೃಢ ನಂಬಿಕೆಯ ನಂತರ ಮನುಷ್ಯರು ಪ್ರೀತಿ ವಾತ್ಸಲ್ಯ ಮತ್ತು ದಯೆಯ ಮೂಲಕ ತಮ್ಮ ತಂದೆ ತಾಯಂದಿರಿಗೆ, ಅವರು ವೃದ್ಧಾಪ್ಯವನ್ನೂ ಕಷ್ಟಕರವಾದ ವಯಸ್ಸನ್ನೂ ತಲಪಿದಾಗ ಬೇರೆ ಎಲ್ಲ ವಿಷಯಗಳಿಗಿಂತ ಆದ್ಯತೆ ನೀಡಬೇಕು.

ಈ ವಚನಗಳು ತಂದೆಯ ಅಥವಾ ತಾಯಿಯ ಅಥವಾ ಇಬ್ಬರ ಸ್ವಭಾವಗುಣಗಳು ಅವರು ವೃದ್ಧರಾದಾಗ ಕೆಲವು ಸಾರಿ ಮಕ್ಕಳಿಗೆ ಅಸಹನೀಯವಾಗಬಹುದಾದ ಸನ್ನಿವೇಶಗಳನ್ನು ಸೂಚಿಸುತ್ತವೆ. ಅಂತಹ ಸಂದರ್ಭಗಳಲ್ಲಿ ಅವರಿಗೆ ಏನೂ ನೋವುಂಟಾಗುವ ರೀತಿಯಲ್ಲಿ ಮಾತನಾಡಬಾರದು. ಬದಲು, ಅವರನ್ನು ಗೌರವದಿಂದ ಕಾಣಬೇಕು.

ಒಂದು ಪೀಳಿಗೆ ಮತ್ತು ಮುಂದಿನ ಪೀಳಿಗೆಗಳ ಮಧ್ಯೆ ಅತ್ಯುತ್ತಮ ಸಂಬಂಧದ ಬಗ್ಗೆ ಪ್ರತಿಪಾದಿಸುವ ಈ ವಚನಗಳು ಪೀಳಿಗೆಗಳ ಮಧ್ಯೆ ಅಗಲಿಕೆ ತಲೆದೋರದಂತೆ ಖಾತರಿ ನೀಡುತ್ತದೆ. ಅಂತಹ ಅಗಲಿಕೆಗಳು ಸಾಂಪ್ರದಾಯಿಕ ನೈತಿಕ ಮೌಲ್ಯಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸದಂತೆ ಮಾಡುತ್ತವೆ. ಇಸ್ಲಾಮಿನ ಸಾಮಾಜಿಕ ಸಿದ್ಧಾಂತ ಕಲಿಸುವುದೇನೆಂದರೆ, ಒಂದು ಪೀಳಿಗೆ ತನ್ನ ಮುಂದಿನ ಪೀಳಿಗೆಯೊಂದಿಗೆ ಅಗಲಿಕೆ ಉಂಟಾಗದಂತೆ ನಿಗಾವಹಿಸಬೇಕು. ಪೀಳಿಗೆಗಳ ಅಗಲಿಕೆ ಸಂಪೂರ್ಣವಾಗಿ ಇಸ್ಲಾಮಿನಲ್ಲಿ ಇಲ್ಲದುದಾಗಿದೆ.

ಇದರ ಮೊದಲು ಹೇಳಿದಂತೆ ಇಸ್ಲಾಮ್ ಪ್ರತಿಪಾದಿಸುವ ಕುಟುಂಬ ಒಂದು ಮನೆಯೊಳಗಿನ ಸದಸ್ಯರಿಗೆ ಸೀಮಿತವಾಗಿರುವುದಿಲ್ಲ. ನಾವು ಮುಂದೆ ಉಲ್ಲೇಖಿಸುವ ಪವಿತ್ರ ಖುರ್‌ಆನಿನ ವಚನ ತಂದೆ ತಾಯಂದಿರಿಗೆ ಮಾತ್ರವಲ್ಲ, ಇತರ ಸಂಬಂಧಿಕರಿಗೋಸ್ಕರ ಸಹ ಖರ್ಚು ಮಾಡಬೇಕೆಂದು ಉಪದೇಶಿಸುತ್ತದೆ. ತಂದೆ ತಾಯಂದಿರ ನಂತರ ಎರಡನೆಯ ಸ್ಥಾನ ಇವರಿಗಿದೆ. ಅವರ ಅಭಿಮಾನಕ್ಕೆ ಹಾನಿ ಉಂಟಾಗದಂತೆ ಮತ್ತು ಪರಸ್ಪರ ಪ್ರೀತಿ ವಿಶ್ವಾಸಗಳನ್ನು ವರ್ಧಿಸುವ ರೀತಿಯಲ್ಲಿ ಅವರಿಗೋಸ್ಕರ ಖರ್ಚು ಮಾಡಬೇಕಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ನೀವು ಅಲ್ಲಾಹನನ್ನು ಆರಾಧಿಸಿರಿ, ಬೇರೇನನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ – ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ. ಅಹಂಭಾವಿಗಳನ್ನೂ ಜಂಭ ಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ."** (4 :37).

ನೀವು ನಿಮ್ಮ ತಂದೆ ತಾಯಿಯರೊಂದಿಗೆ ದಯೆಯಿಂದ ವರ್ತಿಸಲು ಲಕ್ಷ್ಯ ನೀಡಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತಿದೆ.

ಇಂದಿನ ಕಾಲದ ಸಮಾಜ ಈ ಉಪದೇಶಗಳಿಂದ ನೀತಿಪಾಠವನ್ನು ಕಲಿತುಕೊಳ್ಳುವುದಾದರೆ ಇಂದಿನ ಸಮಾಜ ಎದುರಿಸುತ್ತಿರುವ ಅನೇಕ ಸಮಸ್ಯೆಗಳು ಮತ್ತು ಆಧುನಿಕ ಸಮಾಜಕ್ಕೆ ತಗಲಿರುವ ಕಳಂಕ ಇಲ್ಲದಾಗುವುವು. ವೃದ್ಧಾಶ್ರಮಗಳ ಆವಶ್ಯಕತೆಯೇ ಇಲ್ಲದಾಗುವುದು – ದುರದೃಷ್ಟಕರವಾಗಿ ಸಂಬಂಧಿಕರಾದವರು ಯಾರೂ ಇಲ್ಲದವರಿಗೆ ಹೊರತು. ಇಸ್ಲಾಮೀ ಸಮಾಜದಲ್ಲಿ ತಂದೆ ತಾಯಂದಿರು ಮತ್ತು ಮಕ್ಕಳ ಮಧ್ಯೆ ಪ್ರೀತಿಯ ಬಗ್ಗೆ ಎಷ್ಟು ಸಾರಿ ಪುನರಾವರ್ತಿಸಲಾಗಿದೆ ಎಂದರೆ ಒಬ್ಬ ಮಗನಿಗೆ ತನ್ನ ತಂದೆ ತಾಯಂದಿರನ್ನು ತನ್ನ ಸ್ವಂತ ಸುಖಕ್ಕೋಸ್ಕರ ಅವರು ವೃದ್ಧರಾದಾಗ ತ್ಯಜಿಸುವುದು ಅಸಾಧ್ಯವಾಗುವುದು.

## ಮುಂದಿನ ಪೀಳಿಗೆಯ ತರಬೇತಿ

ಮುಂದಿನ ಪೀಳಿಗೆಯ ಬಗ್ಗೆ ಪವಿತ್ರ ಖುರ್‌ಆನ್ ಸಮಾಜಕ್ಕೆ ಅದ್ವಿತೀಯ ಉಪದೇಶ ನೀಡಿದೆ. ನಿಮ್ಮ ಮತ್ತು ನಿಮ್ಮ ಮಕ್ಕಳ ಮಧ್ಯೆ ಸಂಬಂಧವು ಉತ್ತಮವಾಗಲು ನಿಮ್ಮ ಮತ್ತು ನಿಮ್ಮ ಪತ್ನಿಯರ ಮಧ್ಯೆ ಸಂಬಂಧವು ಅತ್ಯುತ್ಕೃಷ್ಟತರವಾಗಿರಬೇಕೆಂದು ಉಪದೇಶಿಸುತ್ತಿದೆ.

ಇದರ ಮೊದಲು ನಾನು ಪವಿತ್ರ ಖುರ್‌ಆನಿನ ಅಧ್ಯಾಯ 4 ವಚನ 35ನ್ನು ಉಲ್ಲೇಖಿಸಿದ್ದೆನು. ಆ ವಚನದಲ್ಲಿ ಪತಿಯನ್ನು ರಕ್ಷಾಧಿಕಾರಿ ಎಂದು ಹೇಳಿದೆ. ರಕ್ಷಾಧಿಕಾರಿಗಳನ್ನು ಖವ್ವಾಮೂನ್ ಎಂಬ ಅರಬಿ ಪದ ಬಳಸಿ ವಿಶ್ಲೇಷಿಸಲಾಗಿದೆ. ಪತಿಯ ಭುಜಗಳ ಮೇಲೆ ಭಾರವಾದ ಹೊಣೆಗಾರಿಕೆಗಳನ್ನು ಇರಿಸಲಾಗಿದೆ. ಪತಿಯ ವರ್ತನೆ ಮಾದರಿ ಕುಟುಂಬ ಜೀವಿತಕ್ಕೆ ಸಹಕಾರಿಯಾಗುವುದಿಲ್ಲವಾದರೆ ಅವನು ತನ್ನ ರಕ್ಷಾಧಿಕಾರಿ (ಖವ್ವಾಮ್) ಎಂಬ ಹೊಣೆಗಾರಿಕೆ ನಿರ್ವಹಿಸದವನಾಗಿ ಗಣಿಸಲ್ಪಡುವನು. ರಕ್ಷಾಧಿಕಾರಿ (ಖವ್ವಾಮ್) ಇದರ ಅತ್ಯುತ್ತಮ ಉದಾಹರಣೆ ಇಸ್ಲಾಮಿನ ಸ್ಥಾಪಕರಾದ ಪವಿತ್ರ ಪ್ರವಾದಿಯವರೇ[ಸ] ಆಗಿದ್ದಾರೆ. ಅವರು ಕಠೋರ ಸ್ವಭಾವದವರಾಗಿರಲಿಲ್ಲ. ಅವರು ಏಕಾಧಿಪತಿಯಂತೆ ವರ್ತಿಸದೆ ಯಾವುದೇ ರೀತಿ ಕುಟುಂಬದ ಸದಸ್ಯರಿಗೆ ನೋವುಂಟುಮಾಡದವರಾಗಿದ್ದರು. ಅವರು ಯಾವಾಗಲೂ ತನ್ನ ಅಭಿಪ್ರಾಯದಂತೆ ನಡೆಯಬೇಕೆಂದು ನಿರ್ಬಂಧಿಸುವವರು ಆಗಿರಲಿಲ್ಲ. ತನ್ನ ಕುಟುಂಬದವರನ್ನು ನೇರ ಮಾರ್ಗದಲ್ಲಿ ಚಲಾಯಿಸುವುದು ಅವರ ಜವಾಬ್ದಾರಿಯಾಗಿತ್ತು. ಆದರೆ ಅವರು ಈ ಜವಾಬ್ದಾರಿಯನ್ನು ಹೇಗೆ ಈಡೇರಿಸಿದರೆಂಬುದು ಎಲ್ಲ ಕಾಲದ ಜನರಿಗೆ ಉತ್ತಮ ಅನುಕರಣೀಯ ಮಾದರಿಯಾಗಿದೆ. ರಕ್ಷಾಧಿಕಾರಿ (ಖವ್ವಾಮ್) ಎಂಬ ಶಬ್ದದ ನಿಜವಾದ ಅರ್ಥವನ್ನು ಅವರ ನಡೆವಳಿಕೆಗಳಿಂದ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

ಒಂದು ಪ್ರಸಿದ್ಧ ಹದೀಸಿನಲ್ಲಿ ಅಬೂಹುರೈರ[ರ] ಪವಿತ್ರ ಪ್ರವಾದಿ[ಸ] ಹೀಗೆ ಹೇಳಿದರೆಂದು ವರದಿ ಮಾಡುತ್ತಾರೆ: ಯಾರ ಸ್ವಭಾವ ಗುಣಗಳು ಉತ್ತಮವಾಗಿವೆಯೋ ಅವರು ಸತ್ಯವಿಶ್ವಾಸಿಗಳಲ್ಲಿ ಉತ್ತಮರು. ಯಾರು ತಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುತ್ತಾರೋ ಅವರೇ ನಿಮ್ಮ ಪೈಕಿ ಉತ್ತಮರು. (ತಿರ್ಮಿಧಿ).

ತಂದೆ ತಾಯಂದಿರು ತಮ್ಮ ಮಕ್ಕಳು ಸಾತ್ವಿಕ ಸಮಾಜದ ಸದಸ್ಯರಾಗಿ ಬೆಳೆಯಬೇಕೆಂದು ಬಯಸುವುದಾದರೆ ಪತಿ ಪತ್ನಿಯರ ಪರಸ್ಪರ ಸಂಬಂಧವು ಮಕ್ಕಳ ಸ್ವಭಾವ ಗುಣಗಳನ್ನು ಉತ್ತಮಪಡಿಸುವುದರಲ್ಲಿ ಮತ್ತು ಕೆಡಿಸುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು.

ಪವಿತ್ರ ಖುರ್‌ಆನ್ ಹೀಗೆ ಉಪದೇಶಿಸಿದೆ: **"ಅವರು ಸುಳ್ಳು ಸಾಕ್ಷಿ ಹೇಳುವವರಲ್ಲ, ನಿಷ್ಪ್ರಯೋಜಕ ವಿಚಾರಗಳ ಬಗ್ಗೆ ಅವರು ಗಮನ ಕೊಡದೆ ಗಾಂಭೀರ್ಯದಿಂದ ವರ್ತಿಸುವವರಾಗಿದ್ದಾರೆ. ಅವರಿಗೆ ಅವರ ಪ್ರಭುವಿನ ದೃಷ್ಟಾಂತಗಳನ್ನು ನೆನಪಿಸುವಾಗ ಆ ಬಗ್ಗೆ ಅವರು ಕಿವುಡರಂತಾಗಲಿ, ಕುರುಡರಂತಾಗಲಿ ವರ್ತಿಸಲಾರರು. ಅವರು ಹೀಗೆ ಪ್ರಾರ್ಥಿಸುತ್ತಾರೆ: 'ನಮ್ಮ ಪ್ರಭೂ, ನಮ್ಮ ಬಾಳಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು."** (25:73–75).

ಈ ಪ್ರಾರ್ಥನೆ ಅದ್ವಿತೀಯ ಮನಮೋಹಕವಾಗಿದೆ ಮತ್ತು ಇದರಲ್ಲಿ ಗಾಢವಾದ ಬುದ್ಧಿ ವೈಭವವಿದೆ. ಪತಿ ಪತ್ನಿಯರು ತಮಗೋಸ್ಕರವಾಗಿ ಮತ್ತು ತಮ್ಮ ಮಕ್ಕಳಿಗೋಸ್ಕರ ಪ್ರಾರ್ಥಿಸಲು ಆದೇಶಿಸಲಾಗಿದೆ. ಅವರೆಲ್ಲರೂ ಸಮಾಧಾನವನ್ನೂ ಸಂತೋಷವನ್ನೂ ನೀಡುವವರಾಗಲಿ ಎಂದೂ ಮಕ್ಕಳು ದೇವಭಯವುಳ್ಳ ಸಮಾಜದ ನಾಯಕರಾಗಲಿ ಎಂದೂ ಆಶಿಸಲಾಗಿದೆ.

ಈ ಉಪದೇಶವನ್ನು ತನ್ನೊಳಗೆ ಅಳವಡಿಸಿಕೊಳ್ಳಲು ಪ್ರಯತ್ನಿಸುವಾಗ ಮಾತ್ರ ಈ ಉಪದೇಶದ ಮಹತ್ವವು ಅರಿವಿಗೆ ಬರುತ್ತದೆ. ನೀವು ಯಾವುದನ್ನಾದರೂ ಅಸ್ಪಷ್ಟವಾಗಿ ಆಶಿಸುವಾಗ ಅದು ನಿಮ್ಮ ವರ್ತನೆಯನ್ನು ಪರಿಣಾಮಕಾರಿಯಾಗಿ ಪ್ರಭಾವಿಸಲಾರದು. ಆದರೆ ನೀವು ಅದಕ್ಕೋಸ್ಕರ ಹೃತ್ಪೂರ್ವಕವಾಗಿ ಪ್ರಾರ್ಥಿಸುವಾಗ ನಿಮ್ಮ ವರ್ತನೆಗಳು ಆ ಪ್ರಾರ್ಥನೆಯಿಂದ ಖಂಡಿತವಾಗಿಯೂ ಪ್ರಭಾವಿಸಲ್ಪಡುವುವು. ಇದನ್ನು ಇನ್ನಷ್ಟು ಸ್ಪಷ್ಟಪಡಿಸಲು ನಾನೊಂದು ಉದಾಹರಣೆ ನೀಡುತ್ತೇನೆ. ನಮ್ಮಲ್ಲಿ ಅನೇಕರು ಸತ್ಯಸಂಧರಾಗಲು ಬಯಸುತ್ತಾರೆ. ಆದರೆ ಅವರು ಪ್ರಾಯೋಗಿಕವಾಗಿ ಹಾಗೆ ಯಾವಾಗಲೂ ವರ್ತಿಸುವುದಿಲ್ಲ. ಆದರೆ ತಮ್ಮನ್ನು ಸತ್ಯಸಂಧರನ್ನಾಗಿ ಮಾಡಬೇಕೆಂದು ದೇವನನ್ನು ಹೃತ್ಪೂರ್ವಕವಾಗಿ ಪ್ರಾರ್ಥಿಸುವವರು ಪ್ರಾರ್ಥಿಸದೆ ಕೇವಲ ಆಶಿಸುವವರಿಗಿಂತ, ತಮ್ಮ ಪ್ರಾರ್ಥನೆಯಿಂದ ಪ್ರಭಾವಿತರಾಗುತ್ತಾರೆ. ತನ್ನ ಸ್ವಭಾವವನ್ನು ಉತ್ತಮ ಪಡಿಸಲು ನೈಜ ಪ್ರಯತ್ನದ ಆವಶ್ಯಕತೆ ಇದೆ. ಒಬ್ಬನು ಪ್ರಾರ್ಥನೆ ಮಾಡಿದ ನಂತರ ತನ್ನ ಪ್ರಾರ್ಥನೆಗೆ ಅನುಯೋಜ್ಯವಾಗದ ರೀತಿಯಲ್ಲಿ ವರ್ತಿಸುವುದಾದರೆ ಅವನ ವರ್ತನೆ ಅಸಮಂಜಸವಾಗುತ್ತದೆ.

ಮಕ್ಕಳ ಹಕ್ಕುಗಳು ಮತ್ತು ಅವರ ಕರ್ತವ್ಯಗಳ ಬಗ್ಗೆ ಪ್ರತ್ಯೇಕವಾಗಿ ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಎಲೈ ವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಭಯಪಡಿರಿ. ನಾಳೆಗೋಸ್ಕರ ತಾನು ಏನನ್ನು ಸಿದ್ಧಪಡಿಸಿಟ್ಟಿದೆ ಎಂದು ಪ್ರತಿಯೊಂದು ಆತ್ಮವೂ ನೋಡಿಕೊಳ್ಳಲಿ. ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನೀವು ಮಾಡುವುದನ್ನೆಲ್ಲ ಖಂಡಿತವಾಗಿಯೂ ಅಲ್ಲಾಹನು ಚೆನ್ನಾಗಿ ತಿಳಿಯುವವನಾಗಿದ್ದಾನೆ."** (59:19).

ಪವಿತ್ರ ಖುರ್‌ಆನ್ ತಂದೆ ತಾಯಂದಿರಿಗೆ ಎಚ್ಚರಿಕೆ ನೀಡುತ್ತದೆ – ಅವರು ತಮ್ಮ ಮಕ್ಕಳ ಬಗ್ಗೆ ತಮ್ಮ ಕರ್ತವ್ಯ ನಿರ್ವಹಣೆ ಮಾಡದೆ ತಮ್ಮ ಹಿಂದೆ ಅತಿರೇಕ ವರ್ತನೆಯನ್ನು ಮಾಡುವ ಮಕ್ಕಳನ್ನು ಬಿಟ್ಟುಹೋಗುವವರಾದರೆ ಅವರು ಅದರ ಬಗ್ಗೆ ದೇವನಿಗೆ ಉತ್ತರ ನೀಡಬೇಕಾಗಬಹುದು.

ತಂದೆ ತಾಯಂದಿರು ತಮ್ಮ ಮಕ್ಕಳನ್ನು ಕೊಲ್ಲಬಾರದು ಎಂದು ಎಚ್ಚರಿಕೆ ನೀಡಲಾಗಿದೆ. ಇದರ ಅರ್ಥ ಮಕ್ಕಳ ಸ್ವಭಾವ ಗುಣಗಳನ್ನು ಕೆಡಿಸುವವರಾಗಬಾರದೆಂದಾಗಿದೆ. ತಮ್ಮ ಮಕ್ಕಳನ್ನು ಮಾತ್ರವಲ್ಲ ಎಲ್ಲ ಚಿಕ್ಕ ಮಕ್ಕಳನ್ನು ಪ್ರೀತಿ, ದಯೆ ಮತ್ತು ಗೌರವದಿಂದ ಕಾಣಬೇಕೆಂದು ಇಸ್ಲಾಮಿನ ಪವಿತ್ರ ಪ್ರವಾದಿ ಉಪದೇಶಿಸಿದ್ದಾರೆ. **"ನಿಮ್ಮ ಮಕ್ಕಳಿಗೆ ದಯೆದೋರಿರಿ, ಗೌರವಿಸಿರಿ."** ಎಂದು ಪವಿತ್ರ ಪ್ರವಾದಿ(ಸ) ಹೇಳಿದ್ದಾರೆ.

ಇಂದಿನ ಲೋಕವು ಈ ಉಪದೇಶವನ್ನು ಅನುಸರಿಸುವುದು ಆವಶ್ಯಕವಾಗಿದೆ. ಈಗ ಬ್ರಿಟನ್‌ನಲ್ಲಿ ಒಂದು ಗಂಭೀರ ಚರ್ಚೆ ನಡೆಯುತ್ತಿದೆ. ಮಕ್ಕಳು ಮಾಡುವ ಅಪರಾಧಗಳಿಗೆ ತಂದೆ ತಾಯಂದಿರನ್ನೂ ಹೊಣೆಗಾರರನ್ನಾಗಿ ಮಾಡಬೇಕೆಂದೂ ಹದಿಹರೆಯದ ಮಕ್ಕಳನ್ನು ಪ್ರತ್ಯೇಕ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವ ಹಾಗೆ ತಂದೆ ತಾಯಂದಿರನ್ನೂ ವಿಚಾರಣೆ ನಡೆಸಲು ನಿಯಮಗಳನ್ನು ರಚಿಸಬೇಕೆಂದೂ ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಶಿಸ್ತನ್ನು ಕಲಿಸಲು ತಮ್ಮ ಜವಾಬ್ದಾರಿ ನಿರ್ವಹಿಸಬೇಕೆಂದೂ ಆವಶ್ಯಪಡಲಾಗಿದೆ. ಹೀಗೆ ಮಾಡಿದರೆ ಬ್ರಿಟನಿನಲ್ಲಿ ಅಪರಾಧಗಳು ಕಡಿಮೆಯಾಗುವುದೆಂದು ಹೇಳಲಾಗಿದೆ. ಧಾರ್ಮಿಕ, ನೈತಿಕ ತತ್ವಗಳು ಕಾರ್ಯನಿರ್ವಹಿಸದ ಹಿನ್ನೆಲೆಯಲ್ಲಿ ಕೇವಲ ಶಿಕ್ಷೆ ನೀಡುವ ಮೂಲಕ ಸಮಾಜವನ್ನು ಎಷ್ಟರ ಮಟ್ಟಿಗೆ ಸುಧಾರಿಸಲು ಸಾಧ್ಯ ಎನ್ನುವ ಪ್ರಶ್ನೆ ಉದಿಸುತ್ತದೆ.

## ನಿಷ್ಪ್ರಯೋಜಕ ಸಂಗತಿಗಳಿಂದ ದೂರವಿರಬೇಕು

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ಅವರು ನಿಷ್ಪ್ರಯೋಜಕವಾದ ಸಂಗತಿಗಳಿಂದೆಲ್ಲ ದೂರವಿದ್ದುಕೊಳ್ಳುತ್ತಾರೆ."** (23:4)

ಬುದ್ಧಿಶಾಲಿಗಳು ನಿಷ್ಪ್ರಯೋಜಕ ಚಟುವಟಿಕೆಗಳಲ್ಲಿ ತಮ್ಮ ಶಕ್ತಿಗಳನ್ನು ವ್ಯರ್ಥವಾಗಿ ಉಪಯೋಗಿಸುವುದಿಲ್ಲ. ಸರಳ ವಿನೋದಕ್ಕೆ ಸಮಯವನ್ನು ವಿನಿಯೋಗಿಸುವುದನ್ನು ಇಸ್ಲಾಮ್ ನಿಷಿದ್ಧಗೊಳಿಸಿಲ್ಲ. ಆದರೆ ಯಾವುದಾದರೂ ವಿನೋದ ಸಮಾಜದ ಮೇಲೆ ಕೆಟ್ಟ ಪ್ರಭಾವ ಬೀರುವುದಾದರೆ ಅದನ್ನು ಖಂಡಿತವಾಗಿಯೂ ಇಸ್ಲಾಮ್ ಅನುಮತಿಸುವುದಿಲ್ಲ. ಜೀವನದ ಬಿಗಿವುಗಳಿಗೆ ನೈಜ ಪರಿಹಾರ ನೀಡುವುದಕ್ಕೆ ಬದಲಾಗಿ ವಿನೋದವೇ ಒಂದು ಜೀವನ ರೀತಿಯಾಗುವಾಗ ಅದನ್ನು ಲಗ್ವ್ (ನಿಷ್ಪ್ರಯೋಜಕ) ಎಂದು ಪವಿತ್ರ ಖುರ್‌ಆನ್ ಖಂಡಿಸುತ್ತದೆ. ದೈನಂದಿನ ಜೀವಿತದ ಮೇಲೆ ಹಸ್ತಕ್ಷೇಪ ನಡೆಸಿ ಸಮಯವನ್ನು ವ್ಯರ್ಥವಾಗಿ ವಿನಿಯೋಗಿಸುವಂತೆ ಮಾಡುವ ವಿನೋದಗಳು ಇಂತಹವುಗಳಾಗಿವೆ.

ಟೆಲಿವಿಶನ್ ಸಮಾಜಕ್ಕೆ ಬಹಳ ಉಪಕಾರ ಮಾಡಿದೆ. ಆದರೆ ಮಕ್ಕಳು ಇಡೀ ದಿನ ಟೆಲಿವಿಶನ್‌ಗೆ ದೃಷ್ಟಿ ಇರಿಸಿ ಕುಳಿತುಕೊಳ್ಳುತ್ತಾರೆ. ಕೆಲಸದಿಂದ ಮನೆಗೆ ಬಂದಾಗ ಪುರುಷರು ಟೆಲಿವಿಶನ್ ಮುಂದೆ

ಕುಳಿತುಕೊಂಡು ಸಮಯ ಕಳೆಯುತ್ತಾರೆ. ಹೀಗೆ ಮಾಡುವಾಗ ಅವರು ಮಕ್ಕಳು, ಪತ್ನಿಯರು, ಸ್ನೇಹಿತರು, ಸಮಾಜ ಮೊದಲಾದುವುಗಳ ಬಗ್ಗೆ ತಮಗಿರುವ ಜವಾಬ್ದಾರಿಗಳನ್ನು ಕಡೆಗಣಿಸುತ್ತಾರೆ. ಟೆಲಿವಿಶನ್ ಆಧುನಿಕ ಕಾಲದ ಶಾಪವಾಗಿ ಪರಿಣಮಿಸಿದೆ. ಟೆಲಿವಿಶನ್ ನೋಡುತ್ತಾ ಎಷ್ಟು ಸಮಯವನ್ನು ವ್ಯರ್ಥವಾಗಿ ಕಳೆಯಲಾಗುತ್ತಿದೆ ಎಂದರೆ ಗುಣದೋಷಗಳನ್ನು ಸರಿಯಾಗಿ ಮನವರಿಕೆ ಮಾಡಲು ಸಾಧ್ಯವಾಗುವುದಿಲ್ಲ.

ಟೆಲಿವಿಶನ್‌ಗಳಲ್ಲಿ ಅಪರಾಧಗಳನ್ನು ಹೇಗೆ ಚಿತ್ರೀಕರಿಸಲಾಗುತ್ತಿದೆ ಎಂದರೆ ಅವುಗಳ ಬಗ್ಗೆ ಮಕ್ಕಳಲ್ಲಿ ಜಿಗುಪ್ಸೆ ಹುಟ್ಟುವುದಕ್ಕೆ ಬದಲಾಗಿ ಅದಕ್ಕೆ ವಿರುದ್ಧವಾದ ಭಾವನೆ ಉಂಟಾಗುತ್ತದೆ. ಅದರಲ್ಲಿ ತೋರಿಸುವ ಅಪರಾಧಗಳನ್ನು ಅನುಕರಿಸಿ ಮನೆಗಳಲ್ಲಿ ಅಶಾಂತಮಯ ಸ್ಥಿತಿ ಉಂಟಾಗುತ್ತದೆ. ಅಂತಹ ಕಾರ್ಯಕ್ರಮಗಳು ಸಂತೋಷದಾಯಕವಾದರೂ ಅವು ಜ್ಞಾನವರ್ಧಕವಲ್ಲ. ಅನೇಕ ಕೆಟ್ಟ ಸ್ವಭಾವದ ಮಕ್ಕಳು ಈ ಕಾರ್ಯಕ್ರಮಗಳಿಂದ ಹುಟ್ಟುತ್ತಾರೆ. ಮಗು ಮುಂದೆ ಅಪರಾಧಿಯಾಗುವ ರೀತಿಯಲ್ಲಿ ಬೆಳೆಯುತ್ತದೆ.

ವಯಸ್ಕರ ಕಾರ್ಯಕ್ರಮಗಳಲ್ಲಿ ಅಪರಾಧ ಮಾಡುವ ಚತುರೋಪಾಯಗಳನ್ನು ಕಲಿಸಲಾಗುತ್ತಿದೆ. ಆಡಂಬರ ಭರಿತ ಸುಖ ಜೀವಿತವನ್ನೂ ತೋರಿಸಿ ಮನಸ್ಸಿನ ಮೇಲೆ ತಪ್ಪು ಪ್ರಭಾವ ಬೀರಲಾಗುತ್ತಿದೆ. ವಾಸ್ತವಿಕತೆ ಮತ್ತು ಮಾಯಾಲೋಕದ ಮಧ್ಯೆ ಇರುವ ವ್ಯತ್ಯಾಸ ಜನರರಿಯುವುದಿಲ್ಲವೆಂಬುದು ಖೇದಕರವಾಗಿದೆ.

ನಿರರ್ಥಕ ವಿನೋದಗಳನ್ನು ಪವಿತ್ರ ಖುರ್‌ಆನ್ ನಿಷಿದ್ಧಗೊಳಿಸಿದುದು ಕೆಲವರು ಭಾವಿಸುವ ಹಾಗೆ ಸಾಮಾನ್ಯ ವಿಷಯವೇನೂ ಅಲ್ಲ. ಈ ನಿರರ್ಥಕ ವಿನೋದಗಳು ಎಂತಹ ವಾತಾವರಣ ಸೃಷ್ಟಿಸುತ್ತದೆ ಎಂದರೆ ಜನರ ನಿರಾಶೆಗಳು ವರ್ಧಿಸುತ್ತಾ ಇರುತ್ತವೆ. ಅದು ಎಲ್ಲಿಯ ತನಕ ತಲಪಬಹುದೆಂಬುದರ ಬಗ್ಗೆ ಆಶ್ಚರ್ಯವಾಗುತ್ತದೆ.

## ಆಶೆಗಳ ನಿಯಂತ್ರಣ

ಪವಿತ್ರ ಖುರ್‌ಆನ್ ಆಶೆಗಳನ್ನು ನಿಯಂತ್ರಿಸಲು ಆವಶ್ಯಪಡುತ್ತದೆ. ಅಸೂಯೆಯಿಂದ ಅಸಾಮಾನ್ಯ ಮತ್ತು ತೃಪ್ತಿ ಪಡೆಯಲಾಗದ ಆಶೆಗಳನ್ನು ಹುಟ್ಟಲುಬಿಡಬಾರದು. ಈ ಉಪದೇಶ ಶಿಸ್ತು ಮತ್ತು ಆಶೆಗಳನ್ನು ಹತೋಟಿಗಿಡುವ ಬಗ್ಗೆ ಸೂಚಿಸುತ್ತದೆ. ಆದರೆ ಇಸ್ಲಾಮ್ ಎಲ್ಲ ಆಶೆಗಳನ್ನು ತ್ಯಜಿಸಿ ಸನ್ಯಾಸವನ್ನು ಕೈಗೊಳ್ಳಲು ಉಪದೇಶಿಸುವುದಿಲ್ಲ. ನಿರ್ವಾಣ ಅಥವಾ ಆಶೆಗಳಿಂದ ಮುಕ್ತಿಯನ್ನು ಇಸ್ಲಾಮ್ ಪ್ರತಿಪಾದಿಸುವುದಿಲ್ಲ. ನಿರ್ವಾಣದ ಸಿದ್ಧಾಂತ ಪ್ರಕಾರ ಆಶೆಗಳು ನಮ್ಮನ್ನು ಲೌಕಿಕ ವಸ್ತುಗಳೊಂದಿಗೆ ಜೋಡಿಸುತ್ತವೆ. ಇದಕ್ಕೆ ಅವರು ನೀಡುವ ಸುಲಭ ಉತ್ತರ: ಆಶೆಗಳನ್ನು ತ್ಯಜಿಸಬೇಕು ಎಂದಾಗಿದೆ.

ಇಸ್ಲಾಮ್ ಇದನ್ನು ಮನುಷ್ಯ ನಿರ್ಮಿತ, ಅಸ್ವಾಭಾವಿಕ ಮತ್ತು ಸಮಸ್ಯೆಗಳನ್ನು ಪರಿಹರಿಸಲು ಅಪರ್ಯಾಪ್ತವೆಂದು ತಿರಸ್ಕರಿಸುತ್ತದೆ. ನಿರ್ವಾಣವು ಶಾಂತಿಗಿಂತ ಮೃತ್ಯುವಿಗೆ ಹೆಚ್ಚು ಸಮೀಪವಾಗಿದೆ. ಇಸ್ಲಾಮ್ ಬೇರೆಯೇ ಪರಿಹಾರ ಮಾರ್ಗವನ್ನು ಸೂಚಿಸುತ್ತದೆ. ಜೀವಿತದ ಪ್ರಶ್ನೆಗಳಿಗೆ ಪರಿಹಾರವಾಗಿ ಆಶೆಗಳನ್ನು ಕೊಲ್ಲುವುದು ಸರಿಯಾಗಲಾರದೆಂದು ಇಸ್ಲಾಮ್ ಪ್ರತಿಪಾದಿಸುತ್ತದೆ.

ಸಾಮಾಜಿಕ ಶಾಂತಿ ಸ್ಥಾಪನೆಗೆ ಇಸ್ಲಾಮ್ ಪ್ರತಿಪಾದಿಸುವ ಕ್ರಮಗಳಲ್ಲಿ ಒಂದು ಆಶೆಗಳನ್ನು ಶಿಸ್ತಿಗೆ ಮತ್ತು ಹತೋಟಿಗೆ ಒಳಪಡಿಸುವುದಾಗಿದೆ. ಆಶೆಗಳ ಈಡೇರಿಸುವಿಕೆ ಮೂಲಕ ಶಾಂತಿಯನ್ನು ಪಡೆಯುವುದು ಅಸಾಧ್ಯವಾಗಿದೆ. ಏಕೆಂದರೆ ಆಶೆಗಳು ಅವುಗಳನ್ನು ಹಿಂಬಾಲಿಸುವುದಕ್ಕಿಂತ ಹೆಚ್ಚು ವೇಗವಾಗಿ ಓಡುತ್ತವೆ. ಈ ಕ್ರಮಗಳು ಚಿಕ್ಕದಾಗಿವೆ ಎಂದು ತೋರಿದರೂ ಅವು ವಾಸ್ತವಿಕವಾಗಿ ಮುಖ್ಯವೂ ಕಾರ್ಯ ಸಾಧಿಸುವಂತಹವುಗಳೂ ಆಗಿವೆ. ಉದಾಹರಣೆಗೆ, ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಅವರ ಪೈಕಿ ಕೆಲವರಿಗೆ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖ ಸೌಕರ್ಯಗಳನ್ನು ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ ನಾವು ಅದನ್ನು ನೀಡಿದ್ದೇವೆ. ನಿನ್ನ ಪ್ರಭುವಿನ ಅನುಗ್ರಹ ಅತ್ಯುತ್ತಮವಾದುದೂ ಶಾಶ್ವತವೂ ಆಗಿದೆ."** (20: 132)

ಅನ್ಯರ ಬಗ್ಗೆ ಕೆಟ್ಟದಾಗಿ ಯೋಚಿಸುವುದನ್ನು, ಅವರ ಬಗ್ಗೆ ತಪಾಸಣೆ ನಡೆಸುವುದನ್ನು ಮತ್ತು ಪರದೂಷಣೆ ಮಾಡುವುದನ್ನು ಇಸ್ಲಾಮ್ ನಿಷಿದ್ಧಗೊಳಿಸಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಎಲೈ ವಿಶ್ವಾಸಿಗಳೇ, ಮಿತಿಮೀರಿ ಸಂಶಯಪಡುವುದರಿಂದ ನೀವು ದೂರವಿರಿ. ನಿಶ್ಚಯವಾಗಿಯೂ ಕೆಲವು ಸಂಶಯಗಳು ಪಾಪಕರವಾಗಿವೆ. ನೀವು ಪರಸ್ಪರ ಗೂಢಚಾರಿಕೆ ಮಾಡಬೇಡಿರಿ. (ಪರಸ್ಪರ) ಬೆನ್ನ ಹಿಂದೆ ದೂಷಿಸಬೇಡಿರಿ. ತನ್ನ ಮೃತ ಸಹೋದರನ ಮಾಂಸವನ್ನು ತಿನ್ನಲು ನಿಮ್ಮಲ್ಲಿ ಯಾರಾದರೂ ಇಷ್ಟಪಡುವನೇ? ಖಂಡಿತವಾಗಿಯೂ ನೀವು ಅದನ್ನು ಅಸಹ್ಯತೆಯಿಂದ ಕಾಣುವಿರಿ. ನೀವು ಅಲ್ಲಾಹನಿಗೆ ಭಯಭಕ್ತಿ ತೋರಿಸಿರಿ. ದಿಟವಾಗಿಯೂ ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ."** (49:13).

## ಅಮಾನತುಗಳ ಸ್ಥಾಪನೆ, ಅಮಾನತುಗಳ ಮತ್ತು ಒಪ್ಪಂದಗಳ ಸಂರಕ್ಷಣೆ

ಇಸ್ಲಾಮಿನ ಸಮಾಜದಲ್ಲಿ ಅಮಾನತುಗಳ ಸ್ಥಾಪನೆ ಬಹಳ ಮುಖ್ಯ ಪಾತ್ರವಹಿಸುತ್ತದೆ. ಅಮಾನತುಗಳ ಮತ್ತು ಒಪ್ಪಂದಗಳಿಗೆ ಭಂಗ ಉಂಟಾಗದಂತೆ ರಕ್ಷಿಸುವುದು ಇಸ್ಲಾಮಿನ ಸಮಾಜದ ಐಕ್ಯತೆಗೆ ಮೂಲಾಧಾರವಾಗಿದೆ ಎಂದು ಗಣಿಸಲಾಗಿದೆ. ಸತ್ಯವಿಶ್ವಾಸಿಗಳ ಗುಣಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ವಿವರಿಸಲಾಗಿದೆ:

**"ಅವರು (ಸತ್ಯವಿಶ್ವಾಸಿಗಳು) ತಮ್ಮ ಅಮಾನತು ಮತ್ತು ಒಡಂಬಡಿಕೆ ಬಗ್ಗೆ ಲಕ್ಷ್ಯವುಳ್ಳವರು."** (23 :9) ♦

**LOVE FOR ALL**
**HATRED FOR NONE**

# ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು – 2



* ಪ್ರೊಫೆಸರ್ ಡಾಕ್ಟರ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್

## ವಿಶ್ವವು ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬರಲಿಲ್ಲ

ವಿಶ್ವವು ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂದಿತು ಎಂದು ಹೇಳುವುದು ಅಂಗೀಕಾರಾರ್ಹವಲ್ಲ. ಏಕೆಂದರೆ ವಿಶ್ವ ವ್ಯವಸ್ಥೆಯಲ್ಲಿ ಕಂಡುಬರುವ ಅಪ್ರತಿಮ ಬುದ್ಧಿಶಾಲಿತ್ವವು ಈ ವಾದವನ್ನು ಪುರಸ್ಕರಿಸುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) **"ಏನು, ನಿಮ್ಮನ್ನು ಸೃಷ್ಟಿಸುವುದು ಕಷ್ಟವೋ? ಅಥವಾ ಅವನು ಸೃಷ್ಟಿಸಿದ ಆಕಾಶವನ್ನೋ?"** (ಪವಿತ್ರ ಖುರ್‌ಆನ್ 79:28) ಎಂಬ ವಚನಕ್ಕೆ ಬರೆದ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

ವಿಶ್ವದ ಸುವ್ಯವಸ್ಥೆಯು ತನ್ನ ಅಸ್ತಿತ್ವಕ್ಕೆ ಸಾಕ್ಷ್ಯಾಧಾರವಾಗಿದೆ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ. ಮಹಾ ಅದ್ಭುತದಿಂದ ಕೂಡಿದ ಈ ಸುವ್ಯವಸ್ಥೆ ಒಬ್ಬ ಸೃಷ್ಟಿಕರ್ತನ ಕೈ ವರ್ತಿಸುತ್ತದೆ ಎಂಬುದನ್ನು ತೋರಿಸುವುದಿಲ್ಲವೇ? ಎಂದು ಅವನು ಕೇಳುತ್ತಾನೆ. ಅದರ ಪ್ರತಿಯೊಂದು ಭಾಗ ಇನ್ನೊಂದು ಭಾಗವನ್ನು ಅವಲಂಬಿಸಿದೆ. ಯಾವುದೂ ಸ್ವತಂತ್ರವಾಗಿಲ್ಲ. ಅಣುಗಳ ಸಂಯೋಜನೆಯಿಂದ ಈ ಅದ್ಭುತಕರವಾದ ವಿಶ್ವವು ಅಸ್ತಿತ್ವಕ್ಕೆ ಬಂದಿತೆಂದು ವಿಜ್ಞಾನಿಗಳು ಹೇಳುತ್ತಾರೆ. ವಿವಿಧ ಅಣುಗಳು ಸರಿಯಾದ ರೀತಿಯಲ್ಲಿ ಒಗ್ಗೂಡಿ ನಮ್ಮ ಆವಶ್ಯಕತೆಗಳನ್ನು ಈಡೇರಿಸಿದವು ಎಂದು ನಾವು ಅಂಗೀಕರಿಸುತ್ತೇವೆ. ಈ ಲೋಕವನ್ನು ಸೃಷ್ಟಿಸಲು ಅಣುಗಳು ಒಟ್ಟಿಗೆ ಸೇರಿದವು ಎಂದು ನಾವು ಒಪ್ಪುತ್ತೇವೆ. ಆದರೆ ದೇವನಿಲ್ಲವಾದರೆ ಅಣುಗಳು ಸರಿಯಾದ ರೀತಿಗಳಲ್ಲಿ ಒಗ್ಗೂಡಿಸಲ್ಪಟ್ಟು ನಮ್ಮ ಆವಶ್ಯಕತೆಗಳು ಈಡೇರುವಂತೆ ಮಾಡಿದುದು ಹೇಗೆ? ಮನುಷ್ಯನ ಆವಶ್ಯಕತೆಗಳು ಈಡೇರುವಂತೆ ಅಣುಗಳು ಒಗ್ಗೂಡಿದುದು ಆಕಸ್ಮಿಕವಾಗಲು ಸಾಧ್ಯವಿಲ್ಲ.

"ಈ ವಿಶ್ವದ ಹಿನ್ನೆಲೆಯಲ್ಲಿ ಬೇರೆ ಒಂದು ಅಸ್ತಿತ್ವ ಕಾರ್ಯನಿರ್ವಹಿಸುತ್ತದೆ ಎಂದು ನಾವು ಒಪ್ಪಿಕೊಳ್ಳಬೇಕು. ಉದಾಹರಣೆಗೆ, ನಾವು ಒಂದು ಸ್ಥಳದಲ್ಲಿ ಒಂದು ಚರ್ಮದ ತುಂಡನ್ನು ಕಂಡರೆ ಅದು ಆಕಸ್ಮಿಕವಾಗಿ ಅಲ್ಲಿಗೆ ಬಂದಿರಬಹುದು ಎಂದು ಹೇಳಬಹುದು. ಆದರೆ ಚರ್ಮವನ್ನು ಬೂಟು, ಸೋಫಾ, ಕುರ್ಚಿ ಮತ್ತು ಇನ್ನಿತರ ಆವಶ್ಯಕತೆಗಳಿಗೆ ಬಳಸಿರುವುದಾಗಿ ಕಂಡರೆ ಅದು ಆಕಸ್ಮಿಕವಾಗಿ ಹಾಗೆ ಸಂಭವಿಸಿತೆಂದು ಹೇಳಲು ಸಾಧ್ಯವಿಲ್ಲ. ಹಾಗೆ ಸಂಪೂರ್ಣವಾದ ಒಂದು ಸುವ್ಯವಸ್ಥೆ ಆಕಸ್ಮಿಕವೆಂದು ಹೇಳಲಾಗದು. ಕಣ್ಣಿನ ಬಗ್ಗೆ ಹೇಳುವುದಾದರೆ, ಸರ್ವಶಕ್ತನಾದ ದೇವನು ಕಣ್ಣನ್ನು ಸೃಷ್ಟಿಸಿದನು. ಅದು ಬೆಳಕಿನ ಸಹಾಯವಿಲ್ಲದೆ ಕಾಣಲಾರದು ಎಂಬ ಗುಣವನ್ನು ಅದರಲ್ಲಿರಿಸಿದನು. ಭೂಮಿಯಿಂದ ಮಿಲಿಯಾಂತರ ಮೈಲುಗಳಷ್ಟು ದೂರ ಸೂರ್ಯನನ್ನು ಸೃಷ್ಟಿಸಿ ನಮ್ಮ ಕಣ್ಣುಗಳು ಕಾಣಲು ಬೆಳಕನ್ನು ಒದಗಿಸಿದನು. ಇದೇ ರೀತಿ ಮನುಷ್ಯನ ಇತರ ಆವಶ್ಯಕತೆಗಳನ್ನು ಈಡೇರಿಸುವ ವ್ಯವಸ್ಥೆ ಮಾಡಲಾಗಿದೆ. ಮನುಷ್ಯನ ಯಾವುದೇ ಸಹಜ ಆವಶ್ಯಕತೆಯನ್ನು ಈಡೇರಿಸುವ ವ್ಯವಸ್ಥೆ ಮಾಡದೆ ಸರ್ವಶಕ್ತನಾದ ದೇವನು ಬಿಟ್ಟಿಲ್ಲ. ಮನುಷ್ಯನ ಕೆಲವು ಆವಶ್ಯಕತೆಗಳು ಈಡೇರುವಂತೆ ಮನುಷ್ಯನಲ್ಲಿಯೇ ವ್ಯವಸ್ಥೆ ಮಾಡಲಾಗಿದೆ. ಕೆಲವು ಆವಶ್ಯಕತೆಗಳು ಅವನ ಹೊರಗಿನ ವಾತಾವರಣದ ಮೂಲಕ ಈಡೇರುತ್ತವೆ. ಬೇರೆ ಕೆಲವು ಆವಶ್ಯಕತೆಗಳು ಈಡೇರುವ ವ್ಯವಸ್ಥೆಯನ್ನು ಮಿಲಿಯಾಂತರ ಮೈಲುಗಳಷ್ಟು ದೂರದಲ್ಲಿ ಏರ್ಪಡಿಸಲಾಗಿದೆ. ಈ ವ್ಯವಸ್ಥೆ ಎಷ್ಟು ಪರಿಪೂರ್ಣವಾಗಿದೆ ಎಂದರೆ ಇಂತಹ ವ್ಯವಸ್ಥೆ ಆಕಸ್ಮಿಕವಾಗಿ ಸಂಭವಿಸಿದೆಂದು ಯಾವ ಮನುಷ್ಯನಿಗೂ ಚಿಂತಿಸಲು ಸಾಧ್ಯವಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: ಓ ಮನುಷ್ಯರೇ, ನೀವು ಭೂಮಿ ಮತ್ತು ಆಕಾಶದಲ್ಲಿ ಮಾಡಲಾದ ಸುವ್ಯವಸ್ಥೆಯನ್ನು ನೋಡಿರಿ. ಅದು ನಿಮ್ಮ ಸೃಷ್ಟಿಯ ಕೆಲಸಕ್ಕಿಂತ ಹೆಚ್ಚು ಕಷ್ಟಕರವಾದುದೆಂದು ಕಾಣಿಸುವುದಿಲ್ಲವೇ? ಒಂದು ವಿಷಯ ಆಕಸ್ಮಿಕವೆಂದು ಹೇಳಬಹುದು. ಎರಡು ಸಂಭವಗಳು ಆಕಸ್ಮಿಕ ಎನ್ನಬಹುದು. ಆದರೆ ಸಂಪೂರ್ಣ ವಿಶ್ವವ್ಯವಸ್ಥೆ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂತು ಎಂದು ಹೇಗೆ ತಾನೇ ಹೇಳಲು ಸಾಧ್ಯ?" (ತಫ್‌ಸೀರ್ ಕಬೀರ್ – ಅಧ್ಯಾಯ 79 ವಚನ 28ರ ವ್ಯಾಖ್ಯಾನ).

ಸರ್ವಶಕ್ತನಾದ ದೇವನ ಅಸ್ತಿತ್ವವನ್ನು ಪ್ರತಿಪಾದಿಸಿ ಪವಿತ್ರ ಖುರ್‌ಆನ್ ಉಲ್ಲೇಖಿಸಿದುದನ್ನು ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರು ಸರಳವಾಗಿ ಮೇಲಿನಂತೆ ವಿವರಿಸಿದುದನ್ನೇ ವಿವಿಧ ವಿಜ್ಞಾನಿಗಳು ವಿವರಿಸಿದ್ದಾರೆ.

ಸರ್ ಐಸಾಕ್ ನ್ಯೂಟನ್ ಲೋಕದಲ್ಲಿ ಜನಿಸಿದ ವಿಜ್ಞಾನಿಗಳಲ್ಲಿ ಅತ್ಯಂತ ಶ್ರೇಷ್ಠರೆಂದು ಗಣಿಸಲ್ಪಟ್ಟಿದ್ದಾರೆ. ಅವರು ಹೇಳುವುದೇನೆಂದರೆ, ದೇವನ ಬಗ್ಗೆ ವಿಶ್ವಾಸವನ್ನು ಹೊಂದದೆ ವಿಶ್ವಸೃಷ್ಟಿಯನ್ನು ವಿವರಿಸಲು ಸಾಧ್ಯವಿಲ್ಲ. ಅವರು ಹೀಗೆ ಹೇಳಿದರು:

"ಸೂರ್ಯ, ಗ್ರಹಗಳು, ಧೂಮಕೇತು ಮೊದಲಾದುವುಗಳ ಸುಂದರ ವ್ಯವಸ್ಥೆ ಬುದ್ಧಿಶಾಲಿಯೂ ಶಕ್ತಿಶಾಲಿಯೂ ಆದ ಒಂದು ಅಸ್ತಿತ್ವದಿಂದಲೇ ಹೊರಬರಲು ಸಾಧ್ಯ." (Our Solar System and Stellar Universe, by Charles Whyte P.131 Charles Griffin & Co. Ltd London 1923).

ವಿಜ್ಞಾನಿ ನ್ಯೂಟನ್‌ರ ಕಾಲಘಟ್ಟದಲ್ಲಿ ನೈಸರ್ಗಿಕ ನಿಯಮಗಳ ಅಧ್ಯಯನವನ್ನು ನೇಚುರಲ್ ಫಿಲಾಸಫಿ (Natural Philosophy) ಎಂದು ಕರೆಯಲಾಗುತ್ತಿತ್ತು. ನ್ಯೂಟನ್ ಪ್ರಕಾರ, ವಿಶ್ವದ ಅಧ್ಯಯನದಿಂದ ದೇವನ ಅಸ್ತಿತ್ವವನ್ನು ನಿಷ್ಕರ್ಷಿಸುವುದು ನ್ಯಾಚುರಲ್ ಫಿಲಾಸಫಿಯ ಕ್ಷೇತ್ರಕ್ಕೆ ಸೇರಿದುದಾಗಿತ್ತು. ಆದರೆ ಮುಂದಿನ

ಕಾಲಘಟ್ಟದಲ್ಲಿ ಜ್ಞಾನವು ವಿವಿಧ ಭಾಗಗಳಾಗಿ ವಿಂಗಡಿಸಲ್ಪಟ್ಟಾಗ ವಿಜ್ಞಾನಿಯ ಅಧ್ಯಯನವು ಪದಾರ್ಥಗಳಿಗೆ ಸೀಮಿತಗೊಳಿಸಲ್ಪಟ್ಟಿತು. ದೇವನು ಇದ್ದಾನೋ ಇಲ್ಲವೋ ಎನ್ನುವ ಪ್ರಶ್ನೆ ವಿಜ್ಞಾನ ಕ್ಷೇತ್ರದಿಂದ ಹೊರಗಿರುವುದಾಗಿ ಗಣಿಸಲ್ಪಟ್ಟಿತು. ಆದರೆ ಇಪ್ಪತ್ತನೆಯ ಶತಮಾನದ ವಿಜ್ಞಾನಿಗಳು ದೇವಾಸ್ತಿತ್ವದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ.

ಇಪ್ಪತ್ತನೆಯ ಶತಮಾನದ ಶ್ರೇಷ್ಠ ಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದ "ಡಾಕ್ಟರ್ ಆಲ್ಬರ್ಟ್ ಐನ್‌ಸ್ಟೈನ್ ಜೊತೆ ಕೆಲಸ ಮಾಡಲು ಸಂದರ್ಭ ಲಭಿಸಿದ್ದ ಡಾಕ್ಟರ್ ಇನ್‌ಫೆಲ್ಡ್, ಐನ್‌ಸ್ಟೈನ್ ಬಗ್ಗೆ ಹೀಗೆ ಹೇಳುತ್ತಾರೆ:

"ಅವರಿಗೆ (ಐನ್‌ಸ್ಟೈನ್‌ರಿಗೆ) ಯಾವುದಾದರೂ ಹೊಸ ಭಾವನೆ ಸ್ಫುರಿಸಿದಾಗ ಅವರು ತನ್ನನ್ನೇ ಹೀಗೆ ಪ್ರಶ್ನಿಸುತ್ತಿದ್ದರು: ದೇವನು ಲೋಕವನ್ನು ಈ ರೀತಿ ಸೃಷ್ಟಿಸಿರಬಹುದೇ? ಅಥವಾ ಈ ಗಣಿತ ಸಿದ್ಧಾಂತ ದೇವನಿಗೆ ಅರ್ಹವಾಗಿದೆಯೇ?" (Quest, by Leopold Infeld, page 212)

ವಿಶ್ವದ ಸೌಂದರ್ಯ ಮತ್ತು ವೈಭವದಿಂದ ಮೋಹಪರವಶರಾಗಿ ಮತ್ತು ಅದರಲ್ಲಿ ಅಡಕವಾದ ಅಗಾಧವಾದ ಬುದ್ಧಿಮತ್ತೆಯಿಂದ ಪ್ರಭಾವಿತರಾಗಿ ಡಾಕ್ಟರ್ ಐನ್‌ಸ್ಟೈನ್ ಹೀಗೆ ಹೇಳುತ್ತಾರೆ:

"ಅತ್ಯಂತ ಸುಂದರ ಮತ್ತು ಅತ್ಯಂತ ಗಾಢವಾದ ಭಾವೋದ್ವೇಗವನ್ನು ನಾವು ಅನುಭವಿಸುತ್ತಿರುವುದು ನಿಗೂಢವಾಗಿದೆ. ಅದು ಎಲ್ಲ ವಿಜ್ಞಾನವನ್ನು ಬಿತ್ತುವಂತಹದ್ದಾಗಿದೆ. ಇಂತಹ ಭಾವೋದ್ವೇಗಗಳಿಗೆ ಅಪರಿಚಿತನಾಗಿರುವವನು, ವಿಶ್ವವನ್ನು ಆಶ್ಚರ್ಯ ಚಕಿತನಾಗಿ ನೋಡಿ ಭಾವಪರವಶನಾಗದವನು ಮೃತ ಸಮಾನನೇ ಆಗಿದ್ದಾನೆ. ನಾವು ಯಾವುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೋ, ಅದು ವಾಸ್ತವಿಕವಾಗಿಯೂ ಇದೆ ಎಂದು ತಿಳಿದುಬರುತ್ತದೆ. ಅದು ಅತ್ಯಂತ ಉನ್ನತ ಮಟ್ಟದ ಬುದ್ಧಿಶಾಲಿತ್ವದಿಂದ ತನ್ನನ್ನು ಪ್ರಕಟಿಸುತ್ತದೆ. ಅದರ ಅತ್ಯಂತ ಪ್ರಕಾಶಮಾನವಾದ ಸೌಂದರ್ಯವನ್ನು ನಮ್ಮ ಮಂದ ಇಂದ್ರಿಯಗಳು ಈ ಜ್ಞಾನವನ್ನು ಪ್ರಾಕೃತ ಮಟ್ಟದಲ್ಲಿಯೇ ಗಳಿಸಲು ಸಾಧ್ಯವಾಗುತ್ತದೆ. ನೈಜ ಧಾರ್ಮಿಕತೆಯ ಕೇಂದ್ರದಲ್ಲಿ ಈ ಭಾವನೆಯು ಇದೆ."

ಅವರು ಪುನಃ ಹೇಳುತ್ತಾರೆ: "ನಮ್ಮ ಧರ್ಮ ಸೀಮಾತೀತ ಶ್ರೇಷ್ಠ ಸ್ಫೂರ್ತಿಯ ಬಗ್ಗೆ ಮೆಚ್ಚಿಗೆ ಸೂಚಿಸುವುದಾಗಿದೆ. ಅದನ್ನು ನಮ್ಮ ಬಲಹೀನ ಮನಸ್ಸು ಅರ್ಥಮಾಡಿಕೊಳ್ಳುವಷ್ಟು ಸ್ವಲ್ಪ ಮಟ್ಟಿಗೆ ವಿವರಣೆಯೊಂದಿಗೆ ತನ್ನನ್ನು ಪ್ರಕಟಿಸುತ್ತದೆ. ಒಂದು ಶ್ರೇಷ್ಠ ವೈಚಾರಿಕ ಶಕ್ತಿಯು ನಾವು ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳಲು ಅಸಾಧ್ಯವಾಗಿ ಈ ವಿಶ್ವದಲ್ಲಿದೆ ಎಂಬ ಗಾಢವಾದ ಭಾವನಾತ್ಮಕ ವಿಶ್ವಾಸ ದೇವನ ಬಗ್ಗೆ ನನ್ನ ಅಭಿಪ್ರಾಯವನ್ನು ರೂಪಿಸುತ್ತದೆ." (The Universe and Dr. Einstein, by Lincoln Benett page 18. Mentor 1950.)

ವಿಶ್ವದ ಉದ್ಭವ ಮತ್ತು ಜೀವೋದಯ ವಿಜ್ಞಾನದ ಎರಡು ಮೂಲಭೂತ ಸಂಶೋಧನೆಯ ಸಮಸ್ಯೆಗಳಾಗಿವೆ. ನಾನು ವಿಶ್ವದ ಉದ್ಭವಕ್ಕೆ ಸಂಬಂಧಿಸಿ ಸೂಚನೆ ನೀಡಿದ್ದೇನೆ. ನಾನು ಜೀವೋದಯದ ವಿಷಯವನ್ನು ಇನ್ನು ಮುಂದೆ ಸ್ವಲ್ಪ ಮಟ್ಟಿಗೆ ವಿವರಿಸುವೆನು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ನೀವು ಅಲ್ಲಾಹನ ಅಸ್ತಿತ್ವವನ್ನು ಹೇಗೆ ಅಲ್ಲಗಳೆಯಬಲ್ಲಿರಿ? ನೀವು ನಿರ್ಜೀವರಾಗಿದ್ದಾಗ ಅವನು ನಿಮಗೆ ಜೀವ ನೀಡಿದನು."** (2:29)

ಇದೇ ವಾದವನ್ನು ನಾವು ಒಬ್ಬ ವಿಜ್ಞಾನಿಯ ಶಬ್ದಗಳಲ್ಲಿ ಆಲಿಸುವ. ಪ್ರಿನ್ಸ್‌ಟನ್ ಯುನಿವರ್ಸಿಟಿಯ ಪ್ರೊಫೆಸರ್ ಎಡ್‌ವಿನ್ ಕೊಂಕ್ಲಿನ್ ಎಂಬ ಪ್ರಸಿದ್ಧ ಜೀವಶಾಸ್ತ್ರಜ್ಞ(ಬಯೋಲಜಿಸ್ಟ್) ಹೀಗೆ ಹೇಳುತ್ತಾರೆ:

"ಜೀವೋದಯವು ಆಕಸ್ಮಿಕವಾಗಿ ಸಂಭವಿಸಿತೆಂದು ಹೇಳುವುದು ಒಂದು ಮುದ್ರಾಣಾಲಯವು ಸ್ಫೋಟಗೊಂಡು ಅದರ ಪರಿಣಾಮವಾಗಿ ಒಂದು ಬೃಹತ್ ನಿಘಂಟು ಅಸ್ತಿತ್ವಕ್ಕೆ ಬಂತು ಎನ್ನುವ ಹಾಗಿದೆ." (Evidence Page 174)

ಈ ಅಭಿಪ್ರಾಯವನ್ನು ಬೆಂಬಲಿಸಿ ರಸಾಯನಶಾಸ್ತ್ರದಲ್ಲಿ ಸಂಶೋಧಕರಾದ ಡಾಕ್ಟರ್ ಎಡ್‌ಮಂಡ್ ಕಾರ್ಲ್ ಕೋರ್ನ್‌ಫೆಲ್ಡ್ ಹೀಗೆ ಹೇಳುತ್ತಾರೆ:

"ನಾನು ನಿಸ್ಸಂಕೋಚವಾಗಿ ಪ್ರೊಫೆಸರ್ ಎಡ್ವಿನ್ ಕೊಂಕ್‌ಲಿನ್‌ರ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ನನ್ನ ದೃಢನಂಬಿಕೆ ಏನೆಂದರೆ ಒಬ್ಬ ದೇವನಿದ್ದಾನೆ, ಅವನು ಯೋಜನೆ ರೂಪಿಸಿ ವಿಶ್ವವನ್ನು ಸೃಷ್ಟಿಸಿದನು ಮತ್ತು ಅವನೇ ಅದನ್ನು ಪಾಲಿಸುತ್ತಿದ್ದಾನೆ."

(Evidence Page 174)

ರಸಾಯನ ಶಾಸ್ತ್ರಕ್ಕೆ ಸಂಬಂಧಿಸಿದ ತನ್ನ ಜ್ಞಾನದ ಬೆಳಕಿನಲ್ಲಿ ಪ್ರೊಫೆಸರ್ ಕೋರ್ನ್‌ಫೆಲ್ಡ್ ಹೀಗೆ ಹೇಳುತ್ತಾರೆ: "ಪ್ರಕೃತಿಯಲ್ಲಿ ಒಂದು ಶ್ರೇಷ್ಠ ಸೃಷ್ಟಿಕಾರಕ ಬುದ್ಧಿ ಇದೆ ಎಂದು ನಾವು ನಂಬುತ್ತೇವೆ ಎಂದು ಒಪ್ಪಿಕೊಳ್ಳುವೆವು. ಹೀಗಲ್ಲವಾದರೆ ವಿಶ್ವವು ಆಕಸ್ಮಿಕವಾಗಿ, ಆಕಸ್ಮಿಕವಾಗಿ ಮಾತ್ರ ಅಸ್ತಿತ್ವಕ್ಕೆ ಬಂದಿತೆಂದು ನಂಬಬೇಕಾದೀತು. ಆಶ್ಚರ್ಯಕರವಾದ ಸಂಕೀರ್ಣತೆಯ ಜೊತೆಗೆ ಕ್ರಮಬದ್ಧತೆಯನ್ನು ಜೀವರಸಾಯನಶಾಸ್ತ್ರದಲ್ಲಿ – ವಿಶಿಷ್ಟವಾಗಿ ಜೀವವ್ಯವಸ್ಥೆಯಲ್ಲಿ – ವೀಕ್ಷಿಸಿದವನಿಗೆ ಆಕಸ್ಮಿಕವೆಂಬ ಅಭಿಪ್ರಾಯ ಅತ್ಯಂತ ಅಸಂಗತವಾದುದಾಗಿದೆ. ಜೀವಕಣಗಳ ರಚನೆಯ ವಿಜ್ಞಾನ ಮತ್ತು ಕಣಗಳ ಪರಸ್ಪರ ಸಂಬಂಧಗಳ ಬಗ್ಗೆ ಅಧ್ಯಯನವನ್ನು ಮುಂದುವರಿಸಿದಂತೆ ಅವುಗಳನ್ನು ನಿರ್ಮಿಸಿದವನ ಆವಶ್ಯಕತೆ ಬಗ್ಗೆ ನಂಬಿಕೆ ವರ್ಧಿಸುತ್ತದೆ...... ಮನುಷ್ಯ ನಿರ್ಮಿತ ಒಂದು ಸರಳ ಉಪಕರಣಕ್ಕೆ ಒಬ್ಬ ಯೋಜನೆಗಾರ ಮತ್ತು ನಿರ್ಮಾಪಕನ ಆವಶ್ಯಕತೆ ಇದೆ. ಹತ್ತುಸಾವಿರ ಪಟ್ಟು ಬೃಹತ್ತಾದ ಮತ್ತು ಅತ್ಯಂತ ಸೂಕ್ಷ್ಮವೂ ಸಂಕೀರ್ಣವೂ ಆಗಿರುವ ಉಪಕರಣ ಸ್ವಯಂ ನಿಯೋಜಿತವೂ ಸ್ವಯಂ ವೃದ್ಧಿಗೊಳಿಸಲ್ಪಟ್ಟದ್ದೂ ಆಗುವುದಾದರೂ ಹೇಗೆ?"

(Evidence - Page 176)

ವಾಗ್ದತ್ತ ಮಸೀಹ್[ಅ] ಚಲೋದಾಗಿ ಹೀಗೆ ಹೇಳಿರುವರು: **"ಓ ನನ್ನ ಪ್ರಿಯ ದೇವಾ, ಪ್ರತಿಯೊಂದು ದಿಕ್ಕಿನಲ್ಲಿ ನಿನ್ನ ಶಕ್ತಿ ಪ್ರದರ್ಶನ ಅದ್ಭುತಕರವಾಗಿದೆ. ನಾವು ಯಾವ ದಿಕ್ಕಿಗೆ ಅಭಿಮುಖೀಕರಿಸಿದರೂ ನಿನ್ನನ್ನು ದರ್ಶಿಸುತ್ತೇವೆ."**

ವಿಜ್ಞಾನಿಗಳು ಪ್ರಕೃತಿ ನಿಯಮಗಳನ್ನು ಕಂಡುಹಿಡಿಯಲು ಪರಿಶ್ರಮಿಸುತ್ತಾರೆ. ನಿಯಮಗಳು ಇರುವುದರಿಂದ ಅವುಗಳನ್ನು ಜಾರಿಗೊಳಿಸಿದವನೊಬ್ಬನಿದ್ದಾನೆಂದು ಸ್ಪಷ್ಟವಾಗುತ್ತದೆ. ಯುನಿವರ್ಸಿಟಿ ಆಫ್ ಮಿನ್ನೆಸೋಟ್‌ನ ಪ್ರೊಫೆಸರ್ ಡಾಕ್ಟರ್ ಜಾನ್ ಕ್ಲೀವ್‌ಲೇಂಡ್ ಕೋರ್‌ತ್ರೇನ್ ಹೀಗೆ ಹೇಳುತ್ತಾರೆ:

"ಪದಾರ್ಥ ಮತ್ತು ಶಕ್ತಿ ಇವುಗಳ ಅಧ್ಯಯನದಿಂದ ಸ್ಥಿರವಾಗಿ ಹಿಂದೆ ತಿಳಿದುಬಂದುದು ಮತ್ತು ಈಗ ತಿಳಿದುಬರುತ್ತಿರುವುದು ಏನೆಂದರೆ ನಿರ್ಜೀವ ಪದಾರ್ಥಗಳು ಸಹ ಪ್ರಕೃತಿ ನಿಯಮಗಳನ್ನು ಅನುಸರಿಸುತ್ತವೆ." (Evidence Page 38)

ಅವರು ಪುನಃ ಹೇಳುತ್ತಾರೆ: "ನಿರ್ಜೀವ ಪದಾರ್ಥಗಳು ಆಕಸ್ಮಿಕವಾಗಿ ಉದ್ಭವಿಸಿದುವು ಎಂದೂ ಈ ವಿಶ್ವ ತಾನಾಗಿಯೇ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂತೆಂದೂ ಅದರ ಸುವ್ಯವಸ್ಥೆ ತಾನಾಗಿಯೇ ಸ್ಥಾಪಿತವಾಯಿತೆಂದೂ ಹೀಗೆಯೇ ತಾನಾಗಿಯೇ ಮುಂದುವರಿಯುವುದೆಂದೂ ಜ್ಞಾನಿಯೂ ವೈಚಾರಿಕನೂ ಆಗಿರುವವನು ನಂಬಲು ಸಾಧ್ಯವೇ? ಖಂಡಿತವಾಗಿಯೂ ಅದರ ಉತ್ತರ 'ಸಾಧ್ಯವಿಲ್ಲ' ಎಂದೇ ಆಗಿದೆ." (Evidence- Page 41).

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ತನ್ನ ಗ್ರಂಥವಾದ "ಹಮಾರಾ ಖುದಾ" ದಲ್ಲಿ ಹೀಗೆ ಬರೆದಿದ್ದಾರೆ:

"ವಿಶ್ವದ ವ್ಯವಸ್ಥೆಯನ್ನು ಅಧ್ಯಯನ ಮಾಡುವಾಗ ಅದು ತಾನಾಗಿಯೇ ಅಸ್ತಿತ್ವಕ್ಕೆ ಬರಲಿಲ್ಲ ಎಂಬ ನಿರ್ಧಾರಕ್ಕೆ ಮನುಷ್ಯನು ಬರುವಂತೆ ಮಾಡುತ್ತದೆ. ಅದು ಮಹೋನ್ನತವಾದ ಒಂದು ಸತ್ತೆಯ ನಿರ್ಧಾರ ಮತ್ತು ಶಕ್ತಿಯ ಮೂಲಕ ಅಸ್ತಿತ್ವಕ್ಕೆ ಬಂತು."

(ಹಮಾರಾಖುದಾ – ಪುಟ 65)

1985ರಲ್ಲಿ ನಾನು ಇಟೆಲಿ ಸಂದರ್ಶಿಸಿದ್ದೆ. 1985 ಒಕ್ಟೋಬರ್ ದಿನಾಂಕ ಒಂದರಂದು ಒಂದು ಸತ್ಕಾರ ಸಮಾರಂಭವನ್ನು, ನಮ್ಮ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರನ್ನು ಗೌರವಿಸಲು ನೋಬೆಲ್ ಪ್ರಶಸ್ತಿ ವಿಜೇತ ಪ್ರೊಫೆಸರ್ ಅಬ್ದುಸ್ಸಲಾಮ್ ಅವರು ವೆರೋನ ನಗರದ ಉತ್ತಮ ಹೋಟೇಲೊಂದರಲ್ಲಿ ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ನಾನು ಸಹ ಹಾಜರಿದ್ದೆನು. ಹಝ್ರತ್ ಖಲೀಫತುಲ್ ಮಸೀಹ್‌ರವರು ವಿಜ್ಞಾನಕ್ಕೆ ಸಂಬಂಧಿಸಿದ ಒಂದು ವಿಷಯದ ಕಡೆಗೆ ತಮ್ಮ ಭಾಷಣದಲ್ಲಿ ಬೆಳಕು ಬೀರಿದರು. ಹುಝೂರರು (ಹಝುರತ್ ಖಲೀಫತುಲ್ ಮಸೀಹ್) ಹೀಗೆ ಹೇಳಿದರು: "ನೀರಿನ ತಾಪಮಾನವನ್ನು ತಗ್ಗಿಸಿದಾಗ ಅದರ ಸಾಂದ್ರತೆ ವರ್ಧಿಸುತ್ತದೆ. ಆದರೆ ನೀರಿನ ತಾಪಮಾನವನ್ನು ನಾಲ್ಕು ಡಿಗ್ರಿ ಸೆಂಟಿಗ್ರೇಡ್‌ಗಿಂತ ತಗ್ಗಿಸಿದಾಗ ನೀರಿನ ಸಾಂದ್ರತೆ ವರ್ಧಿಸುವುದಕ್ಕೆ ಬದಲಾಗಿ ತಗ್ಗುತ್ತದೆ. ಈ ವೈಶಿಷ್ಟ್ಯದ ಕಾರಣದಿಂದ ಚಳಿಗಾಲದಲ್ಲಿ ಸಾಗರ ಹಿಮಾಚ್ಛಾದಿತವಾಗುವಾಗ ಸಾಗರದ ಮೇಲ್ಪದರದಲ್ಲಿರುವ ಹಿಮಗಡ್ಡೆಗಳ ಕೆಳಗೆ ಇರುವ ನೀರಿನ ಸಾಂದ್ರತೆ ಮೇಲ್ಭಾಗದ ಹಿಮಗಡ್ಡೆಗಳ ಸಾಂದ್ರತೆಗಿಂತ ಹೆಚ್ಚಾಗಿರುತ್ತದೆ. ಆದುದರಿಂದ ತೀವ್ರ ಚಳಿಗಾಲದಲ್ಲಿ ಕೂಡ ಜಲಚರಗಳಿಗೆ ನೀರು ದೊರಕುತ್ತದೆ ಮತ್ತು ಅವು ಸುರಕ್ಷಿತವಾಗಿರುತ್ತವೆ. ನೀರಿನ ಈ ಕೌತುಕಕರವಾದ ಗುಣ ದೇವನ ಬುದ್ಧಿಶಾಲಿತ್ವವನ್ನು ಪ್ರಕಟಿಸುತ್ತದೆ ಮತ್ತು ದೇವನಿದ್ದಾನೆಂದು ಸಾಬೀತುಗೊಳಿಸುತ್ತದೆ."

ಕೆನಡದ ಮೆನಿಟೋಬ ಯುನಿವರ್ಸಿಟಿಯ ಬಯೋಫಿಸಿಕ್ಸ್‌ನ ಪ್ರೊಫೆಸರ್ ಡಾಕ್ಟರ್ ಫ್ರಾಂಕ್ ಅಲ್ಲೆನ್, ಮೇಲೆ ಉಲ್ಲೇಖಿಸಿದ ವಿಷಯದ ಬಗ್ಗೆ ತನ್ನ ಪ್ರಬಂಧದಲ್ಲಿ ಗಮನ ಸೆಳೆದಿದ್ದು ಅದು ದೇವನ ಅಸ್ತಿತ್ವಕ್ಕೆ ಸಾಕ್ಷ್ಯಾಧಾರ ಎಂದು ಪ್ರತಿಪಾದಿಸಿದ್ದಾರೆ:

"ನೀರಿನ ನಾಲ್ಕು ವಿಶಿಷ್ಟ ಗುಣಗಳು ಹೀಗಿವೆ– ಕಡಿಮೆ ತಾಪಮಾನದಲ್ಲಿ ಅದು ಆಮ್ಲಜನಕವನ್ನು ಬಹಳ ಪ್ರಮಾಣದಲ್ಲಿ ಹೀರುತ್ತದೆ. ಅದರ ಅತ್ಯಂತ ಹೆಚ್ಚು ಸಾಂದ್ರತೆ 4 ಡಿಗ್ರಿ ಸೆಂಟಿಗ್ರೇಡ್ ತನಕ ಇರುತ್ತದೆ. ಈ ಕಾರಣದಿಂದ ಸರೋವರಗಳೂ ನದಿಗಳೂ ಜಲಮಯವಾಗಿರುತ್ತವೆ. ಹಿಮವು ನೀರಿಗಿಂತ ಕಡಿಮೆ ಸಾಂದ್ರತೆ ಹೊಂದಿರುವುದರಿಂದ ಅದು ನೀರಿನ ಮೇಲೆ ಇರುತ್ತದೆ. ನೀರು ಹಿಮಗಡ್ಡೆಯಾಗುವಾಗ ಉಷ್ಣವು ಬಹಳ ಬಿಡುಗಡೆ ಹೊಂದುತ್ತದೆ. ಅದು ಸಾಗರಗಳಲ್ಲಿ, ಸರೋವರಗಳಲ್ಲಿ ಮತ್ತು ನದಿಗಳಲ್ಲಿ ಜೀವಿಗಳನ್ನು ದೀರ್ಘವಾದ ಚಳಿಗಾಲದಲ್ಲಿ ರಕ್ಷಿಸುತ್ತದೆ."

(The Origin of the World - by Chance or Design? - Evidence page 21)

ಇನ್ನೊಬ್ಬ ವಿಜ್ಞಾನಿ ಡಾಕ್ಟರ್ ತೋಮಸ್ ಡೇವಿಸ್ ಪಾರ್ಕ್ಸ್ (ರಸಾಯನ ಶಾಸ್ತ್ರಜ್ಞ) ಹೀಗೆ ಹೇಳುತ್ತಾರೆ: "ನೀರು ಮಾತ್ರ ಮಂಜುಗಡ್ಡೆಯಾಗುವಾಗ ಹಗುರವಾಗುತ್ತದೆ. ಇದು ಜೀವ ರಕ್ಷಣೆಗೆ ಅತ್ಯಂತ ಮಹತ್ವಪೂರ್ಣವಾಗಿದೆ." (Evidence page 75).

ನೀರು ಮಂಜುಗಡ್ಡೆಯಾಗುವಾಗ ಅದರ ಸಾಂದ್ರತೆ ಕಡಿಮೆಯಾಗುವ ಕಾರಣ ಸಾಗರಗಳಲ್ಲಿರುವ ಜಲಜೀವಿಗಳು ಸುರಕ್ಷಿತವಾಗಿರುತ್ತವೆ. ಇದರ ಹಿನ್ನೆಲೆಯಲ್ಲಿ ಆಗಾಧವಾದ ಬುದ್ಧಿಶಾಲಿತ್ವ ಇರುವುದಾಗಿ ಕಾಣಿಸುವುದಿಲ್ಲವೇ?

ಸಮುದ್ರಗಳಲ್ಲಿರುವ ಮೀನುಗಳಿಗೆ ಮಾತ್ರವಲ್ಲ, ಎಲ್ಲ ಪ್ರಾಣಿಗಳಿಗೋಸ್ಕರ ಸಹ ಯೋಗ್ಯ ವ್ಯವಸ್ಥೆಗಳನ್ನು ಮಾಡಿರುವುದಾಗಿ ನಾವು ಕಾಣುತ್ತೇವೆ. ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ ಒಂದು ಪದ್ಯದಲ್ಲಿ ಇದರ ಬಗ್ಗೆ ಹೀಗೆ ಹೇಳಿದ್ದಾರೆ:

"ಸಾಗರಗಳ ಮೀನುಗಳಿಗೆ, ಹಾರುವ ಪಕ್ಷಿಗಳಿಗೆ,
ಸಾಕು ಪ್ರಾಣಿಗಳಿಗೆ ಮತ್ತು ಕಾಡುಮೃಗಗಳಿಗೆ
ಇವೆಲ್ಲವುಗಳಿಗೂ ಅವನು (ದೇವನು) ಆಹಾರ ಒದಗಿಸುತ್ತಾನೆ.
ಅವನ ಖಜಾನೆಗಳು ಎಂದೂ ಖಾಲಿಯಾಗಲಾರವು.
ಅವನು ಜೀವಂತವಾಗಿದ್ದು, ಇತರರನ್ನು ಜೀವಂತವಾಗಿರಿಸುತ್ತಾನೆ.
ಅವನು ಸ್ವಯಂ ಪೂರ್ಣನಾಗಿದ್ದು ಎಲ್ಲರಿಗೂ ಸಂರಕ್ಷಣೆ ನೀಡುತ್ತಾನೆ."

ನಮ್ಮ ವಿಶ್ವವು ದೀರ್ಘಕಾಲದ ವಿಕಾಸ ಪ್ರಕ್ರಿಯೆಯ ನಂತರ ಇಂದಿನ ಸ್ಥಿತಿಗೆ ತಲುಪಿದೆ. ಅತ್ಯಂತ ಸೂಕ್ಷ್ಮವಾದ ಇಲೆಕ್ಟ್ರೋನುಗಳು ಮತ್ತು ಪ್ರೋಟೋನುಗಳು ಅಣುಗಳಾಗಿಯೂ ಕಣಗಳಾಗಿಯೂ ಪರಿವರ್ತಿತಗೊಂಡವು. ಅನಂತರ ಅಮೀನೋ ಆಮ್ಲಗಳು

ಉತ್ಪಾದಿಸಲ್ಪಟ್ಟು ಜೀವವು ಉದ್ಭವಿಸಿತು. ಕೊನೆಗೆ ಬುದ್ಧಿಶಾಲಿಯಾದ ಮನುಷ್ಯನು ಅಸ್ತಿತ್ವಕ್ಕೆ ಬಂದನು.

ಯು.ಎಸ್.ಎ ಮಿಚಿಗನ್ ಯುನಿವರ್ಸಿಟಿಯ ನ್ಯಾಚುರಲ್ ಸೈಯನ್ಸೆಸ್ ಪ್ರೊಫೆಸರ್ ಮಿಲಿಯಮ್ ನೋಬ್ಲೋಚ್ ಹೀಗೆ ಹೇಳುತ್ತಾರೆ:

"ನಾನು ದೇವನ ಅಸ್ತಿತ್ವವನ್ನು ನಂಬುತ್ತೇನೆ. ಏಕೆಂದರೆ ಪ್ರಥಮ ಪ್ರೋಟೋನುಗಳೂ ಇಲೆಕ್ಟ್ರೋನುಗಳೂ ಆಕಸ್ಮಿಕವಾಗಿ ಉದ್ಭವಿಸಿದವು ಎಂದು ನಾನು ಯೋಚಿಸುವುದಿಲ್ಲ. ಪ್ರಥಮ ಅಣು ಅಥವಾ ಅಮಿನೋ ಆಸಿಡ್ ಅಥವಾ ಪ್ರಥಮ ಜೀವಧಾತು ಅಥವಾ ಪ್ರಥಮ ಬೀಜ ಅಥವಾ ಪ್ರಥಮ ಮೆದುಳು ಆಕಸ್ಮಿಕವಾಗಿ ಉದ್ಭವಿಸಿದುವು ಎಂದು ನಾನು ನಂಬುವುದಿಲ್ಲ. ನಾನು ದೇವನನ್ನು ನಂಬುತ್ತೇನೆ. ಏಕೆಂದರೆ ಪ್ರಪಂಚದಲ್ಲಿರುವ ವಸ್ತುಗಳಿಗೆ ಅವನ ದಿವ್ಯ ಅಸ್ತಿತ್ವವೇ ತರ್ಕಬದ್ಧ ವಿವರಣೆಯಾಗಿದೆ." (Evidence - page 89)

ಈ ವಿಶ್ವವನ್ನು ಜ್ಞಾನಭರಿತ ಬುದ್ಧಿಶಾಲಿಯಾದ ಒಂದು ಶ್ರೇಷ್ಠ ಅಸ್ತಿತ್ವವು ಸೃಷ್ಟಿಸಿದೆ ಎಂದು ನಾವು ಅಂಗೀಕರಿಸುವುದಿಲ್ಲವಾದರೆ ನಾವು ಹೀಗೆ ನಂಬಬೇಕಾಗಬಹುದು: ನಿರ್ಜೀವ ವಸ್ತುಗಳು ನಮಗಿಂತ ಹೆಚ್ಚು ಬುದ್ಧಿಶಾಲಿಗಳಾಗಿವೆ. ಅವುಗಳ ಪರಸ್ಪರ ಸಹಕಾರದಿಂದ ಸೂರ್ಯ, ಚಂದ್ರ, ಪರ್ವತಗಳು ಮತ್ತು ಸಾಗರಗಳು ನಿರ್ಮಿಸಲ್ಪಟ್ಟವು, ಆದರೆ ಇಂದಿನ ಅತ್ಯಂತ ಅಭಿವೃದ್ಧಿ ಹೊಂದಿದ ವೈಜ್ಞಾನಿಕ ಯುಗದಲ್ಲಿ ಕೂಡ ಬುದ್ಧಿಶಾಲಿ ಮನುಷ್ಯರಾದ ನಾವೆಲ್ಲರೂ ಒಗ್ಗೂಡಿ ಒಂದು ಕ್ರಿಮಿಯ ಕಾಲನ್ನು ಕೂಡ ನಿರ್ಮಿಸಲಾರೆವು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ವಿಶ್ವವು ಒಬ್ಬ ಶಕ್ತಿಶಾಲಿ, ಸರ್ವಜ್ಞ ದೇವನ ಅಸ್ತಿತ್ವದ ಕಡೆಗೆ ಸ್ಪಷ್ಟವಾಗಿ ಸೂಚಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**" 'ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದುದು ಯಾರು?' ಎಂದು ನೀನು ಅವರೊಡನೆ ಕೇಳಿದರೆ, 'ಪ್ರತಾಪಶಾಲಿಯೂ ಸರ್ವಜ್ಞನೂ ಆದವನು ಅವುಗಳನ್ನು ಸೃಷ್ಟಿಸಿದ್ದಾನೆ' ಎಂದು ಅವರು ಖಂಡಿತವಾಗಿಯೂ ಹೇಳುವರು."** (43:10).

## ಪ್ರಕೃತಿಯಲ್ಲಿ ಪ್ರಕಟವಾಗುವ ಬುದ್ಧಿಶಾಲಿತ್ವ

ದೇವನ ಸೃಷ್ಟಿಯಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ಪವಿತ್ರ ಖುರ್‌ಆನ್ ಒತ್ತಿ ಹೇಳಿದೆ. ಅದು ಹೀಗೆ ಹೇಳುತ್ತದೆ:

**"ಅವನು (ಅಲ್ಲಾಹನು) ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿರುವನು. ಪರಮ ದಯಾವಂತನ (ಅಲ್ಲಾಹನ) ಸೃಷ್ಟಿ ಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನೂ ನೀನು ಕಾಣಲಾರೆ. ನೀನು ಪುನಃ ನೋಡು. ಏನಾದರೂ ಲೋಪದೋಷವಿದೆಯೋ? ನೀನು ಪುನಃ ಎರಡು ಸಲ ದೃಷ್ಟಿ ಹರಿಸಿ ನೋಡು. ದೃಷ್ಟಿ ಸೋತು, ಬಳಲಿ ನಿನ್ನಡೆಗೆಯೇ ಮರುಳುವುದು."** (67:4, 5)

ಪ್ರಕೃತಿಯು ಪ್ರದರ್ಶಿಸುವ ಅದ್ಭುತ ಬುದ್ಧಿಶಾಲಿತ್ವದ ಕಡೆಗೆ ಪವಿತ್ರ ಖುರ್‌ಆನ್ ಮೇಲಿನಂತೆ ನಮ್ಮ ಗಮನಹರಿಸುತ್ತದೆ. ವಿಶ್ವವು ಆಕಸ್ಮಿಕವಾಗಿ ಸೃಷ್ಟಿಗೊಂಡದ್ದಲ್ಲ, ಒಬ್ಬ ಬುದ್ಧಿಶಾಲಿಯಿಂದ ಅದು ಸೃಷ್ಟಿಸಲ್ಪಟ್ಟಿದೆ ಎಂಬುದಕ್ಕೆ ಇದು ಸಾಕ್ಷ್ಯಾಧಾರವಾಗಿದೆ.

ನಮ್ಮ ಜಮಾಅತ್‌ಗೆ ಸೇರಿದ, 1979ರಲ್ಲಿ ನೋಬೆಲ್ ಪ್ರಶಸ್ತಿ ವಿಜೇತ ಪ್ರಸಿದ್ಧ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮ್ 1981ರಲ್ಲಿ ಭಾರತಕ್ಕೆ ಸಂದರ್ಶನ ನೀಡಿದಾಗ ಇಲ್ಲಸ್ಟ್ರೇಟಡ್ ವೀಕ್ಲೀ ಆಫ್ ಇಂಡಿಯಾ (1981 ಫೆಬ್ರವರಿ 1–7ರ ಸಂಚಿಕೆಯಲ್ಲಿ) ಅವರನ್ನು "ದೇವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವುಳ್ಳ ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ" ಎಂದು ವರ್ಣಿಸಿತು.

ಡಾಕ್ಟರ್ ಅಬ್ದುಸ್ಸಲಾಮ್ ಅವರು ಮೇಲೆ ಉದ್ಧರಿಸಲಾದ ಪವಿತ್ರ ಖುರ್‌ಆನಿನ ಅಧ್ಯಾಯ 67 ವಚನ 4, 5ರ ಬಗ್ಗೆ ಹೀಗೆ ಹೇಳಿದರು:

"ಇದು ಎಲ್ಲ ಭೌತಶಾಸ್ತ್ರಜ್ಞರ ವಾಸ್ತವಿಕ ವಿಶ್ವಾಸವೇ ಆಗಿದೆ. ಈ ವಿಶ್ವಾಸ ನಮ್ಮನ್ನು ಉತ್ತೇಜಿಸುತ್ತದೆ ಮತ್ತು ನಮ್ಮ ಕೆಲಸದಲ್ಲಿ ಸ್ಥಿರತೆಯಿಂದ ಮುಂದುವರಿಸುತ್ತದೆ. ನಾವು ತಳಸ್ಪರ್ಶಿಯಾಗಿ ಸಂಶೋಧನೆ ನಡೆಸುವಾಗ ನಮ್ಮ ಆಶ್ಚರ್ಯ ಉತ್ತೇಜಿಸಲ್ಪಡುತ್ತದೆ. ನಾವು ವೀಕ್ಷಿಸುವಾಗ ನಮ್ಮ ವಿಸ್ಮಯ ವರ್ಧಿಸುತ್ತದೆ."

(Review of Religions Vol 76 p 139 June 1981)

ಇನ್ನೊಬ್ಬ ನೋಬೆಲ್ ಪ್ರಶಸ್ತಿ ವಿಜೇತ, ಎಸ್ಟ್ರೋಫಿಸಿಕ್ಸ್‌ನಲ್ಲಿ ಅತ್ಯಂತ ನಿಷ್ಣಾತರಾದ ವಿಜ್ಞಾನಿಗಳಲ್ಲಿ ಒಬ್ಬರಾದ ಪ್ರೊಫೆಸರ್ ಎಸ್. ಚಂದ್ರಶೇಖರ್ ಪ್ರಕೃತಿಯ ಬಗ್ಗೆ ಹೀಗೆ ಹೇಳುತ್ತಾರೆ:

"ಪ್ರಕೃತಿ ನಮಗೆ ಪದೇ ಪದೇ ತೋರಿಸಿಕೊಟ್ಟಿರುವುದೇನೆಂದರೆ, ಪ್ರಕೃತಿಯೊಳಗೆ ಅಡಕವಾದ ಸತ್ಯಗಳು ಅತ್ಯಂತ ಶಕ್ತಿಶಾಲಿ ಬುದ್ಧಿಶಕ್ತಿಗೆ ನಿಲುಕದುದಾಗಿವೆ........ ಪ್ರಕೃತಿಯನ್ನು ಅರಿತುಕೊಳ್ಳಲು ವಿನಯಭಾವದಿಂದ ವರ್ತಿಸುವುದು ವಿಜ್ಞಾನದ ಅಧ್ಯಯನದ ಮುಂದುವರಿಕೆಗೆ ಮೊದಲು ಆವಶ್ಯಕವಾದ ಶರತ್ತಾಗಿದೆ ಎಂದು ನಾನು ಭಾವಿಸುತ್ತೇನೆ." (Span, February 1983)

## ವಿಜ್ಞಾನದ ಮೂಲಕ ಸರ್ವಶಕ್ತನ ಕಡೆಗೆ

ಜೀವಶಾಸ್ತ್ರ ವಿಜ್ಞಾನಿಯಾದ ಡಾಕ್ಟರ್ ಆಲ್ಬರ್ಟ್ ಮೆಕ್‌ಕೂಂಟ್ಸ್ ವಿಂಚೆಸ್ಟರ್ ಹೀಗೆ ಹೇಳುತ್ತಾರೆ:

".....ವಿಜ್ಞಾನ ಕ್ಷೇತ್ರಗಳಲ್ಲಿ ಅನೇಕ ವರ್ಷ ಅಧ್ಯಯನ ಮತ್ತು ಕೆಲಸ ಮಾಡಿದ ನಂತರ ದೇವನ ಬಗ್ಗೆ ನನ್ನ ವಿಶ್ವಾಸ ಅಲುಗಾಡುವ ಬದಲಾಗಿ ಹೆಚ್ಚು ಬಲಿಷ್ಠವಾಗಿದೆ ಮತ್ತು ಮೊದಲಿಗಿಂತ ಹೆಚ್ಚು ಭದ್ರವಾದ ಅಸ್ತಿಭಾರವನ್ನು ಹೊಂದಿದೆ. ಪರಮೋನ್ನತ ಅಸ್ತಿತ್ವದ ವೈಭವ ಮತ್ತು ಅನಂತ ಶಕ್ತಿಯ ಬಗ್ಗೆ ವಿಜ್ಞಾನವು ಅಂತರ್‌ದೃಷ್ಟಿಯನ್ನು ನೀಡುತ್ತದೆ ಮತ್ತು ಪ್ರತಿಯೊಂದು ಹೊಸ ಕಂಡುಹಿಡಿತದೊಂದಿಗೆ ಅದು ಬಲಯುತವಾಗುತ್ತದೆ." (Evidence - page 65)

ಮಹಾವಿಜ್ಞಾನಿಯಾದ ಗೆಲಿಲಿಯೋ ಟೆಲೆಸ್ಕೋಪ್ ಮುಖಾಂತರ ಆಕಾಶಗಂಗೆಯ ನಕ್ಷತ್ರಗಳನ್ನೂ ವಿವಿಧ ಗ್ರಹಗಳ ಉಪಗ್ರಹಗಳನ್ನೂ ವೀಕ್ಷಿಸಿದ ನಂತರ ಹೀಗೆ ಬರೆದನು:

"ನಾನು ಅತ್ಯಂತ ಆಶ್ಚರ್ಯಚಕಿತನಾದೆನು. ಇಂತಹ ಮಹಾ ಅದ್ಭುತಗಳನ್ನು ಕಂಡುಹಿಡಿಯಲು ನನಗೆ ಅನುಮತಿ ನೀಡಿದ ದೇವನಿಗೆ ನಾನು ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ."

(The Growth of Physical Science by Sir James Jeans Page 173, Cambridge 1951)

ದೆಹಲಿಯ ಇಸ್ಲಾಮಿಕ್ ಸೆಂಟರಿನ ಮೌಲಾನ ವಹೀದುದ್ದೀನ್ ಖಾನ್ ಒಂದು ಉತ್ತಮ ಪುಸ್ತಕವನ್ನು "GOD ARISES" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. (ಪ್ರಕಾಶಕರು: Maktaba Al Risala, C- 29, Nizamuddin West, New Delhi, 1987)

ಈ ಪುಸ್ತಕದಲ್ಲಿ ವೈಜ್ಞಾನಿಕ ಸಾಕ್ಷ್ಯಗಳನ್ನು ಮತ್ತು ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಹೇಳಿಕೆಗಳನ್ನು ಸಂಗ್ರಹಿಸಲಾಗಿದೆ. ಈ ಪುಸ್ತಕದಲ್ಲಿ ಒಂದು ಕುತೂಹಲದಾಯಕ ಘಟನೆಯನ್ನು ವಿವರಿಸಲಾಗಿದೆ. ಅದನ್ನು ನಾನು ಇಲ್ಲಿ ಉಲ್ಲೇಖಿಸುವೆನು. ಅಲ್ಲಾಮ ಇನಾಯತುಲ್ಲಾ ಖಾನ್ ಮಶ್‌ರಿಖೀ 1909ರಲ್ಲಿ ಇಂಗ್ಲೆಂಡಿಗೆ ಸಂದರ್ಶನ ನೀಡಿದ್ದರು. ಒಂದು ಆದಿತ್ಯವಾರ ಬಿರುಸಾದ ಮಳೆ ಸುರಿಯುತ್ತಿದ್ದಾಗ ಸರ್ ಜೇಮ್ಸ್ ಜೀನ್ಸ್ ಎಂಬ ಕ್ಯಾಂಬ್ರಿಜ್ ಯುನಿವರ್ಸಿಟಿಯ ಖಗೋಳಶಾಸ್ತ್ರ ವಿಜ್ಞಾನಿ ಬೈಬಲ್ ಗ್ರಂಥವನ್ನು ಕಂಕುಳಲ್ಲಿ ಇರಿಸಿಕೊಂಡು ಹೋಗುವುದನ್ನು ಇನಾಯಿತುಲ್ಲಾ ಖಾನ್ ಕಂಡಾಗ, ಅಂತಹ ಪ್ರಸಿದ್ಧ ವಿಜ್ಞಾನಿ ಚರ್ಚ್‌ಗೆ ಪ್ರಾರ್ಥನೆಗೆ ಹೋಗುತ್ತಿರುವ ಬಗ್ಗೆ ಆಶ್ಚರ್ಯ ಸೂಚಿಸಿದರು. ಸರ್ ಜೇಮ್ಸ್, ಇನಾಯತುಲ್ಲಾರೊಂದಿಗೆ ಸಂಜೆ ತನ್ನ ಮನೆಗೆ ತನ್ನೊಂದಿಗೆ ಚಾ ಕುಡಿಯಲು ಬರಬೇಕೆಂದು ಹೇಳಿದರು. ಇನಾಯತುಲ್ಲಾ ಖಾನ್ ಸಂಜೆ ಮನೆಗೆ ಹೋದಾಗ ಸರ್ ಜೇಮ್ಸ್ ಯೋಚನಾ ಮಗ್ನರಾಗಿದ್ದರು. ಅವರು ಕೇಳಿದರು: ನಿಮ್ಮ ಪ್ರಶ್ನೆ ಏನು? ಸರ್ ಜೇಮ್ಸ್ ಉತ್ತರಕ್ಕೆ ಕಾಯದೆ ಆಕಾಶ ಕಾಯಗಳ ಸೃಷ್ಟಿಯ ಬಗ್ಗೆ ಆಸಕ್ತಿದಾಯಕ ವಿವರಣೆ ನೀಡಿದರು. ಅವುಗಳ ಚಲನೆ ಮತ್ತು ಅವುಗಳ ಆಶ್ಚರ್ಯಕರ ಕ್ರಮಬದ್ಧತೆಯನ್ನು ವಿಶದೀಕರಿಸಿದರು. ಅವರ ಮಾತುಗಳು ಮತ್ತು ಅವರ ಶರೀರ ಭಂಗಿ ಅವರು ದೇವನ ಶಕ್ತಿ ಮತ್ತು ವೈಭವದಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ ಎಂದು ತೋರಿಸುತ್ತಿದ್ದವು. ಅವರು ಹೇಳಿದರು: ಇನಾಯತುಲ್ಲಾ ಖಾನ್, ನೀವು ತಿಳಿದುಕೊಳ್ಳಿರಿ ನಾನು ದೇವನ ಅದ್ಭುತಕರ ಸೃಷ್ಟಿಕಾರ್ಯಗಳನ್ನು ವೀಕ್ಷಿಸುವಾಗ ನನ್ನ ಶರೀರ ಭಯಭೀತಿಯಿಂದ ನಡುಗುತ್ತದೆ. ನಾನು ಚರ್ಚ್‌ಗೆ ಹೋಗಿ ತಲೆಬಾಗಿಸಿ ಹೇಳುತ್ತೇನೆ – "ಪ್ರಭೂ, ನೀನೆಷ್ಟು ಮಹಾನ್ ಆಗಿರುವೆ." ಹೀಗೆ ಹೇಳುವಾಗ ನನ್ನ ತುಟಿಗಳು ಮಾತ್ರವಲ್ಲ, ನನ್ನ ಶರೀರದ ಪ್ರತಿಯೊಂದು ಕಣ ಈ ಶಬ್ದಗಳನ್ನು ಉಚ್ಚರಿಸಲು ಸೇರಿಕೊಳ್ಳುತ್ತದೆ. ನನಗೆ ಪ್ರಾರ್ಥನೆಯಿಂದ ಅವಿಶ್ವಸನೀಯ ಸಂತೋಷ ಮತ್ತು ಶಾಂತಿ ದೊರಕುತ್ತದೆ. ಅನ್ಯರಿಗೆ ಹೋಲಿಸಿದರೆ ನನಗೆ ಸಾವಿರಪಟ್ಟು ಹೆಚ್ಚು ಪರಿಪೂರ್ಣತೆ ನನ್ನ ಪ್ರಾರ್ಥನೆಗಳಿಂದ ಲಭಿಸುತ್ತದೆ. ಇನಾಯತುಲ್ಲಾ ಖಾನ್, ಈಗ ನೀವು ಹೇಳಿರಿ, ನಾನು ಚರ್ಚ್‌ಗೆ ಹೋಗುವುದೇಕೆಂದು ನಿಮಗೆ ಮನವರಿಕೆ ಆಗಿದೆಯೋ?

ಸರ್ ಜೇಮ್ಸ್‌ರೊಂದಿಗೆ ಇನಾಯತುಲ್ಲಾ ಖಾನ್ ಹೇಳಿದರು: ನಿಮ್ಮ ಮಾತುಗಳು ನನಗೆ ಪವಿತ್ರ ಖುರ್‌ಆನಿನ ಒಂದು ವಚನವನ್ನು ನೆನಪಿಸುವಂತೆ ಮಾಡುತ್ತದೆ. ನೀವು ಅನುಮತಿ ನೀಡುವುದಾದರೆ ನಾನು ಅದನ್ನು ಉಲ್ಲೇಖಿಸುವೆನು. ಸರ್ ಜೇಮ್ಸ್ ಹೇಳಿದರು: ಆ ವಚನವನ್ನು ಉಲ್ಲೇಖಿಸಿರಿ. ಇನಾಯತುಲ್ಲಾ ಖಾನ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಉಲ್ಲೇಖಿಸಿದರು:

**"ಪರ್ವತಗಳ ಪೈಕಿ ಕೆಲವು ಬಿಳಿ, ಕೆಂಪು ಮತ್ತು ವಿವಿಧ ಛಾಯೆಗಳಿಂದ ಕೂಡಿರುತ್ತವೆ. ಇನ್ನು ಕೆಲವು ಕಡುಕಪ್ಪಾಗಿರುತ್ತವೆ. ಇದೇ ರೀತಿ ಮನುಷ್ಯರಲ್ಲೂ ಜಂತುಗಳಲ್ಲೂ ಜಾನುವಾರುಗಳಲ್ಲೂ ಹಲವು ವರ್ಣಗಳಿವೆ. ಅವನ ದಾಸರ ಪೈಕಿ ಜ್ಞಾನವುಳ್ಳವರು ಮಾತ್ರ ಅಲ್ಲಾಹನಿಗೆ ಭಯಪಡುತ್ತಾರೆ."** (35:28–29)

ಪವಿತ್ರ ಖುರ್‌ಆನಿನ ಈ ವಚನಗಳನ್ನು ಆಲಿಸಿ ಸರ್ ಜೇಮ್ಸ್ ಬಹಳ ಪ್ರಭಾವಿತರಾದರು. ಅವರು ಆಶ್ಚರ್ಯಗೊಂಡು ಹೇಳಿದರು:

"ನೀವು ಉಲ್ಲೇಖಿಸಿದುದೇನು? ಜ್ಞಾನವುಳ್ಳವರು ಮಾತ್ರ ದೇವನಿಗೆ ಭಯಪಡುತ್ತಾರೆಂದು ಹೇಳಲಾಗಿದೆ. ಆಶ್ಚರ್ಯಕರ! ಅಸಾಧಾರಣವಾಗಿದೆ! ಐವತ್ತು ವರ್ಷಗಳ ಕಾಲ ಅಧ್ಯಯನ ಮುಂದುವರಿಸಿದುದರ ಫಲವಾಗಿ ನಾನು ಈ ಸತ್ಯವನ್ನು ಮನವರಿಕೆ ಮಾಡಿಕೊಂಡಿದ್ದೇನೆ. ಇದನ್ನು (ಹಝ್‌ರತ್) ಮುಹಮ್ಮದರಿಗೆ ಯಾರು ಕಲಿಸಿದರು? ಈ ವಚನ ವಾಸ್ತವಿಕವಾಗಿಯೂ ಪವಿತ್ರ ಖುರ್‌ನ್‌ನಲ್ಲಿ ಇದೆಯೋ? ಅದು ಪವಿತ್ರ ಖುರ್‌ಆನ್‌ನಲ್ಲಿದ್ದರೆ, ಪವಿತ್ರ ಖುರ್‌ಆನ್ ಅವತೀರ್ಣಗೊಂಡ ಗ್ರಂಥ ಎಂಬ ನನ್ನ ಸಾಕ್ಷ್ಯ ದಾಖಲಿಸಿರಿ. (ಹಝ್‌ರತ್) ಮುಹಮ್ಮದ್ ನಿರಕ್ಷರಿಯಾಗಿದ್ದರು. ಅವರು ಸ್ವತಃ ಈ ಅತ್ಯಂತ ಮುಖ್ಯ ಸತ್ಯವನ್ನು ಕಲಿತಿರಲಾರರು. ದೇವನೇ ಅವರಿಗೆ ಇದನ್ನು ಕಲಿಸಿ ಕೊಟ್ಟಿರಬೇಕು. ಅವಿಶ್ವಸನೀಯ! ಎಷ್ಟು ಅಸಾಧಾರಣವಾಗಿದೆ ಇದು!" (God Arises- page 215)

[ಈ ಘಟನೆಯನ್ನು ನುಕೂಶೆ ಶಖ್ಸಿಯಾತ್ ಎಂಬ ಗ್ರಂಥದಿಂದ (ಪುಟ 1208 – 1209) ಪಡೆದು ಉಲ್ಲೇಖಿಸಲಾಗಿದೆ.]

"ಅವನ ದಾಸರ ಪೈಕಿ ಜ್ಞಾನವುಳ್ಳವರು ಮಾತ್ರ ಅಲ್ಲಾಹನಿಗೆ ಭಯಪಡುತ್ತಾರೆ" ಎಂಬ ಪವಿತ್ರ ಖುರ್‌ಆನ್ ವಚನ ಗಹನವಾದ ಒಂದು ಸತ್ಯವನ್ನು ಪ್ರಕಟಿಸುತ್ತದೆ. ವಿಶ್ವವನ್ನು ಅಧ್ಯಯನ ಮಾಡುವುದರಿಂದ ದೇವನ ಅಸ್ತಿತ್ವದ ಬಗ್ಗೆ ನಿಷ್ಕರ್ಷಿಸಬಹುದಲ್ಲದೆ, ಅವನಲ್ಲಿ ನಮಗೆ ಪ್ರೀತಿ ಮತ್ತು ಭಯವನ್ನು ಉಂಟುಮಾಡುತ್ತದೆ. (ಪವಿತ್ರ ಖುರ್‌ಆನ್ 2:164–165 ನೋಡಿರಿ.)

ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಜ್ಞಾನವನ್ನು ನಾವು ವಿಜ್ಞಾನದ ಮೂಲಕ ಗಳಿಸುತ್ತಿರುವುದರಿಂದ ನಮ್ಮ ಜಮಾಅತಿನ ತೃತೀಯ ಖಲೀಫರಾಗಿದ್ದ ಹಝ್‌ರತ್ ಮಿರ್ಝಾ ನಾಸಿರ್ ಅಹ್ಮದ್ ವಿಜ್ಞಾನ ಕ್ಷೇತ್ರದ ಬಗ್ಗೆ ಬಹಳ ಆಸಕ್ತಿ ಹೊಂದಿದ್ದರು. ನಮ್ಮ ಜಮಾಅತಿನ ಪ್ರೊಫೆಸರ್ ಅಬ್ದುಸ್ಸಲಾಮರು ನೋಬೆಲ್ ಪ್ರೈಝ್ ಗಳಿಸಿದಾಗ ಅವರು ತುಂಬಾ ಸಂತೋಷಗೊಂಡಿದ್ದರು. ಎಲ್ಲ ಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು.

ವಾಗ್ದತ್ತ ಮಸೀಹರು(ಅ) ತನ್ನ ಒಂದು ಪದ್ಯದಲ್ಲಿ ಅಲ್ಲಾಹನ ಸೃಷ್ಟಿ ವೈಭವದ ಕುರಿತು ಪ್ರಶಂಸಿಸಿ ತನ್ನ ಹೃದಯದಲ್ಲಿ ಅಲ್ಲಾಹನ ಬಗ್ಗೆ ಇರುವ ಪ್ರೇಮದ ಬಗ್ಗೆ ಹೀಗೆ ಹೇಳುತ್ತಾರೆ:

"ಆ ದೇದೀಪ್ಯಮಾನವಾದ ಸೌಂದರ್ಯದ ಬಗ್ಗೆ ನಮ್ಮ ಹೃದಯದಲ್ಲಿ ಉತ್ಕಟ ಉತ್ಸಾಹವಿದೆ.

ನಮ್ಮೊಂದಿಗೆ ತುರ್ಕಿಗಳ ಅಥವಾ ತಾರ್ತಾರಿಗಳ ಸೌಂದರ್ಯದ ಬಗ್ಗೆ ಹೇಳಬೇಡಿರಿ."

ವಾಗ್ದತ್ತ ಮಸೀಹ್(ಅ) ತನ್ನ ಸುಂದರ ಪದ್ಯವನ್ನು ಹೀಗೆ ಕೊನೆಗೊಳಿಸುತ್ತಾರೆ:

"ನಿನ್ನ ಮಾರ್ಗದಲ್ಲಿ ಮೊರೆಗಳು ಎಷ್ಟು ಉಚ್ಚ ಸ್ವರದಲ್ಲಿವೆ? ಬೇಗನೆ ಆಲಿಸು.

ಇಲ್ಲವಾದರೆ ನಿನ್ನ ಪ್ರೀತಿಯಲ್ಲಿ ಮನುಷ್ಯನೊಬ್ಬ ಜೀವ ಕಳಕೊಳ್ಳಬಹುದು. (ದುರ್ರೆ ಸಮೀನ್)

## ದೇವನು ಸ್ವತಃ ತಾನು ಸೃಷ್ಟಿಕರ್ತನೆಂದು ಹೇಳುತ್ತಾನೆ

ವಿಶ್ವದ ಬಗ್ಗೆ ಚಿಂತಿಸಿ ನಾವು ದೇವನ ಅಸ್ತಿತ್ವದ ಬಗ್ಗೆ ವೈಚಾರಿಕ ಸಾಕ್ಷ್ಯಾಧಾರಗಳನ್ನು ಪಡೆಯುತ್ತೇವೆ. ಆದರೆ ದೇವನು ಸ್ವತಃ ತನ್ನ ಅಸ್ತಿತ್ವದ ಬಗ್ಗೆ ಆಧ್ಯಾತ್ಮಿಕ ಸಾಕ್ಷ್ಯಾಧಾರಗಳನ್ನು ತನ್ನ ಸಂದೇಶವಾಹಕರಿಗೆ ಸಂದೇಶವಾಣಿಗಳನ್ನು ಅವತೀರ್ಣಗೊಳಿಸುತ್ತಾ ನೀಡುತ್ತಾನೆ. ಇದು ಪುರಾತನ ಕಾಲದಿಂದಲೇ ಜಾರಿಯಲ್ಲಿದೆ ಮತ್ತು ದೇವನು ತನ್ನ ಸಂದೇಶವಾಹಕರ ಮೂಲಕ ತಾನು ಮಾತ್ರ ಸೃಷ್ಟಿಕರ್ತನೆಂದು ತಿಳಿಸುತ್ತಾ ಇರುತ್ತಾನೆ. ಒಂದು ಕಡೆ ವಿಜ್ಞಾನ ದೇವನ ಅಸ್ತಿತ್ವವನ್ನು ಸೂಚಿಸುತ್ತಿರುವಾಗ ಇನ್ನೊಂದು ಕಡೆ ದೇವನೇ ಸ್ವತಃ ತಾನಿದ್ದೇನೆಂದು ಪ್ರಕಟಿಸುತ್ತಾನೆ.

"ಎವಿಡೆನ್ಸ್" ಎಂಬ ಪುಸ್ತಕದಲ್ಲಿ ವಿಜ್ಞಾನಿಗಳಿಗೆ ದೊರೆತ ದೈವಿಕ ವಾಣಿಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ, ಅಮೇರಿಕದ ಗಣಿತ ಶಾಸ್ತ್ರಜ್ಞ ಮತ್ತು ಖಗೋಳ ವಿಜ್ಞಾನಿ ಡಾಕ್ಟರ್ ಮೆರ್ಲಿನ್ ಗ್ರಾಂಟ್ ಸ್ಮಿತ್ ಹೀಗೆ ಹೇಳುತ್ತಾರೆ: "ದೇವನು ಮನುಷ್ಯನೊಂದಿಗೆ ಮಾತನಾಡಬಲ್ಲನು. ಮನುಷ್ಯನು ಕೂಡ ದೇವನೊಂದಿಗೆ ಮಾತನಾಡಬಲ್ಲ. ದೇವನು ಹೇಳಿದ ಪ್ರಥಮ ಮಾತೇನೆಂದರೆ, ಮನುಷ್ಯನನ್ನು ಆಶ್ಚರ್ಯಕರ, ಅಪರಿಮಿತ, ವಿಶ್ವವನ್ನು ಅವನ ಸುತ್ತಲೂ ಸೃಷ್ಟಿಸಿದವನು ದೇವನೆಂದಾಗಿದೆ." (Evidence- page 150)

ನಮ್ಮ ಆದರಣೀಯ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ದೊರೆತ ಪ್ರಥಮ ಸಂದೇಶವಾಣಿ, ದೇವನು ನಮ್ಮ ಸೃಷ್ಟಿಕರ್ತನೆಂದಾಗಿದೆ. (ಪವಿತ್ರ ಖುರ್‌ಆನ್ 96:2, 3 ನೋಡಿರಿ.)

ಇಂದಿನ ಕಾಲಘಟ್ಟದಲ್ಲಿ ಸೃಷ್ಟಿಕರ್ತನು ವಾಗ್ದತ್ತ ಮಸೀಹರೊಂದಿಗೆ ಧಾರಾಳ ಮಾತನಾಡಿರುವನು. ಅವರು ಹೀಗೆ ಹೇಳುತ್ತಾರೆ:

"ನಿಶ್ಚಯವಾಗಿಯೂ ದೇವನನ್ನು ಗಳಿಸಬಹುದಾದುದು ದೇವನ ಮೂಲಕವೇ ಆಗಿದೆ. ನಮ್ಮೊಂದಿಗೆ ಮಾತನಾಡುವ ಮೂಲಕ ಅವನು ತನ್ನ ಅಸ್ತಿತ್ವವನ್ನು ನಮಗೆ ಮನವರಿಕೆ ಮಾಡಿಕೊಡುತ್ತಾನೆ."

ಸಾತ್ವಿಕರಾದ ಜನರು ಗಳಿಸುವ ಅನುಭವದ ಮೂಲಕ, ಎಂದರೆ ದೇವನು ಅವರೊಂದಿಗೆ ಮಾತನಾಡುವ ಕಾರಣ ದೇವನ ಅಸ್ತಿತ್ವದ ಬಗ್ಗೆ ಅನುಭವಾತ್ಮಕ ಅಸ್ತಿಭಾರ ಹಾಕಲ್ಪಡುತ್ತದೆ. ದೇವನು ಹಿಂದಿನ ಕಾಲದಲ್ಲಿ ಮಾತನಾಡುತ್ತಿದ್ದ, ಹಾಗೆ ಇಂದಿನ ಕಾಲದಲ್ಲೂ ಮಾತನಾಡುತ್ತಾನೆಂದು ವಾಗ್ದತ್ತ ಮಸೀಹರು(ಅ) ಒತ್ತಿಹೇಳಿದರು. (ಉದಾಹರಣೆಗೆ "ಇಸ್ಲಾಂ ಧರ್ಮ ತತ್ವಜ್ಞಾನ" ನೋಡಿರಿ.) ಅವರು ಹೀಗೆ ಹೇಳಿದರು:

"ನಾವು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸಾವಿರಾರು ದುರೂದ್ ಪ್ರಾರ್ಥನೆ ಕೋರುತ್ತೇವೆ. ಅವರ ಮೂಲಕವೇ ನಾವು ಜೀವಂತ ದೇವನನ್ನು ಕಂಡೆವು. ಅವನು ತನ್ನ ಅಸ್ತಿತ್ವವನ್ನು ತನ್ನ ವಾಣಿಯ ಮೂಲಕ ಬಹಿರಂಗಪಡಿಸುತ್ತಾನೆ. ಅವನು ಅಸಾಧಾರಣವಾದ ದೃಷ್ಟಾಂತಗಳ ಮೂಲಕ ತನ್ನ ಅನಂತ ಶಕ್ತಿಯನ್ನು ಪ್ರದರ್ಶಿಸಿ ತನ್ನ ಹೊಳೆಯುತ್ತಿರುವ ವದನವನ್ನು ತೋರಿಸುತ್ತಾನೆ."
(The Essence of Islam, Vol 1 page 28)

ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸರ್ವಶಕ್ತನಾದ ಅಲ್ಲಾಹನು ಅತ್ಯಂತ ತೇಜೋಮಯವೂ ಪರಮೋನ್ನತವೂ ಆಗಿರುವ ಶಬ್ದಗಳ ಮೂಲಕ ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ತಾನು ವಿಶ್ವವನ್ನೂ ನಮ್ಮೆಲ್ಲರನ್ನೂ ಸೃಷ್ಟಿಸಿರುವನೆಂದು ತಿಳಿಸಿರುವನು. ಪವಿತ್ರ ಖುರ್‌ಆನಿನಲ್ಲಿ ಅಡಕವಾದ ಆ ವಚನಗಳಲ್ಲಿ ಕೆಲವನ್ನು ನಿಮ್ಮ ಮುಂದಿರಿಸುತ್ತೇನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿರುವನು:

"ಓ ಜನರೇ, ನಿಮ್ಮನ್ನೂ ನಿಮಗಿಂತ ಮುಂಚಿನವರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವನ್ನು ಆರಾಧಿಸಿರಿ." (2:22)

"ಅಲ್ಲಾಹನು ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನು." (14:33)

"ಅಲ್ಲಾಹನು ಆಕಾಶಗಳನ್ನೂ, ಭೂಮಿಯನ್ನೂ ಅವುಗಳ ಮಧ್ಯದಲ್ಲಿರುವ ಎಲ್ಲವನ್ನೂ ಸೃಷ್ಟಿಸಿದನು." (32:5)

"ಅಲ್ಲಾಹನು ಏಳು ಆಕಾಶಗಳನ್ನೂ ಭೂಮಿಯಲ್ಲಿ ಅವುಗಳಿಗೆ ಸಮಾನವಾದುದನ್ನೂ ಸೃಷ್ಟಿಸಿದವನಾಗಿದ್ದಾನೆ." (65:13)

"ಅಲ್ಲಾಹನು ನೀವು ಕಾಣುವಂತಹ ಸ್ತಂಭಗಳಿಲ್ಲದೆ ಆಕಾಶಗಳನ್ನು ಉನ್ನತಿಯಲ್ಲಿ ಇಟ್ಟಿರುವನು." (13:3)

"ಅಲ್ಲಾಹನು ಆಕಾಶಗಳನ್ನೂ ಭೂಮಿಯನ್ನೂ ಯಥೋಚಿತವಾಗಿ ಸೃಷ್ಟಿಸಿದ್ದಾನೆ. ವಿಶ್ವಾಸಿಗಳಿಗೆ ಅದರಲ್ಲಿ ನಿಶ್ಚಯವಾಗಿಯೂ ದೃಷ್ಟಾಂತವಿದೆ." (29:45)

"ಹೇಳು: ಸರ್ವ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹನೇ ಆಗಿದ್ದಾನೆ. ಅವನು ಏಕನು, ಪರಮಾಧಿಕಾರ ಹೊಂದಿದವನು." (13:17)

"ಅಲ್ಲಾಹನು ಸರ್ವವಸ್ತುಗಳ ಸೃಷ್ಟಿಕರ್ತನು. ಸಕಲವಸ್ತುಗಳ ಸಂರಕ್ಷಕನೂ ಅವನೇ." (39:63)

"ಅಲ್ಲಾಹನ ಹೊರತು ಆಕಾಶದಿಂದಾಗಲಿ, ಭೂಮಿಯಿಂದಾಗಲಿ ನಿಮಗೆ ಆಹಾರವನ್ನು ಒದಗಿಸುವ ಬೇರೆ ಯಾವನಾದರೂ ಸೃಷ್ಟಿಕರ್ತ

ಇದ್ದಾನೆಯೇ?" (35:4)

"ಅವನೇ ಅಲ್ಲಾಹನು. ಅವನು ಸೃಷ್ಟಿಕರ್ತನೂ ನಿರ್ಮಾಪಕನೂ ರೂಪಕೊಡುವವನೂ ಆಗಿದ್ದಾನೆ. ಬಲು ಸುಂದರವಾದ ಹೆಸರುಗಳು ಅವನಿಗಿವೆ." (59:25)

"ಎಲ್ಲ ಜೋಡಿಗಳನ್ನು ಸೃಷ್ಟಿಸಿದ ಅವನು ಪವಿತ್ರನು." (36:37)

"ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿರುವ ಹಾಗೂ (ಎಲ್ಲತರ) ಅಂಧಕಾರಗಳನ್ನೂ ಪ್ರಕಾಶವನ್ನೂ ಉಂಟುಮಾಡಿರುವ ಅಲ್ಲಾಹನಿಗೆ ಸರ್ವಸ್ತುತಿಗಳು." (6:2)

"ಎಲ್ಲ ಸ್ತುತಿಸ್ತೋತ್ರಗಳು ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನಿಗೆ." (35:2)

"ಆಕಾಶದಲ್ಲಿ ನಕ್ಷತ್ರ ಪುಂಜವನ್ನೂ ಪ್ರಜ್ವಲಿಸುವ ಸೂರ್ಯನನ್ನೂ ಪ್ರಕಾಶಿಸುವ ಚಂದ್ರನನ್ನೂ ಸೃಷ್ಟಿಸಿದವನು ಅನುಗ್ರಹಪೂರ್ಣನು." (25:62)

"ಹೀಗೆ ಅತ್ಯುತ್ತಮವಾಗಿ ಸೃಷ್ಟಿಸುವ ಅಲ್ಲಾಹನು ಅನುಗ್ರಹಪೂರ್ಣನು." (23:15)

"ನಿಶ್ಚಯವಾಗಿಯೂ ನಿನ್ನ ಪ್ರಭು ಮಹಾ ಸೃಷ್ಟಿಕರ್ತನೂ ಸರ್ವಜ್ಞನೂ ಆಗಿದ್ದಾನೆ." (15:87)

"ಪ್ರತಿಯೊಂದು ವಸ್ತುವನ್ನು ಅದರ ಸರಿಯಾದ ರೂಪದಲ್ಲಿ ಸೃಷ್ಟಿಸಿ, ಅನಂತರ ಅದಕ್ಕೆ ಮಾರ್ಗದರ್ಶನ ನೀಡಿದವನು ನಮ್ಮ ಪ್ರಭು." (20:51)

"ನಾವು ನಿಮ್ಮನ್ನು ಸೃಷ್ಟಿಸಿ ನಿಮಗೆ ರೂಪ ಕೊಟ್ಟೆವು. ಅನಂತರ ನಾವು, 'ಆದಮನ ಅನುಸರಣೆ ಮಾಡಿರಿ' ಎಂದು ದೇವದೂತರೊಡನೆ ಹೇಳಿದೆವು." (7:12)

"ನಾವೇ ನಿಮ್ಮನ್ನು ಸೃಷ್ಟಿಸಿದ್ದು. ಮತ್ತೆ ನೀವೇಕೆ ಅದನ್ನು ಒಪ್ಪುವುದಿಲ್ಲ? ನೀವು ಸುರಿಸುವ ವೀರ್ಯದ ಬಗ್ಗೆ ಯೋಚಿಸಿದ್ದೀರಾ? ಏನು, ಅದನ್ನು ಸೃಷ್ಟಿಸುವವರು ನೀವೋ? ಅಥವಾ ಅದರ ಸೃಷ್ಟಿಕರ್ತರು ನಾವೋ?" (56: 58–60)

"ಸರ್ವೋನ್ನತನಾದ ನಿನ್ನ ಪ್ರಭುವಿನ ನಾಮವನ್ನು ಪ್ರಕೀರ್ತನವಾಡು. ಅವನು ಸೃಷ್ಟಿಸುತ್ತಾನೆ ಮತ್ತು ಪರಿಪೂರ್ಣಗೊಳಿಸುತ್ತಾನೆ. ಅವನು ರೂಪಕೊಡುತ್ತಾನೆ ಮತ್ತು ಮಾರ್ಗದರ್ಶನ ನೀಡುತ್ತಾನೆ." (87:2–4)

"ಸರ್ವವನ್ನೂ ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು. ಅವನು ಮನುಷ್ಯನನ್ನು (ಗರ್ಭಾಶಯದಲ್ಲಿ) ಅಂಟಿಕೊಳ್ಳುವ ಮಾಂಸ ಪಿಂಡದಿಂದ ಸೃಷ್ಟಿಸಿದನು. ಪಠಿಸು, ನಿನ್ನ ಪ್ರಭು ಅತಿ ಕೀರ್ತಿವಂತನಾಗಿದ್ದಾನೆ. ಅವನು ಲೇಖನಿಯಿಂದ ಕಲಿಸಿದನು. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ (ಮನುಷ್ಯನಿಗೆ) ಕಲಿಸಿದನು." (96:2–6)

"ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಕುರಿತು ನಿಮಗೆ ಸಂಶಯವೇ?" (14:11)

ಕೊನೆಯದಾಗಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರ ಈ ಕೆಳಗಿನ ಪದ್ಯದೊಂದಿಗೆ ಮುಕ್ತಾಯಗೊಳಿಸುತ್ತೇನೆ:

"ರಾತ್ರಿ ಹಗಲು ನಾನು ಹೇಳುವುದು ಹೀಗೆಯೇ ಆಗಿದೆ – ಈ ವಿಶ್ವಕ್ಕೊರ್ವ ದೇವನಿರುವನೆಂದು."

♦

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಶಾಂತಿ ಸ್ಥಾಪನೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳು ಮತ್ತು ಅವರ ಉತ್ತಮ ಮಾದರಿ

♦ **ಮೌಲಾನಾ ಮುಹಮ್ಮದ್ ಇನಾಮ್ ಘೋರಿ**

**"ಅಲ್ಲಾಹನು ಅದರ ಮೂಲಕ (ಎಂದರೆ ಪ್ರಕಾಶಮಾನವಾದ ಗ್ರಂಥವಾಗಿರುವ ಪವಿತ್ರ ಖುರ್‌ಆನ್ ಮೂಲಕ) ತನ್ನ ಸಂಪ್ರೀತಿಯನ್ನು ಬಯಸುವವರಿಗೆ ರಕ್ಷಾ ಮಾರ್ಗದೆಡೆಗೆ ದಾರಿ ತೋರಿಸುತ್ತಾನೆ. ತನ್ನ ಇಚ್ಛಾನುಸಾರ ಅವನು ಅವರನ್ನು ಅಂಧಕಾರಗಳಿಂದೆಲ್ಲ ಹೊರಗೆ ತಂದು ಪ್ರಕಾಶದೆಡೆಗೆ ಕೊಂಡೊಯ್ಯುತ್ತಾನೆ ಹಾಗೂ ಅವರಿಗೆ ಸತ್ಪಥದೆಡೆಗೆ ದಾರಿ ತೋರಿಸುತ್ತಾನೆ."** (ಪವಿತ್ರ ಖುರ್‌ಆನ್ 5:17).

ಇಸ್ಲಾಮ್ ಪದದ ಅರ್ಥ ಶಾಂತಿ ಮತ್ತು ಸುರಕ್ಷೆ ಎಂದಾಗಿದೆ. ಇಸ್ಲಾಮ್ ಧರ್ಮದ ಸ್ಥಾಪಕರಾದ ಹಝ್ರತ್ ಪೈಗಂಬರ್(ಸ) ಜಾಗತಿಕ ಶಾಂತಿ ಮತ್ತು ಸುರಕ್ಷೆಯ ಸಂದೇಶವಾಹಕರಾಗಿದ್ದಾರೆ.

ನೆನಪಿಡಬೇಕಾದುದೇನೆಂದರೆ ಶಾಂತಿ, ಸುಖ ಮತ್ತು ನೆಮ್ಮದಿ ಮೂಲತಃ ಎರಡು ರೀತಿಗಳಲ್ಲಿರುತ್ತದೆ. ಒಂದು, ವೈಯಕ್ತಿಕ ಶಾಂತಿ. ಎರಡು, ಸಾಮೂಹಿಕ ಶಾಂತಿ. ವೈಯಕ್ತಿಕ ಶಾಂತಿ ಮನುಷ್ಯನ ಹೃದಯ, ಮಸ್ತಿಷ್ಕ, ಶಾರೀರಿಕ ಆರೋಗ್ಯ, ತನ್ನ ಕುಟುಂಬದ ಸದಸ್ಯರೊಂದಿಗೆ ಅವನ ಸಂಬಂಧ, ಅವನ ಹೊಣೆಗಾರಿಕೆಗಳು, ಅವನ ವೃತ್ತಿಯ ವಲಯ ಮೊದಲಾದುವುಗಳಿಗೆ ಸಂಬಂಧಿಸಿರುತ್ತದೆ. ಸಾಮೂಹಿಕ ಶಾಂತಿ, ಮನುಷ್ಯನ ಸಾಮಾಜಿಕ ಜೀವಿತ, ಅವನ ಬಡಾವಣೆ, ಅವನ ನಗರ, ಅವನ ದೇಶ ಮತ್ತು ಲೋಕದ ಶಾಂತಿಯೊಂದಿಗೆ ಸಂಬಂಧಿಸಿರುತ್ತದೆ.

ಪ್ರತಿಯೊಬ್ಬ ಮನುಷ್ಯನು ಶಾಂತಿ ಮತ್ತು ನೆಮ್ಮದಿ ಭರಿತ ಜೀವಿತ ನಡೆಸಲು ಇಚ್ಛಿಸುತ್ತಾನೆ. ಅವನ ಸ್ವಂತ ಆರೋಗ್ಯ ಚೆನ್ನಾಗಿರಬೇಕು, ಯೋಗ್ಯವಾದ ಆಹಾರ ಲಭಿಸಬೇಕು, ವಾಸ್ತವ್ಯಕ್ಕೆ ಯೋಗ್ಯ ವ್ಯವಸ್ಥೆ ಆಗಬೇಕು, ಒಳ್ಳೆಯ ಪತ್ನಿ ಲಭಿಸಬೇಕು, ಒಳ್ಳೆಯವರಾದ ಸಾತ್ವಿಕರಾದ ಮಕ್ಕಳು ದಯಪಾಲಿಸಲ್ಪಡಬೇಕು ಎಂದು ಮನುಷ್ಯನು ಇಚ್ಛಿಸುತ್ತಾನೆ. ತನ್ನ ತಂದೆ ತಾಯಂದಿರು, ಸಹೋದರ ಸಹೋದರಿಯರು, ಇತರ ಸಂಬಂಧಿಕರು, ದೂರ ಮತ್ತು ಸಮೀಪದ ಎಲ್ಲರೂ ಸುಖವಾಗಿರಲಿ, ಪರಸ್ಪರ ಜಗಳಗಳು ಇಲ್ಲದಿರಲಿ ಎಂದು ಸಹ ಆಶಿಸುತ್ತಾನೆ.

ನಾಗರಿಕ ಸಮಾಜದ ಪ್ರತಿಯೊಬ್ಬ ವ್ಯಕ್ತಿ ಅವನು ವಿದ್ಯಾವಂತನಾಗಿದ್ದರೂ ವಿದ್ಯೆರಹಿತನಾಗಿದ್ದರೂ ಶ್ರೀಮಂತನಾಗಿದ್ದರೂ ಬಡವನಾಗಿದ್ದರೂ ಬಿಳಿ ವರ್ಣದವನಾಗಿದ್ದರೂ ಕಪ್ಪು ವರ್ಣದವನಾಗಿದ್ದರೂ ಅರಬಿ ವಂಶಜನಾದರೂ ಅನರಬಿ ವಂಶಜನಾದರೂ ಪೂರ್ವ ದೇಶಗಳಿಗೆ ಸೇರಿದವನಾಗಿದ್ದರೂ ಪಶ್ಚಿಮ ದೇಶಗಳಿಗೆ ಸೇರಿದವನಾಗಿದ್ದರೂ ಇಚ್ಛಿಸುವುದು ತನಗೆ ಶಾಂತಿ ಸುಖ ಸಮಾಧಾನ ಭರಿತ ಜೀವಿತ ಲಭಿಸಬೇಕೆಂದಾಗಿದೆ. ತನ್ನ ಸುಖಕ್ಕೋಸ್ಕರ ಇತರರನ್ನು ಅವನು ಕಷ್ಟಕ್ಕೀಡಾಗುವಂತೆ ಮಾಡುತ್ತಾನೆ. ಸ್ವಾರ್ಥ ಲಾಭಕ್ಕೋಸ್ಕರ ಅನ್ಯರಿಗೆ ಹಾನಿಯುನ್ನುಂಟುಮಾಡಲು ಹಿಂಜರಿಯುವುದಿಲ್ಲ. ಇನ್ನೊಬ್ಬ ವ್ಯಕ್ತಿ ಸಹ ತನ್ನ ಸ್ವಂತ ಸುಖಕ್ಕೋಸ್ಕರ, ತನ್ನ ಕಷ್ಟವನ್ನು ನಿವಾರಿಸಲಿಕ್ಕೋಸ್ಕರ, ತನಗಾಗುವ ಹಾನಿಯನ್ನು ನಿವಾರಿಸಲು ತನ್ನೊಂದಿಗೆ ವರ್ತಿಸಿದ, ಮೊದಲು ಪ್ರಸ್ತಾಪಿಸಿದ ವ್ಯಕ್ತಿಯ ಹಾಗೆಯೇ ವರ್ತಿಸುತ್ತಾನೆ. ಈ ರೀತಿ ಇಬ್ಬಗೆಯ ಅಶಾಂತಿಯ ಸರಪಳಿ ಪ್ರಾರಂಭವಾಗುತ್ತದೆ. ವೈಯಕ್ತಿಕ ಅಶಾಂತಿಯು ಮನೆಯಿಂದ ಹೊರಟು ಬಡಾವಣೆಯನ್ನೂ ಬಡಾವಣೆಯಿಂದ ಪಟ್ಟಣವನ್ನೂ ಪಟ್ಟಣದಿಂದ ದೇಶಕ್ಕೂ ವ್ಯಾಪಿಸುತ್ತದೆ. ಈ ಅಶಾಂತಿ ಪರಿಸ್ಥಿತಿಗಳೇ ದಿನಗಳೆದಂತೆ ಅಂತರ್‍ರಾಷ್ಟ್ರೀಯ ಅಶಾಂತಿಯಾಗಿ ಪರಿಣಮಿಸುತ್ತದೆ.

ಇದೊಂದು ಕಟ್ಟು ಕಥೆಯಲ್ಲ, ವಾಸ್ತವಿಕವಾಗಿದೆ. ನಾವು ಲೋಕದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಿಗೆ ದೃಷ್ಟಿ ಹಾಯಿಸುವುದಾದರೆ ತಿಳಿಯುತ್ತದೆ – ಜಾಗತಿಕ ಅಶಾಂತಿ ಹಗಲಿನ ನೆಮ್ಮದಿಯನ್ನೂ ರಾತ್ರಿಯ ನಿದ್ರೆಯನ್ನೂ ಕೆಡಿಸಿದೆ ಎನ್ನುವುದು ನಿರಾಕರಿಸಲಾಗದ ವಾಸ್ತವಿಕತೆಯಾಗಿದೆ. ಇದು ಎಲ್ಲರೂ ಅಂಗೀಕರಿಸುವ ವಿಷಯವಾಗಿದ್ದು ಪ್ರಿಂಟ್ ಮೀಡಿಯಾ, ಇಲೆಕ್ಟ್ರೋನಿಕ್ ಮೀಡಿಯಾ ಸೋಶಿಯಲ್ ಮೀಡಿಯಾದ ವೇದಿಕೆಗಳಲ್ಲಿ ಇದರ ಬಗ್ಗೆ ಬೊಬ್ಬೆ ಹಾಕಲಾಗುತ್ತಿದೆ.

ಈಗ ಎದ್ದೇಳುವ ಪ್ರಶ್ನೆ ಏನೆಂದರೆ ವೈಯಕ್ತಿಕ, ಸಾಮುದಾಯಿಕ ಮತ್ತು ಅಂತರ್‍ರಾಷ್ಟ್ರೀಯ ಶಾಂತಿ ಹೇಗೆ ಸ್ಥಾಪಿಸಬಹುದು? ಇದಕ್ಕಿರುವ ಉತ್ತರ ಇದಾಗಿದೆ: ಕೇವಲ ಪ್ರಕಟಣೆಗಳನ್ನು ನೀಡುವ ಮೂಲಕ ಮತ್ತು ಘೋಷಣೆಗಳನ್ನು ಕೂಗುವ ಮೂಲಕ ಈ ಸಮಸ್ಯೆ ಪರಿಹರಿಸಲ್ಪಡಲಾರದು. ಸಕ್ರಿಯ ಕ್ರಮಗಳು ಆವಶ್ಯಕವಾಗಿದೆ. ಈ ಪ್ರಕ್ರಿಯೆ ಮನೆಯಿಂದ ಪ್ರಾರಂಭಿಸಿ, ನೆರೆಹೊರೆಯವರಿಗೆ, ಬಡಾವಣೆಯವರಿಗೆ, ನಗರ ವಾಸಿಗಳಿಗೆ, ದೇಶವಾಸಿಗಳಿಗೆ ವಿಸ್ತರಿಸಿ ಅಂತರ್‍ರಾಷ್ಟ್ರೀಯ ಹಂತಕ್ಕೆ ತಲಪುವ ಮತ್ತು ತಲಪಿಸುವ ಆವಶ್ಯಕತೆ ಇರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿ ಮಾನವೀಯತೆಗೆ ಹಿತಕಾರಿಯಾಗಿದ್ದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಜೀವನ ಚರಿತ್ರೆಯ ಮೇಲೆ ದೃಷ್ಟಿ ಹಾಯಿಸುತ್ತೇವೆ ಮತ್ತು ಶಾಂತಿ ಸ್ಥಾಪನೆ ಬಗ್ಗೆ ಇಸ್ಲಾಮಿನ ಉಪದೇಶಗಳು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಮ ಮಾದರಿಗೆ ಸಂಬಂಧಿಸಿ ಸ್ವಲ್ಪ ವಿವರಿಸುತ್ತೇವೆ.

## ಮನೆಗಳಲ್ಲಿ ಶಾಂತಿ:

ಮೊತ್ತಮೊದಲು ನೋಡಬೇಕಾದುದು ಮನೆಗಳಲ್ಲಿ ಶಾಂತಿಯನ್ನು ಸ್ಥಾಪಿಸುವುದು ಹೇಗೆಂದು. ಇದಕ್ಕೆ ಸಂಬಂಧಿಸಿ ಪತಿ–ಪತ್ನಿಯರ ಹಕ್ಕುಗಳ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ಗಮನ ಹರಿಸಬೇಕಾಗಿದೆ. ಒಬ್ಬರಿನ್ನೊಬ್ಬರ ಭಾವನೆಗಳ ಬಗ್ಗೆ ಗಮನವಿರಿಸುವುದು ಆವಶ್ಯಕವಾಗಿದೆ. ತನ್ನ ಸುಖದ ಮೇಲೆ ತನ್ನ ಜೊತೆಗಾರ್ತಿ ಅಥವಾ ಜೊತೆಗಾರನ ಸುಖದ ಬಗ್ಗೆ ಆದ್ಯತೆ

ನೀಡಬೇಕಾಗಿದೆ. ಹಾಗೆ ಮಾಡದಿದ್ದರೆ ಪ್ರತಿದಿನ ಪತಿ ಪತ್ನಿಯರ ಮಧ್ಯೆ ಜಗಳ ಪ್ರಾರಂಭವಾಗಿ ಮನೆಯ ಶಾಂತಿ ಕೆಟ್ಟುಹೋಗುತ್ತದೆ. ಅದು ಮಕ್ಕಳ ತರಬೇತಿಯ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ. ಅದರ ಬಗ್ಗೆ ಹೆಚ್ಚು ವಿವರಿಸಲು ಈಗ ಸಾಧ್ಯವಾಗದು. ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶಾಂತಿ ಭರಿತ ಗೃಹ ಜೀವನಕ್ಕೆ ಸಂಬಂಧಿಸಿದ ಕೆಲವು ಹದೀಸುಗಳನ್ನು ನಿಮ್ಮ ಮುಂದಿರಿಸುತ್ತೇನೆ.

1. ತಿರ್ಮಿಧಿಯಲ್ಲಿರುವ ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳುತ್ತಾರೆ: ನಿಮ್ಮ ಮನೆಯಲ್ಲಿರುವವರೊಂದಿಗೆ ಉತ್ತಮವಾಗಿ ವರ್ತಿಸುವವನೇ ನಿಮ್ಮ ಪೈಕಿ ಉತ್ತಮನಾಗಿದ್ದಾನೆ. ನಾನು ನಿಮಗಿಂತ ಮಿಗಿಲಾಗಿ ನನ್ನ ಮನೆಯಲ್ಲಿರುವವರೊಂದಿಗೆ ಉತ್ತಮವಾಗಿ ವರ್ತಿಸುವವನಾಗಿದ್ದೇನೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ತರಬೇತಿಯನ್ನು ನೀಡಲಿಕ್ಕಾಗಿ ಮತ್ತು ಸಾಮುದಾಯಿಕ ಆವಶ್ಯಕತೆಗಳನ್ನು ಈಡೇರಿಸಲು ಹಲವು ವಿವಾಹಗಳನ್ನು ಮಾಡಬೇಕಾಯಿತು. ಒಮ್ಮೆ ಒಂಬತ್ತು ಪತ್ನಿಯರು ಅವರ ಮನೆಗಳಲ್ಲಿದ್ದರು. ಅವರೆಲ್ಲರೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಮ ವರ್ತನೆ ಮತ್ತು ನ್ಯಾಯನಿಷ್ಠೆಯ ಕಾರಣದಿಂದ ತೃಪ್ತಿಯಿಂದ ಜೀವಿಸುತ್ತಿದ್ದರು.

2. ಮುಸ್ಲಿಮ್ ಹದೀಸು ಗ್ರಂಥದಲ್ಲಿರುವ ಒಂದು ಹದೀಸಿನಲ್ಲಿ ತ್ಯಾಗ ಮನೋಭಾವವನ್ನು ಬೋಧಿಸುತ್ತಾ ಪತಿ–ಪತ್ನಿಯರು ಒಬ್ಬರಿನ್ನೊಬ್ಬರ ಒಳಿತುಗಳನ್ನು ಅನ್ವೇಷಿಸಬೇಕೆಂದು ಉಪದೇಶಿಸುತ್ತಾ ಹೀಗೆ ಹೇಳಿದ್ದಾರೆ:

ನಿಮಗೆ ಇನ್ನೊಬ್ಬರಲ್ಲಿ ಯಾವುದಾದರೂ ನ್ಯೂನತೆ ಕಂಡರೆ ಮತ್ತು ಅವರ ವರ್ತನೆ ನಿಮಗೆ ಇಷ್ಟಕರವಾಗಿರದಿದ್ದರೆ ನೀವು ನಿಮಗೆ ಇಷ್ಟವಾಗುವ ಅವರ ವರ್ತನೆಗಳ ಬಗ್ಗೆ ಲಕ್ಷ್ಯ ನೀಡಿ ತ್ಯಾಗ ಮನೋಭಾವದಿಂದ ಅವರೊಂದಿಗೆ ವರ್ತಿಸಿ ಸೌಹಾರ್ದದ ವಾತಾವರಣವನ್ನು ಸೃಷ್ಟಿಸಬೇಕು.

3. ಮಸ್‌ನದ್ ಅಹ್ಮದ್ ಹದೀಸು ಗ್ರಂಥದಲ್ಲಿರುವ ಇನ್ನೊಂದು ಹದೀಸು ಹೀಗಿದೆ – ಹಝ್ರತ್ ಆಯಿಶಾ ರಳಿಯಲ್ಲಾಹು ಅನ್‌ಹಾರೊಂದಿಗೆ ಒಬ್ಬರು ಕೇಳಿದರು: ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮನೆಯಲ್ಲಿ ಏನು ಮಾಡುತ್ತಿದ್ದರು? ಹಝ್ರತ್ ಆಯಿಶ(ರ) ಹೇಳಿದರು: ಅವರು ಇತರ ಎಲ್ಲ ಮನುಷ್ಯರ ಹಾಗೆ ಒಬ್ಬ ಮನುಷ್ಯರಾಗಿದ್ದರು. ಅವರು ಬಟ್ಟೆಗಳಿಗೆ ಸ್ವತಃ ತೇಪೆ ಹಾಕುತ್ತಿದ್ದರು. ಹೆಣ್ಣಾಡಿನ ಹಾಲು ಸ್ವತಃ ಹಿಂಡುತ್ತಿದ್ದರು. ಅವರು ಸ್ವಂತ ಕೆಲಸ ತಾನೇ ಮಾಡುತ್ತಿದ್ದರು.

4. ಮುಸ್ಲಿಮ್ ಹದೀಸು ಗ್ರಂಥದಲ್ಲಿರುವ ಇನ್ನೊಂದು ಹದೀಸು ಹೀಗಿದೆ: ಹಝ್ರತ್ ಮುಹಮ್ಮದ್ ಪೈಗಂಬರರು(ಸ) ರಾತ್ರಿ ತಡವಾಗಿ ಮನೆಗೆ ಬಂದರೆ ಯಾರಿಗೂ ತೊಂದರೆ ನೀಡದೆ ನಿದ್ರೆಯಿಂದ ಎಬ್ಬಿಸದೆ ಆಹಾರವನ್ನು ಭಕ್ಷಿಸುತ್ತಿದ್ದರು ಅಥವಾ ಹಾಲು ಕುಡಿಯುತ್ತಿದ್ದರು.

5. ತಿರ್ಮಿಧಿ ಹದೀಸು ಗ್ರಂಥದಲ್ಲಿ ಒಂದು ಹದೀಸು ಹೀಗಿದೆ: ಹಝ್ರತ್ ಆಯಿಶ(ರ) ಹೀಗೆ ಹೇಳಿದರು: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಇತರ ಎಲ್ಲ ಮನುಷ್ಯರಿಗಿಂತ ಮೃದು ಸ್ವಭಾವ ಹೊಂದಿದವರೂ ಎಲ್ಲರಿಗಿಂತ ಹೆಚ್ಚು ದಯೆವುಳ್ಳವರೂ ಸಾಮಾನ್ಯ ಮನುಷ್ಯರ ಹಾಗೆ ಸೌಮ್ಯವಾಗಿ ಮನೆಯಲ್ಲಿ ಜೀವಿಸುವವರೂ ಆಗಿದ್ದರು. ಅವರು ಯಾರ ವಿರುದ್ಧವೂ ಹುಬ್ಬೇರಿಸಲಿಲ್ಲ. ಯಾವಾಗಲೂ ಮುಗುಳು ನಗುತ್ತಿದ್ದರು. ಅವರು ತಮ್ಮ ಜೀವಿತವಿಡೀ ಎಂದೂ ಯಾವುದೇ ಪತ್ನಿಯ ಮೇಲೆ ಕೈ ಎತ್ತಿರಲಿಲ್ಲ ಮತ್ತು ತನ್ನ ಯಾವುದೇ ಸೇವಕನಿಗೆ ಹೊಡೆದಿರಲಿಲ್ಲ.

ನಮ್ಮ ಯಜಮಾನರಾದ ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆದರ್ಶ ಉತ್ತಮ ವರ್ತನೆಗಳು ಅವರ ಗಾರ್ಹಿಕ ಜೀವಿತವನ್ನು ಶಾಂತಿ ಭರಿತವೂ ಸ್ವರ್ಗ ಸಮಾನವೂ ಆಗಿ ಮಾಡಿತು. ಇದೇ ಕಾರಣದಿಂದ ಅವರ ಎಲ್ಲ ಪತ್ನಿಯರು ಯಾವಾಗಲೂ ಅವರಲ್ಲಿ ಅನುರಕ್ತೆಯರಾಗಿರುತ್ತಿದ್ದರು.

**(ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್ ವ ಬಾರಿಕ್ ವ ಸಲ್ಲಿಮ್.)**

## ಬಡಾವಣೆಯಲ್ಲಿರುವವರ ಶಾಂತಿ:

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ನೀವು ಮಾತಾಪಿತರಿಗೆ ಒಳಿತನ್ನು ಮಾಡಿರಿ. ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ ಒಳಿತನ್ನು ಮಾಡಿರಿ."** (4:37).

ಈ ವಿಷಯಕ್ಕೆ ಸಂಬಂಧಿಸಿ ಕೆಲವು ಹದೀಸುಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ.

1. ಇಬ್ನುಮಾಜ ಹದೀಸು ಗ್ರಂಥದಲ್ಲಿರುವ ಒಂದು ಹದೀಸು ಹೀಗಿದೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಒಬ್ಬ ವ್ಯಕ್ತಿ ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ(ಸ) ನಿವೇದಿಸಿದನು: ನಾನು ಒಳ್ಳೆಯದಾಗಿ ವರ್ತಿಸುತ್ತಿದ್ದೇನೆ ಅಥವಾ ಕೆಟ್ಟದಾಗಿ ವರ್ತಿಸುತ್ತಿದ್ದೇನೆ ಎಂದು ನನಗೆ ಹೇಗೆ ತಿಳಿದುಕೊಳ್ಳಲು ಸಾಧ್ಯವಿದೆ? ಆಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ನಿನ್ನ ನೆರೆಹೊರೆಯವರು ನೀನು ಒಳ್ಳೆಯವನೆಂದು ಹೇಳುತ್ತಾರೆಂದು ನೀನು ಆಲಿಸಿದರೆ ನೀನು ತಿಳಿದುಕೊಳ್ಳು ನಿನ್ನ ವರ್ತನೆ ಒಳ್ಳೆಯದಾಗಿದೆ ಎಂದು. ನಿನ್ನ ನೆರೆಹೊರೆಯವರು ನಿನ್ನ ಬಗ್ಗೆ ನೀನು ಕೆಟ್ಟವನೆಂದು ಹೇಳುತ್ತಿರುವುದಾಗಿ ನೀನು ಆಲಿಸಿದರೆ ನೀನು ತಿಳಿದುಕೊಳ್ಳು ನಿನ್ನ ವರ್ತನೆ ಕೆಟ್ಟದಾಗಿದೆ ಎಂದು.

2. ಬುಖಾರಿಯ ಒಂದು ಹದೀಸು ಹೀಗಿದೆ: ಹಝ್ರತ್ ಇಬ್ನು ಉಮರ್(ರ) ಮತ್ತು ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ಜಿಬ್ರೀಲ್ ನನ್ನೊಂದಿಗೆ ನೆರೆಹೊರೆಯವರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ಎಷ್ಟು ಒತ್ತಿ ಹೇಳುತ್ತಾ ಇರುತ್ತಾರೆಂದರೆ ನಾನು ಯೋಚಿಸಿದೆ –

ನೆರೆಹೊರೆಯವರನ್ನು ವಾರಸುದಾರರನ್ನಾಗಿ ಮಾಡುವರೋ ಎಂದು.

3. ಬುಖಾರಿಯ ಒಂದು ಹದೀಸು ಹೀಗಿದೆ: ಹಝ್ರತ್ ಅಬೂಹುರೈರ(ರ) ಹೇಳಿದರು: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಾಣೆ ಆ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ. ಅಲ್ಲಾಹನಾಣೆ ಆ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ. ಅಲ್ಲಾಹನಾಣೆ ಆ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ. (ಮೂರು ಸಾರಿ ಹಾಗೆ ಹೇಳಿದರು). ಅವರೊಂದಿಗೆ ಕೇಳಲಾಯಿತು: ಪ್ರವಾದಿವರ್ಯರೇ, ಸತ್ಯವಿಶ್ವಾಸಿಯಾಗಿರದವನು ಯಾರು? ಅವರು ಹೇಳಿದರು: ಯಾರ ನೆರೆಹೊರೆಯವ ಅವನ ಉಪದ್ರವಗಳಿಂದಲೂ ಅಚಾನಕ ಆಕ್ರಮಣಗಳಿಂದಲೂ ಸುರಕ್ಷಿತನಾಗಿಲ್ಲವೋ ಅಂತಹ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ.

ಈಗಿನ ಕಾಲದಲ್ಲಿ ಅಚಾನಕ ಆಕ್ರಮಣ ವಿವಿಧ ರೀತಿಗಳಲ್ಲಿ ನಡೆಯುತ್ತವೆ. ರಾತ್ರಿ ಹೊತ್ತು ರೇಡಿಯೋ, ಟಿ.ವಿ. ಕಾರ್ಯಕ್ರಮಗಳನ್ನು ಉಚ್ಚ ಧ್ವನಿಯಲ್ಲಿ ಆಲಿಸುತ್ತಾ ಇರುವಾಗ ನೆರೆಹೊರೆಯವರು ಸುಖವಾಗಿ ನಿದ್ರಿಸಲಾರರು. ಕೆಲವು ಸಾರಿ ಒಬ್ಬನ ಮನೆಯ ಕಸ ಇನ್ನೊಬ್ಬನ ಮನೆ ಮುಂದೆ ಹಾಕಲಾಗುತ್ತಿದೆ ಇವುಗಳೆಲ್ಲ ಆಕ್ರಮಣಗಳಾಗಿವೆ.

4. ಮುಸ್ಲಿಮ್ ಹದೀಸು ಗ್ರಂಥದಲ್ಲಿ ಈ ಕೆಳಗಿನ ಹದೀಸು ಇದೆ: ಹಝ್ರತ್ ಅಬೂಝುರ್‌ರೊಂದಿಗೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಝುರ್ ನೀವು ಮನೆಯಲ್ಲಿ ಒಳ್ಳೆಯ ಸಾರು ಮಾಡಿದರೆ ಅದಕ್ಕೆ ನೀರು ಸೇರಿಸಿ ಬೇಯಿಸಿರಿ ಮತ್ತು ನಿಮ್ಮ ನೆರೆಹೊರೆಯವರ ಬಗ್ಗೆ ಗಮನಿಸಿರಿ. ಎಂದರೆ ಯಾವುದಾದರೂ ನೆರೆಹೊರೆಯವನಿಗೆ ಸಹ ಸಾರಿನ ಒಂದು ಪಾಲು ನೀಡಿರಿ.

ಬಡಾವಣೆಯ ಎಲ್ಲರೂ ತಂತಮ್ಮ ನೆರೆಹೊರೆಯವರ ಬಗ್ಗೆ ಈ ರೀತಿ ಗಮನಿಸುವುದಾದರೆ ಮತ್ತು ಎಲ್ಲ ರೀತಿಯ ಉಪದ್ರವಗಳಿಂದ ದೂರ ಸರಿಯುವುದಾದರೆ ಬಡವಾಣೆಯಲ್ಲಿ ಪೂರ್ಣವಾಗಿ ಶಾಂತಿ ಸ್ಥಾಪಿತವಾಗುವುದು.

## ನಗರಗಳಲ್ಲಿ ಶಾಂತಿ:

ನಗರದ ನಾಗರಿಕರ ಹಕ್ಕುಗಳ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ಸರಿಯಾದ ಜ್ಞಾನ ಗಳಿಸಿ ಅವುಗಳನ್ನು ಈಡೇರಿಸಲು ಪ್ರಯತ್ನಿಸುವಾಗ ನಗರವು ಶಾಂತಿಧಾಮವಾಗಲು ಸಹಾಯಕವಾಗುವುದು. ಇದಕ್ಕೆ ಸಂಬಂಧಿಸಿ ಹಝ್ರತ್ ಪೈಗಂಬರರ(ಸ) ಕೆಲವು ಉಪದೇಶಗಳನ್ನೂ ಮಾರ್ಗದರ್ಶನಗಳನ್ನೂ ಆಲಿಸಿರಿ.

1. ಒಬ್ಬರಿನ್ನೊಬ್ಬರನ್ನು ಕಾಣುವಾಗ ಅಸ್ಸಲಾಮು ಅಲೈಕುಮ್ ಹೇಳಿರಿ. ಹಿಂದೂಸ್ಥಾನದಲ್ಲಿ ವಿವಿಧ ಧರ್ಮಗಳ ಅನುಯಾಯಿಗಳು ತಂತಮ್ಮ ರೀತಿಯಲ್ಲಿ ನಮಸ್ತೆ, ನಮಸ್ಕಾರ, ಸತ್‌ಶ್ರೀ ಅಕಾಟ್, ಗುಡ್‌ಮಾರ್ನಿಂಗ್ ಮೊದಲಾದ ಶಬ್ದಗಳನ್ನು ಬಳಸಿ ಒಬ್ಬರಿನ್ನೊಬ್ಬರನ್ನು ಅಭಿವಂದಿಸುತ್ತಾರೆ. ಪರಸ್ಪರ ಹಸ್ತದಾನ ಮಾಡುತ್ತಾರೆ. ಇದರಿಂದ ಪ್ರೀತಿ ವಿಶ್ವಾಸಗಳು ವರ್ಧಿಸುತ್ತವೆ. ಜುಗುಪ್ಸೆ ಮತ್ತು ಅಸಹ್ಯತೆ ದೂರ ಸರಿಯುತ್ತದೆ.

2. ಮಾರ್ಗಗಳಿಗೆ ಕೊಳಕು ವಸ್ತುಗಳನ್ನೂ ಕಸವನ್ನೂ ಹಾಕಬಾರದು. ಮಾರ್ಗದಲ್ಲಿ ನಡೆಯುವವರಿಗೆ ಕಷ್ಟವನ್ನುಂಟುಮಾಡುವ ವಸ್ತುಗಳನ್ನು ದೂರ ಸರಿಸಬೇಕು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಸಹ ಹೇಳಿದ್ದಾರೆ: ನಡೆಯುವವರಿಗೆ ಕಷ್ಟ ನೀಡುವ ವಸ್ತುಗಳನ್ನು ಮಾರ್ಗಗಳಿಂದ ದೂರ ಸರಿಸುವುದು ಒಂದು ಸದಖ (ದಾನಧರ್ಮ) ಆಗಿದೆ.

3. ಮಾರ್ಗಗಳಲ್ಲಿ ವಲಯಾಕೃತಿಯಲ್ಲಿ ಕುಳಿತುಕೊಳ್ಳುವುದು, ನಿಲ್ಲುವುದು ತಡೆಗಟ್ಟಬೇಕು. ಹಝ್ರತ್ ಪೈಗಂಬರರು(ಸ) ಹೇಳಿದರು: **ಇಯ್ಯಾಕುಮ್ ವಲ್ ಜುಲೂಸು ಅಲತ್ತುರುಖಾತ್**. ಎಚ್ಚರಿಕೆ ನೀಡುತ್ತೇನೆ ಮಾರ್ಗಗಳಲ್ಲಿ ಕುಳಿತುಕೊಳ್ಳಬೇಡಿರಿ. ಸಹಾಬರು ಹೇಳಿದರು: ಪ್ರವಾದಿವರ್ಯರೇ, ನಮಗೆ ಅಂತಹ ಸಭೆ ನಡೆಸದಿರಲಾಗುವುದಿಲ್ಲ. ಅಲ್ಲಿ ನಾವು ಮಾತನಾಡುತ್ತೇವೆ ಮತ್ತು ಸಮಾಲೋಚನೆ ನಡೆಸುತ್ತೇವೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮಗೆ ಅಲ್ಲಿ ಕುಳಿತುಕೊಳ್ಳಲೇ ಬೇಕಾಗಿದ್ದರೆ ಮಾರ್ಗದ ಹಕ್ಕುಗಳನ್ನು ಈಡೇರಿಸಿರಿ. ಮಾರ್ಗಗಳ ಹಕ್ಕುಗಳೇನೆಂದು ಸಹಾಬರು ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ನಿಮ್ಮ ದೃಷ್ಟಿಗಳನ್ನು ತಗ್ಗಿಸಿರಿ. ಯಾರಿಗೂ ಕಷ್ಟ ನೀಡಬೇಡಿರಿ, ಸಲಾಮ್‌ಗೆ ಉತ್ತರ ಹೇಳಿರಿ. ಉತ್ತಮ ವಿಷಯಗಳ ಬಗ್ಗೆ ಉಪದೇಶ ನೀಡಿರಿ. ಕೆಟ್ಟ ವಿಷಯಗಳನ್ನು ತಡೆಯಿರಿ. (ಎಲ್ಲರೂ ಅಂಗೀಕರಿಸಿದ ಹದೀಸು)

4. ರೋಗಿಗಳನ್ನು ಸಂದರ್ಶಿಸಬೇಕು. ಅವರಿಗೆ ಧೈರ್ಯ ಹೇಳಬೇಕು ಮತ್ತು ಒಳ್ಳೆಯ ಸಲಹೆ ನೀಡಬೇಕು. ಅವರಿಗೋಸ್ಕರ ಪ್ರಾರ್ಥಿಸಬೇಕು.

5. ಮೃತನಾದವನನ್ನು ದಫನು ಮಾಡಲು ಸಹಕಾರ ನೀಡಬೇಕು. ಮೃತರಿಗೆ ಗೌರವ ನೀಡಬೇಕು. ಒಬ್ಬ ಯಹೂದಿಯ ಮೃತ ದೇಹವನ್ನು ಕೊಂಡೊಯ್ಯುತ್ತಿದ್ದಾಗ ಅದನ್ನು ನೋಡಿ ಹಝ್ರತ್ ಪೈಗಂಬರರು(ಸ) ಗೌರವಭಾವದಿಂದ ಎದ್ದು ನಿಂತರು. ಸಹಾಬರು ಹೇಳಿದರು– ಅದು ಯಹೂದಿಯ ಮೃತದೇಹವೆಂದು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಏನು ಅವನಲ್ಲಿ ಮನುಷ್ಯಾತ್ಮ ಇರಲಿಲ್ಲವೇ? ಎಂದರೆ ಎಲ್ಲ ಮನುಷ್ಯರು ಮನುಷ್ಯರೆಂಬ ನೆಲೆಯಲ್ಲಿ ಸಮಾನರು.

ಇದೇ ರೀತಿ ಅಸಂಖ್ಯಾತ ಮಾರ್ಗದರ್ಶಕ ಉಪದೇಶಗಳಿವೆ. ನಗರವಾಸಿಗಳಿಗೆ ಶಾಂತಿ ಮತ್ತು ಸುಖ ನೀಡಲು ಮತ್ತು ಶಾಂತಿಯ ವಾತಾವರಣ ಸೃಷ್ಟಿಸಲ್ಪಡಲು ಅವು ಸಹಕಾರಿಗಳಾಗಿವೆ. ನಾನು ಸಮಯಾವಕಾಶದ ಕೊರತೆಯ ಕಾರಣದಿಂದ ಇದಕ್ಕೆ ಸಂಬಂಧಿಸಿ ಕೆಲವು ಹದೀಸುಗಳನ್ನು ಮಾತ್ರ ನಿಮ್ಮ ಮುಂದೆ ಇರಿಸುತ್ತೇನೆ.

1. ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ಒಬ್ಬರಿನ್ನೊಬ್ಬರ ವಿರುದ್ಧ ಅಸೂಯೆಪಡಬೇಡಿರಿ. ಒಬ್ಬರಿನ್ನೊಬ್ಬರಿಗೆ ಹಾನಿಯನ್ನುಂಟುಮಾಡಲು ಹೆಚ್ಚು ಹೆಚ್ಚಾಗಿ ಬೆಲೆ ಹೇಳಬೇಡಿರಿ. ಒಬ್ಬರಿನ್ನೊಬ್ಬರ ಬಗ್ಗೆ ದ್ವೇಷ ಹೊಂದಬೇಡಿರಿ. ಒಬ್ಬರಿನ್ನೊಬ್ಬರಿಗೆ ಬೆನ್ನು ತಿರುಗಿಸಬೇಡಿರಿ. ಎಂದರೆ ಸಂಬಂಧ ವಿಚ್ಛೇದಿಸಬೇಡಿರಿ. ಒಬ್ಬನು ವ್ಯಾಪಾರ ಮಾತುಕತೆ ನಡೆಸುವಾಗ ಮಧ್ಯೆ ಪ್ರವೇಶಿಸಿ ವ್ಯಾಪಾರ ಮಾಡಬೇಡಿರಿ. ನೀವು ಅಲ್ಲಾಹನ ದಾಸರಾಗಿರುವಿರಿ. ಪರಸ್ಪರ ಸಹೋದರರ ಹಾಗೆ ಜೀವಿಸಿರಿ.

(ಮುಸ್ಲಿಮ್).

2. ಹಝ್ರತ್ ಅಮರ್ ಬಿನ್ ಶುಐಬ್ ತನ್ನ ಪಿತ ಮತ್ತು ತಾತರಿಂದ ವರದಿ ಮಾಡುತ್ತಾ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: ಕಿರಿಯರ ಮೇಲೆ ಕರುಣೆದೋರದವನು ಮತ್ತು ಹಿರಿಯರನ್ನು ಗೌರವಿಸದವನು ನಮ್ಮೊಂದಿಗೆ ಸೇರಿದವನಲ್ಲ. (ತಿರ್ಮಿಧಿ)

3. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ಹಝ್ರತ್ ಪೈಗಂಬರ್[ಸ] ಹೇಳಿದರು: ಸೃಷ್ಟಿಗಳೆಲ್ಲವೂ ಅಲ್ಲಾಹನ ಕುಟುಂಬದವರಾಗಿದ್ದಾರೆ. ತನ್ನ ಕುಟುಂಬದವರೊಂದಿಗೆ ಒಳ್ಳೆಯ ರೀತಿ ವರ್ತಿಸಿ ಅವರ ಆವಶ್ಯಕತೆಗಳನ್ನು ಈಡೇರಿಸುವ ಬಗ್ಗೆ ಲಕ್ಷ್ಯ ನೀಡುವವನನ್ನು ಅಲ್ಲಾಹನು ಬಹಳ ಇಷ್ಟಪಡುತ್ತಾನೆ. (ಮಿಷ್ಕಾತ್).

4. ಹಝ್ರತ್ ಪೈಗಂಬರ್[ಸ] ಮುಸ್ಲಿಮನ ಚಿಹ್ನೆ ಇದಾಗಿದೆ ಎಂದು ಹೇಳಿದರು: ಯಾವುದೇ ಮನುಷ್ಯನಿಗೆ ನಿಷ್ಕಾರಣವಾಗಿ ಯಾವುದೇ ಕಷ್ಟ ಅವನಿಂದ ತಲಪಲಾರದು.

ಹಝ್ರತ್ ಅಬೂ ಹುರೈರ[ರ] ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: ಮುಸ್ಲಿಮ್ ಯಾರೆಂದರೆ ಅವನ ಕೈಯಿಂದ ಮುಸ್ಲಿಮನು ಸುರಕ್ಷಿತನಾಗಿರುತ್ತಾನೆ. ಯಾರಿಂದ ಜನರ ಜೀವಕ್ಕೆ ಮತ್ತು ಸಂಪತ್ತಿಗೆ ಯಾವುದೇ ಅಪಾಯವಿರುವುದಿಲ್ಲವೋ ಅವನೇ ಮೂಮಿನ್ ಆಗಿದ್ದಾನೆ. (ತಿರ್ಮಿಧಿ).

5. ಮನುಷ್ಯರಿಗೆ ಮಾತ್ರವಲ್ಲ ಪ್ರಾಣಿಗಳಿಗೂ ಕಷ್ಟ ನೀಡುವುದನ್ನು ತಡೆಗಟ್ಟಲಾಗಿದೆ. ಹಝ್ರತ್ ಇಬ್ನು ಉಮರ್[ರ] ಹೇಳುತ್ತಾರೆ: ಒಬ್ಬ ಮಹಿಳೆ ಒಂದು ಬೆಕ್ಕನ್ನು ಕಟ್ಟಿಹಾಕಿ ಅದು ಹಸಿವೆಯಿಂದ ಸಾಯುವಂತೆ ಮಾಡಿದುದರಿಂದ ಶಿಕ್ಷೆ ನೀಡಲಾಯಿತು. ಆಕೆ ಆಹಾರ, ನೀರು ಕೊಡಲಿಲ್ಲ. ಅದು ಅಲೆದಾಡಿ ಇಲಿ ಮೊದಲಾದುವುಗಳನ್ನು ತಿಂದು ಬದುಕಲು ಬಿಡಲಿಲ್ಲ. ಈ ದೌರ್ಜನ್ಯದ ಕಾರಣದಿಂದ ನರಕಾಗ್ನಿಗೆ ಹಾಕಲ್ಪಟ್ಟಳು. (ಮುಸ್ಲಿಮ್).

6. ಹಝ್ರತ್ ಅಬ್ದುಲ್ಲಾ[ರ] ಹೇಳುತ್ತಾರೆ: ನಾವು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಜೊತೆಗೆ ಪ್ರಯಾಣಿಸುತ್ತಿದ್ದಾಗ ಅವರು ಯಾವುದೋ ಆವಶ್ಯಕತೆಗೋಸ್ಕರ ನಮ್ಮಿಂದ ದೂರ ಹೋದರು. ನಾವು ಹುಮ್ರ ಎಂಬ ಪಕ್ಷಿಯನ್ನು ಕಂಡೆವು. ಅದರ ಜೊತೆ ಅದರ ಎರಡು ಮರಿಗಳಿದ್ದುವು. ನಾವು ಆ ಪಕ್ಷಿಯ ಆ ಎರಡು ಮರಿಗಳನ್ನು ಹಿಡಿದುಕೊಂಡೆವು. ಆಗ ಆ ಪಕ್ಷಿ ನಮ್ಮ ತಲೆಗಳ ಮೇಲೆ ಸುತ್ತಾಡಲು ತೊಡಗಿತು. ಅಷ್ಟರಲ್ಲಿ ಹಝ್ರತ್ ಪೈಗಂಬರ್[ಸ] ಮರಳಿ ಬಂದರು. ಅವರು ಹೇಳಿದರು: ಆ ಪಕ್ಷಿಗೆ ತೊಂದರೆ ಕೊಟ್ಟವರು ಯಾರು? ಆ ಪಕ್ಷಿಯ ಮರಿಗಳನ್ನು ಅದಕ್ಕೆ ಮರಳಿಸಿರಿ.

ಅನಂತರ ಹಝ್ರತ್ ಪೈಗಂಬರ್[ಸ] ನೋಡಿದರು – ಯಾರೋ ಇರುವೆಗಳ ಬಿಲವನ್ನು ಸುಡುತ್ತಿದ್ದಾರೆ. ಹಝ್ರತ್ ಪೈಗಂಬರ್[ಸ] ಹೇಳಿದರು: ಅಲ್ಲಾಹನ ಹೊರತು ಬೇರೆ ಯಾರಿಗೂ ಜೀವಿಗಳನ್ನು ಬೆಂಕಿಯಿಂದ ಸುಟ್ಟುಹಾಕುವ ಅಧಿಕಾರವಿಲ್ಲ. (ಅಬೂದಾಊದ್).

ಇವುಗಳು ಚಿಕ್ಕ ಮತ್ತು ಸಾಮಾನ್ಯ ಉಪದೇಶಗಳೆಂದು ಕಾಣಿಸುವುದಾದರೂ ಮನುಷ್ಯರನ್ನೂ ಇತರ ಸೃಷ್ಟಿಗಳನ್ನೂ ಕಷ್ಟಗಳಿಂದ ರಕ್ಷಿಸಲು, ಸುಖವನ್ನು ನೀಡಲು ಮತ್ತು ಶಾಂತಿ ಕಾಪಾಡಲು ಬಹಳ ಮಹತ್ವಪೂರ್ಣವಾಗಿವೆ.

## ಸರಕಾರದ ಹಕ್ಕುಗಳು ಮತ್ತು ಹೊಣೆಗಾರಿಕೆಗಳು

ಇಷ್ಟರ ತನಕ ಮನುಷ್ಯರ ಪರಸ್ಪರ ಸಂಬಂಧಗಳ ಬಗ್ಗೆ ಅವರ ಹಕ್ಕುಗಳ ಬಗ್ಗೆ, ಹೊಣೆಗಾರಿಕೆಗಳ ಬಗ್ಗೆ ವಿವರಿಸಿದೆ. ಇನ್ನು ಮುಂದೆ ಸರಕಾರದ ಮತ್ತು ರಾಜ್ಯದ ಹಕ್ಕುಗಳ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ವಿವರಿಸುವುದು ಆವಶ್ಯಕವೆಂದು ಭಾವಿಸುತ್ತೇನೆ.

ಪ್ರತಿಯೊಂದು ದೇಶದ ಸರಕಾರದ ಪ್ರಥಮ ಹೊಣೆಗಾರಿಕೆ ದೇಶದ ಜನರ ಮೂಲಭೂತ ಆವಶ್ಯಕತೆಗಳಾದ ಯೋಗ್ಯ ಆಹಾರ, ಯೋಗ್ಯ ಪೋಷಾಕು ಮತ್ತು ಸರಕಾರದ ಸಾಧನ ಸಂಪತ್ತುಗಳಿಗನುಸಾರವಾಗಿ ವಾಸ್ತವ್ಯ ವ್ಯವಸ್ಥೆ ಮಾಡಬೇಕಾಗಿದೆ ಎನ್ನುವುದಾಗಿದೆ.

ಪವಿತ್ರ ಖುರ್‌ಆನ್ ಮನುಷ್ಯರ ಮೂಲಭೂತ ಆವಶ್ಯಕತೆಗಳ ಬಗ್ಗೆ ಮಾರ್ಗದರ್ಶಕ ತತ್ವವನ್ನು ಹೀಗೆ ವಿವರಿಸಿದೆ:

**"ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ."** (ಪವಿತ್ರ ಖುರ್‌ಆನ್ 20:119, 120).

ಹಸಿವು, ದಾಹ, ನಿವಾರಿಸಲು ಮತ್ತು ಪೋಷಾಕು ಒದಗಿಸಲು ಜನರು ಪರಸ್ಪರ ಸಹಾಯ ನೀಡುತ್ತಾರಾದರೂ ವಿವಿಧ ಸಂಸ್ಥೆಗಳು ಮತ್ತು NGOಗಳು ಮಾನವರ ಸೇವೆಗೋಸ್ಕರ ಕಾರ್ಯಪ್ರವರ್ತಕರಾಗುತ್ತಾರಾದರೂ ಸರಕಾರದ ಮಹತ್ವಪೂರ್ಣ ಹೊಣೆಗಾರಿಕೆ ತನ್ನ ಜನರಿಗೆ ಸ್ಥಿರವಾದ ವ್ಯವಸ್ಥೆ ಮಾಡುವುದಾಗಿದೆ. ಆ ಮೂಲಕ ಜನರಿಗೆ ಅವರ ಆವಶ್ಯಕತೆಗನುಸಾರವಾಗಿ ಆಹಾರ, ಬಟ್ಟೆ ಮತ್ತು ವಾಸ್ತವ್ಯ ಲಭಿಸುವಂತಾಗಬೇಕು. ಸರಕಾರ ಈ ನಿಟ್ಟಿನಲ್ಲಿ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಲು ನಿರ್ಲಕ್ಷಿಸುವುದಾದರೆ ಮತ್ತು ಸುವ್ಯವಸ್ಥೆ ಸ್ಥಾಪಿಸುವುದಿಲ್ಲವಾದರೆ ಜನರಲ್ಲಿ ಅತೃಪ್ತಿ ಮತ್ತು ಅಶಾಂತಿ ಹಬ್ಬುತ್ತದೆ ಮತ್ತು ಅವುಗಳ ಪರಿಣಾಮವಾಗಿ ದೇಶದಲ್ಲಿ ವಿವಿಧ ಅಪರಾಧಗಳು ವರ್ಧಿಸಲು ಪ್ರಾರಂಭಿಸುತ್ತವೆ.

ಇದಕ್ಕೆ ಸಂಬಂಧಿಸಿ ಮಹತ್ವಪೂರ್ಣವಾದ ವಿಷಯವೇನೆಂದರೆ, ಜನರಿಗೆ ಅವರಿಗೆ ಅರ್ಹವಾದ ಜೀವನಾಧಾರ ಒದಗಿಸಬೇಕು ಮತ್ತು ಅವರ ಸಾಮರ್ಥ್ಯಕ್ಕೆ ಅನುಸಾರವಾಗಿ ಅವರ ಸ್ವಂತ ಕಾಲಿನ ಮೇಲೆ ಅವರು ನಿಲ್ಲುವಂತೆ ಮಾಡಬೇಕು. ಅವರನ್ನು ಭಿಕ್ಷಾಟನೆಯಿಂದ ರಕ್ಷಿಸಬೇಕು. ಈ ವಿಷಯಕ್ಕೆ ಸಬಂಧಿಸಿ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಉಪದೇಶಗಳನ್ನು ನೀಡಿದ್ದಾರೆ ಮತ್ತು ತನ್ನ ಕರ್ಮಗಳ ಮೂಲಕ ಮಾದರಿ ತೋರಿಸಿದ್ದಾರೆ.

1. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್[ರ] ಹೇಳುತ್ತಾರೆ – ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: ಅಲ್ಲಾಹನು ನಿಗದಿ ಪಡಿಸಿದ ಕಡ್ಡಾಯ ಧಾರ್ಮಿಕ ಕರ್ಮಗಳ ಹಾಗೆಯೇ

ದುಡಿಮೆಯಿಂದ ಸಂಪಾದನೆ ಮಾಡುವುದು ಸಹ ಕಡ್ಡಾಯ ಕರ್ಮವಾಗಿದೆ. (ಮಿಷ್ಕಾತ್).

2. ಹಝ್‌ರತ್ ಮಿಖ್‌ದಾದ್ ಬಿನ್ ಮಅದ್ ಯಕ್‌ರಬ್[ರ] ಹೇಳುತ್ತಾರೆ: ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: ಕೈಗಳಿಂದ ಕೆಲಸ ಮಾಡಿದ ಸಂಪಾದನೆಗಿಂತ ಉತ್ತಮವಾದ ಬೇರೆ ಸಂಪಾದನೆ ಇಲ್ಲ. (ಬುಖಾರಿ).

3. ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಭಿಕ್ಷೆ ಬೇಡುವುದನ್ನು ಇಷ್ಟಪಡುತ್ತಿರಲಿಲ್ಲ ಮತ್ತು ಹೇಳುತ್ತಿದ್ದರು – ಮೇಲಿನ ಕೈ ಎಂದರೆ ಕೊಡುವ ಕೈ ಕೆಳಗಿನ ಕೈ ಎಂದರೆ ಬೇಡುವ ಕೈಗಿಂತ ಉತ್ತಮ. ಆದರೆ ಯಾರಿಗಾದರೂ ವಾಸ್ತವಿಕವಾಗಿ ಏನಾದರೂ ಅತ್ಯಾವಶ್ಯಕವಾಗಿದ್ದರೆ ಅವರ ಸನ್ನಿಧಿಯಿಂದ ಬರಿಗೈಯಲ್ಲಿ ಹಿಂದಿರುಗುತ್ತಿರಲಿಲ್ಲ. ಯಾರದಾದರೂ ಬೇಡಿಕೆಯನ್ನು ತಿರಸ್ಕರಿಸಿದರೆ ಆ ಬೇಡಿಕೆ ಈಡೇರಿಸಲು ಬೇರೆ ವ್ಯವಸ್ಥೆ ಮಾಡುತ್ತಿದ್ದರು.

4. ಹಝ್‌ರತ್ ಅನಸ್ ಬಿನ್ ಮಾಲಿಕ್[ರ] ಹೇಳುತ್ತಾರೆ: ಒಬ್ಬ ಅನ್‌ಸಾರಿ ವ್ಯಕ್ತಿ ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಬಳಿಗೆ ಬಂದು ಬೇಡಿದಾಗ ಅವನಿಗೆ ಏನಾದರೂ ಕೊಡುವುದಕ್ಕೆ ಬದಲಾಗಿ ಕೇಳಿದರು: ನಿನ್ನ ಮನೆಯಲ್ಲಿ ಏನಾದರೂ ಇದೆಯೋ? ಆ ವ್ಯಕ್ತಿ ಹೇಳಿದರು: ಒಂದು ಚಾದರ ಮತ್ತು ಪಾತ್ರೆ ಇದೆ. ಆ ವ್ಯಕ್ತಿಯೊಂದಿಗೆ ಹೇಳಲಾಯಿತು, ಅವೆರಡನ್ನೂ ಇಲ್ಲಿಗೆ ತಾ. ಅವುಗಳನ್ನು ಏಲಂ ಮಾಡಲಾಯಿತು. ಒಬ್ಬರು ಹೇಳಿದರು: ನಾನು ಒಂದು ದಿರ್‌ಹಮ್‌ಗೆ ಖರೀದಿಸುವೆನು. ಇನ್ನೊಬ್ಬರು ಹೇಳಿದರು: ನಾನು ಎರಡು ದಿರ್‌ಹಮ್‌ಗೆ ಖರೀದಿಸುವೆನು. ಎರಡು ದಿರ್‌ಹಮ್‌ಗೆ ಆ ವಸ್ತುಗಳನ್ನು ನೀಡಲಾಯಿತು. ಎರಡು ದಿರ್‌ಹಮ್ ಅನ್‌ಸಾರಿಗೆ ಕೊಡುತ್ತಾ ಹಝ್‌ರತ್ ಪೈಗಂಬರ್[ಸ], ಒಂದು ದಿರ್‌ಹಮ್‌ನಿಂದ ಮನೆಗೆ ಆಹಾರ ಪದಾರ್ಥಗಳನ್ನು ಖರೀದಿಸಿ ಇನ್ನೊಂದು ದಿರ್‌ಹಮ್‌ನಿಂದ ಕೊಡಲಿ ಖರೀದಿಸಿ ತರಲು ಹೇಳಿದರು. ಕೊಡಲಿ ಖರೀದಿಸಿ ತಂದಾಗ ಹಝ್‌ರತ್ ಪೈಗಂಬರ್[ಸ] ಅದಕ್ಕೆ ಮರದ ಹಿಡಿ ಹಾಕಿಕೊಟ್ಟು ಹೇಳಿದರು: ಈ ಕೊಡಲಿಯಿಂದ ಕಟ್ಟಿಗೆ ಕಡಿದು ಮಾರಾಟ ಮಾಡು. ಹದಿನೈದು ದಿನಗಳ ತನಕ ಇಲ್ಲಿಗೆ ಬರಬಾರದು. ಆ ವ್ಯಕ್ತಿ ಕಟ್ಟಿಗೆ ಕಡಿದು ಮಾರಾಟ ಮಾಡುತ್ತಾ ಇದ್ದನು. ಆ ವ್ಯಕ್ತಿ ಹಝ್‌ರತ್ ಪೈಗಂಬರರ[ಸ] ಬಳಿಗೆ ಬಂದಾಗ ಅವನು ಹತ್ತು ದಿರ್‌ಹಮ್ ಸಂಪಾದಿಸಿದ್ದನು. ಆಗ ಹಝ್‌ರತ್ ಪೈಗಂಬರ್[ಸ] ಹೇಳಿದರು: ಮನೆ ಬಾಗಿಲುಗಳಿಗೆ ಹೋಗಿ ಬೇಡುವುದಕ್ಕಿಂತ ಸ್ವತಃ ಸಂಪಾದಿಸಿ ತಿನ್ನುವುದು ಉತ್ತಮವಾಗಿದೆ. (ಅಬೂದಾವೂದ್).

5. ಕಾರ್ಮಿಕರಿಗೆ ವೇತನ ನೀಡುವ ಬಗ್ಗೆ ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: ಕಾರ್ಮಿಕನ ಬೆವರು ಆರುವ ಮೊದಲೇ ಅವನ ವೇತನ ಅವನಿಗೆ ನೀಡಬೇಕು. (ಇಬ್ನುಮಾಜ).

ಹಝ್‌ರತ್ ಪೈಗಂಬರ್[ಸ] ಹೀಗೆ ಸಹ ಹೇಳಿದ್ದಾರೆ. ಯಾರು ಕಾರ್ಮಿಕನಿಗೆ ಅವನ ಹಕ್ಕನ್ನು ನೀಡಲಿಲ್ಲವೋ ನಾನು ಕಾರ್ಮಿಕನ ವತಿಯಿಂದ ಅವನ ವಿರುದ್ಧ ಪುನರುತ್ಥಾನ ದಿನದಂದು ಜಗಳ ಮಾಡುವೆನು. ಇದರ ಅರ್ಥ ಹೀಗೆ: ಕಾರ್ಮಿಕರಿಗೆ ಅವರ ವೇತನ ನೀಡದಿದ್ದರೆ ಸರಕಾರ ಅದನ್ನು ಕೊಡಿಸುವುದು ಅವರ ಕಡ್ಡಾಯ ಕರ್ತವ್ಯವಾಗಿದೆ.

ಮಾನ್ಯ ಶ್ರೋತೃಗಳೇ, ಜನರೊಂದಿಗೆ ನ್ಯಾಯನಿಷ್ಠೆಯಿಂದ ವರ್ತಿಸುವುದು ಸರಕಾರದ ಹೊಣೆಗಾರಿಕೆಯಾಗಿದೆ. ಸರಕಾರ ಅನ್ಯಾಯವನ್ನೂ ದೌರ್ಜನ್ಯವನ್ನೂ ಅಳಿಸಿ ಬಿಡಬೇಕು.

ಮಾನ್ಯ ಶ್ರೋತೃಗಳೇ, ನ್ಯಾಯ ಪಾಲನೆಯ ಕೊರತೆಯೇ ಎಲ್ಲ ವಿಧಗಳ ಅಶಾಂತಿಗೆ ಕಾರಣವಾಗಿದೆ. ಜಾಗತಿಕ ಅಶಾಂತಿಯ ಕಾರಣವೂ ಇದೇ ಆಗಿದೆ. ಇದರ ಬಗ್ಗೆ ಅಹ್ಮದಿಯಾ ಪಂಚಮ ಖಲೀಫರಾದ ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಪದೇ ಪದೇ ಲೋಕದ ಆಡಳಿತಾಧಿಕಾರಿಗಳಿಗೆ ಅದರ ಬಗ್ಗೆ ಗಮನ ಹರಿಸುತ್ತಾ ಇದ್ದಾರೆ. ಉದಾಹರಣೆಗೆ 2012ರಲ್ಲಿ ವಾಶಿಂಗ್‌ಟನ್ ಡಿ.ಸಿ. ಕ್ಯಾಪಿಟೋಲ್ ಹಿಲ್‌ನಲ್ಲಿ ನೀಡಿದ ಭಾಷಣದಲ್ಲಿ ಹೀಗೆ ಹೇಳಿದರು:

ಎಲ್ಲ ಜನರು ಮನುಷ್ಯರೆಂಬ ನೆಲೆಯಲ್ಲಿ ಸಮಾನರು ಎಂದು ಪವಿತ್ರ ಖುರ್‌ಆನ್ ಹೇಳಿದೆ. ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಕೊನೆಯ ಭಾಷಣದಲ್ಲಿ ಎಲ್ಲ ಮುಸ್ಲಿಮರಿಗೂ ಆಜ್ಞೆ ನೀಡಿದ್ದಾರೆ. ಅವರು ಯಾವಾಗಲೂ ನೆನಪಿಡಬೇಕು, ಯಾವುದೇ ಅರಬಿಗೆ ಅರಬಿಯೇತರನ ಮೇಲೆ ಶ್ರೇಷ್ಠತೆ ಇಲ್ಲ. ಅರಬಿಯೇತರನಿಗೆ ಅರಬಿಯ ಮೇಲೆಯೂ ಶ್ರೇಷ್ಠತೆ ಇಲ್ಲ. ಬಿಳಿಯವನಿಗೆ ಕರಿಯನ ಮೇಲೆ ಶ್ರೇಷ್ಠತೆ ಇಲ್ಲ. ಕರಿಯನಿಗೆ ಬಿಳಿಯನ ಮೇಲೆಯೂ ಶ್ರೇಷ್ಠತೆ ಇಲ್ಲ.

ಇಸ್ಲಾಮ್ ಸ್ಪಷ್ಟವಾಗಿ ಹೀಗೆ ಉಪದೇಶಿಸಿದೆ – ಎಲ್ಲ ಕೋಮುಗಳ ಮತ್ತು ವಂಶಗಳ ಜನರು ಸಮಾನರು.

ಎಲ್ಲ ಜನರಿಗೆ ಯಾವುದೇ ತಾರತಮ್ಯವಿಲ್ಲದೆ ಯಾವುದೇ ಅಸೂಯೆಗೆ ಗುರಿಯಾಗದ ಸಮಾನ ಹಕ್ಕುಗಳು ಲಭಿಸಬೇಕು. ಈ ಮೂಲಭೂತ ಸುವರ್ಣ ತತ್ವ ಅಂತರ್ರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದಕ್ಕೆ ಅಸ್ತಿಭಾರವಾಗಿದೆ.

## ಅಂತರ್ರಾಷ್ಟ್ರೀಯ ಸಂಬಂಧಗಳು

ಅಂತರ್ರಾಷ್ಟ್ರೀಯ ಸಂಬಂಧಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಇಂದಿನ ಪರಿಸ್ಥಿತಿಯಲ್ಲಿ ಲೋಕದಲ್ಲಿ ಮಹಾಶಕ್ತಿ ರಾಷ್ಟ್ರಗಳು ಚಿಕ್ಕ ದೇಶಗಳನ್ನು ದಬಾಯಿಸುತ್ತಾ ಇವೆ. ವಿವಿಧ ಉಪಾಯಗಳಿಂದಲೂ ನೆವನಗಳಿಂದಲೂ ಚಿಕ್ಕ ದೇಶಗಳನ್ನು ತೊಂದರೆಗೊಳಪಡಿಸಲು ಶಕ್ತಿಶಾಲಿ ರಾಷ್ಟ್ರಗಳು ಪ್ರಯತ್ನಿಸುತ್ತಾ ಇವೆ. ಈಗ ನಡೆಯುತ್ತಿರುವ ಯುದ್ಧ ಜಗಳಗಳಿಗೆ ಕಾರಣಗಳ ಬಗ್ಗೆ ಚಿಂತಿಸುವುದಾದರೆ ಹೀಗೆ ತಿಳಿಯುತ್ತದೆ – ಇನ್ನೊಂದು ದೇಶದ ಬಗ್ಗೆ ದುರಾಶೆಯ ದೃಷ್ಟಿ ಬೀರುವುದರಿಂದ ಅಥವಾ ಅನ್ಯಾಯದಿಂದ ಸ್ವಾರ್ಥ ಲಾಭವನ್ನು ಇನ್ನೊಂದು ದೇಶದಿಂದ ಪಡೆಯಲಿಕ್ಕೋಸ್ಕರ ಅಥವಾ ಅಧೀನಕ್ಕೊಳಪಡಿಸಲು ಪ್ರಯತ್ನಗಳು ಜಾರಿಯಲ್ಲಿವೆ.

ಪವಿತ್ರ ಖುರ್‌ಆನ್ ಸ್ವಾರ್ಥ ಅಭಿಲಾಷೆಗಳ ಅಸ್ತಿಭಾರವನ್ನು ಕಿತ್ತುಹಾಕಲು ಹೀಗೆ ಹೇಳಿದೆ: **"ಅವರ ಪೈಕಿ ಕೆಲವರಿಗೆ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖ ಸೌಕರ್ಯಗಳನ್ನು**

**ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ ನಾವು ಅದನ್ನು ನೀಡಿದ್ದೇವೆ. ನಿನ್ನ ಪ್ರಭುವಿನ ಅನುಗ್ರಹ ಉತ್ತಮವಾದುದೂ ಶಾಶ್ವತವಾದುದೂ ಆಗಿದೆ."** (20:132).

ಪವಿತ್ರ ಖುರ್‌ಆನ್ ಇನ್ನೊಂದು ಮೂಲಭೂತ ಮಹತ್ವದ ಆಜ್ಞೆ ಹೀಗೆ ನೀಡಿದೆ: **"ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದೆಲ್ಲ ಬಲ್ಲವನಾಗಿದ್ದಾನೆ."** (5:9).

ಈಗಿನ ಕಾಲದಲ್ಲಿ ನೋಡಿರಿ. ಪಾಶ್ಚಿಮಾತ್ಯ ಶಕ್ತಿಶಾಲಿ ದೇಶಗಳೂ ಪೌರಾತ್ಯ ಶಕ್ತಿಶಾಲಿ ದೇಶಗಳೂ ಉತ್ತರದ ಶಕ್ತಿಶಾಲಿ ದೇಶಗಳೂ ದಕ್ಷಿಣದ ಶಕ್ತಿಶಾಲಿ ದೇಶಗಳೂ ಒಂದು ಇನ್ನೊಂದರ ಸಾಧನ ಸಂಪತ್ತುಗಳನ್ನು ದುರಾಶೆಯಿಂದಲೂ ಲಾಲಸೆಯಿಂದಲೂ ವೀಕ್ಷಿಸುತ್ತಿವೆ. ಇತರ ದೇಶಗಳನ್ನು ಆಕ್ರಮಿಸಲು, ಅಧೀನಕ್ಕೊಳಪಡಿಸಲು ತಮ್ಮ ಮೇಲಾಧಿಕಾರವನ್ನು ಸ್ಥಾಪಿಸಿ ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಸಂರಕ್ಷಿಸಲು ಮಗ್ನವಾಗಿವೆ. ಈ ಕಾರಣಗಳಿಂದ ಅನ್ಯ ದೇಶಗಳಿಗೂ ಸಮುದಾಯಗಳಿಗೂ ಹಾನಿಯುಂಟಾಗುವುದಾದರೂ ಇವರ ದೇಶ ಮತ್ತು ಜನಾಂಗ ನಾಶವಾಗುವುದಾದರೂ ಅವರಿಗೆ ಅದರ ಬಗ್ಗೆ ಚಿಂತೆ ಇಲ್ಲ.

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್[ರಹ್] ಅನೇಕ ವರ್ಷಗಳ ಹಿಂದೆ ಹೀಗೆ ಹೇಳಿದ್ದರು: ಇಂದಿನ ಕಾಲದಲ್ಲಿ ರಾಜಕಾರಣ ಕೊಳಕಾಗಿದೆ. ನ್ಯಾಯಪಾಲನೆ ಮತ್ತು ದೇವಭಕ್ತಿ ರಹಿತವಾಗಿದೆ. ಇಸ್ಲಾಮಿನ ಹೆಸರಿನಲ್ಲಿ ತಮ್ಮ ಶ್ರೇಷ್ಠತೆಯನ್ನು ವಾದಿಸುವ ಮುಸ್ಲಿಮ್ ದೇಶಗಳು ಸಹ ಇಸ್ಲಾಮೀ ನೈತಿಕ ನಿಯಮಗಳಿಗೆ ನಿಷ್ಠರಾಗಿಲ್ಲ. ಅವರ ನಿಷ್ಠೆ ಇಸ್ಲಾಮ್ ನ್ಯಾಯದ ಬಗ್ಗೆ ನೀಡಿರುವ ಉನ್ನತ ಮಟ್ಟದ ತತ್ವಗಳ ಬಗ್ಗೆ ಅಲ್ಲ. ತಮ್ಮ ಸ್ವಾರ್ಥ ಹಿತಾಸಕ್ತಿಗಳ ಬಗ್ಗೆಯಾಗಿದೆ.

ಇನ್ನೊಂದು ಕಡೆ ಅನ್ಯ ಕೋಮುಗಳು ನ್ಯಾಯದ ಬಗ್ಗೆ ದೊಡ್ಡ ದೊಡ್ಡ ವಾದಗಳನ್ನು ಮಾಡುತ್ತಿವೆ. ಅವರೇ ಲೋಕದಲ್ಲಿ ನ್ಯಾಯಪಾಲನೆ ಮಾಡಲು ನಿಯೋಜಿತರಾಗಿರುವರೋ ಎಂಬಂತೆ ವರ್ತಿಸುತ್ತಾರೆ. ಅವರ ಶಕ್ತಿಯ ಸಹಾಯವಿಲ್ಲದಿದ್ದರೆ ಲೋಕದಲ್ಲಿ ನ್ಯಾಯ ಅಳಿಸಿ ಹೋಗುವುದೆಂದು ವಾದಿಸುತ್ತಾರೆ. ಆದರೆ ವಿಶದವಾಗಿ ಪರಿಶೀಲಿಸಿದರೆ ತಿಳಿಯುವುದೇನೆಂದರೆ ಇಸ್ಲಾಮ್ ಪ್ರತಿಪಾದಿಸುವಂತಹ ನ್ಯಾಯಪಾಲನೆ ಒಂದು ಕಡೆಯೂ ಇಲ್ಲ, ಇನ್ನೊಂದು ಕಡೆಯೂ ಇಲ್ಲ.

(ಖಲೀಜ್‌ಕಾ ಬುಹ್‌ರಾನ್ ಪುಟ 14).

## ಧಾರ್ಮಿಕ ಸಂಬಂಧಗಳು

ವಿವಿಧ ಧರ್ಮಗಳ ಅನುಯಾಯಿಗಳ ಪರಸ್ಪರ ಉತ್ತಮ ಸಂಬಂಧ ಶಾಂತಿ ಸ್ಥಾಪನೆಗೆ ಆವಶ್ಯಕವಾಗಿದೆ. ಇಂದಿನ ಕಾಲದಲ್ಲಿ ವಿವಿಧ ಧರ್ಮಗಳ ಧಾರ್ಮಿಕ ಉಪದೇಶಗಳು ಏನೆಂದು ತಿಳಿದುಕೊಳ್ಳದ ಕಾರಣದಿಂದಲೂ ಮತ್ತು ಧರ್ಮಗಳ ಸ್ಥಾಪಕರ ಮೂಲ ಉಪದೇಶಗಳನ್ನು ಬೆನ್ನ ಹಿಂದೆ ಎಸೆದಿರುವ ಕಾರಣದಿಂದಲೂ ತಥಾಕಥಿತ ಧಾರ್ಮಿಕ ನಾಯಕರ ಸ್ವಂತ ನಿಲುವುಗಳಿಗೆ ಮತ್ತು ಯೋಚನೆಗಳಿಗೆ ಅನುಸಾರವಾಗಿ ಅವರ ಅನುಯಾಯಿಗಳು ಅಂಧರಾಗಿ ಅವರನ್ನು ಅನುಸರಿಸುವ ಕಾರಣದಿಂದಲೂ ವಿವಿಧ ಧರ್ಮಗಳ ಅನುಯಾಯಿಗಳ ಮಧ್ಯೆ ದ್ವೇಷಾಸೂಯೆಗಳನ್ನು ಹಬ್ಬಿಸಲಾಗುತ್ತಿದೆ. ಆದುದರಿಂದ ಧಾರ್ಮಿಕ ಸ್ವಾತಂತ್ರ್ಯದ ಮತ್ತು ಸೌಹಾರ್ದತೆಯ ಕೊರತೆಯು ಜನರ ಶಾಂತಿ ಮತ್ತು ನೆಮ್ಮದಿಯನ್ನು ಎಷ್ಟು ಕೆಡಿಸಿದೆ ಎಂದರೆ ಜನರು ಧರ್ಮದ ಬಗ್ಗೆ ಬೇಸರಗೊಂಡು ಧರ್ಮದಿಂದ ದೂರ ಸರಿಯುತ್ತಿದ್ದಾರೆ. ಧರ್ಮದೊಂದಿಗೆ ತಮ್ಮನ್ನು ಜೋಡಿಸಿಕೊಂಡವರಲ್ಲಿ ಬಹುತೇಕ ಜನರು ಕೇವಲ ಆಚಾರ ರೂಪದಲ್ಲಿ ತಮ್ಮನ್ನು ಜೋಡಿಸಿಕೊಂಡಿದ್ದಾರೆ. ಅವರಿಗೆ ತಮ್ಮ ಧರ್ಮಗಳ ಉಪದೇಶಗಳ ಬಗ್ಗೆಯಾಗಲಿ, ನಂಬಿಕೆಗಳ ಬಗ್ಗೆಯಾಗಲಿ ಯಾವುದೇ ತಿಳುವಳಿಕೆ ಇರುವುದಿಲ್ಲ.

ಇಸ್ಲಾಮ್ ಧರ್ಮದ ಶಾಂತಿದಾಯಕ ಉಪದೇಶಗಳು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಉತ್ತಮ ಮಾದರಿ ಬೇರೆಯೇ ಪ್ರಕಾಶಮಾನವಾದ ಅಧ್ಯಾಯವಾಗಿದೆ. ಅದರ ಬಗ್ಗೆ ಸವಿವರವಾಗಿ ಪ್ರಸ್ತಾಪಿಸಲು ಈ ಸಮಯ ಸಾಲದು. ಕೇವಲ ಸಾರಾಂಶ ರೂಪವಾಗಿ ಹೀಗೆ ಹೇಳುತ್ತೇನೆ:

1. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನನ್ನು ಸರ್ವಲೋಕಗಳ ಪರಿಪಾಲಕನೆಂದು ಹೇಳಲಾಗಿದೆ. ಅವನು ಕೇವಲ ಮುಸ್ಲಿಮರ ಪರಿಪಾಲಕನೆಂದು ಹೇಳಿಲ್ಲ. ಇದಕ್ಕೆ ಸಾಕ್ಷ್ಯಾಧಾರವೇನೆಂದರೆ ಅಲ್ಲಾಹನು ಪ್ರತಿಯೊಂದು ಕೋಮಿನಲ್ಲಿ ತನ್ನ ಮಾರ್ಗದರ್ಶಕ ಸಂದೇಶವಾಹಕನನ್ನು ಕಳುಹಿಸಿದ್ದಾನೆ. ಆದುದರಿಂದ ಒಂದು ಧರ್ಮದ ಮೂಲ ಸ್ವರೂಪ ಈಗ ಬದಲಾಯಿಸಲ್ಪಟ್ಟಿದ್ದರೂ ಯಾವುದೇ ಧರ್ಮ ಸಂಪೂರ್ಣವಾಗಿ ಕೆಟ್ಟು ಹೋಗಿದೆ ಎಂದು ಹೇಳಲಾಗದು.

2. ಒಂದು ಧರ್ಮವನ್ನು ಪ್ರಚಾರ ಮಾಡಲು ಯಾವುದೇ ರೀತಿಯ ಬಲಾತ್ಕಾರ ಖಂಡಿತವಾಗಿಯೂ ಧರ್ಮಬದ್ಧವಲ್ಲ. ಇಸ್ಲಾಮ್ ಧರ್ಮವನ್ನು ಖಡ್ಗದ ಮೂಲಕ ಹಬ್ಬಿಸಲು ಅನುಮತಿ ನೀಡಲಾಗಿದೆ ಎನ್ನುವುದು ಸಂಪೂರ್ಣವಾಗಿ ಸುಳ್ಳಾಗಿರುವ ಆರೋಪವಾಗಿದೆ. ಮುಸ್ಲಿಮರು ಮಾಡಿದ ಯುದ್ಧಗಳು ಪ್ರತಿರೋಧಕ್ಕೆ ಮಾಡಿದವುಗಳಾಗಿದ್ದುವು. ಅಥವಾ ಗಲಭೆಗಳನ್ನೂ ಅಶಾಂತಿಯನ್ನೂ ದೂರಸರಿಸಿ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ಮಾಡಿದವುಗಳಾಗಿದ್ದುವು.

ಇಸ್ಲಾಮಿನ ವಿರುದ್ಧ ಮಾಡಲಾಗುವ ದೋಷಾರೋಪವನ್ನು ನಿವಾರಿಸಲು ಅಲ್ಲಾಹನು ಈ ಕಾಲಘಟ್ಟದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು[ಅ] ಮಸೀಹ್ ಮೌಊದ್ ಆಗಿ ನಿಯೋಜಿಸಿರುವನು. ಅವರ ಮೂಲಕ ಮತ್ತು ಅವರ ಖಲೀಫರ ಮೂಲಕ ಮತ್ತು ಅಹ್ಮದಿಯಾ ಜಮಾಅತ್ ಮೂಲಕ ಲೋಕದಲ್ಲಿ ಇಸ್ಲಾಮನ್ನು ಹರಡುವಂತೆ ಮಾಡಿ ಇಸ್ಲಾಮ್ ಧರ್ಮ ತನ್ನ ಉಪದೇಶಗಳ ಮೂಲಕವೇ ಹರಡುತ್ತದೆ ಅದಕ್ಕೆ ಯಾವುದೇ ಖಡ್ಗದ

ಆವಶ್ಯಕತೆಯಾಗಲೀ ಯುದ್ಧದ ಆವಶ್ಯಕತೆಯಾಗಲೀ ಇಲ್ಲವೆಂದು ಅಲ್ಲಾಹನು ಸಾಬೀತುಗೊಳಿಸಿರುವನು.

3. ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಸರ್ವಲೋಕಗಳಿಗೆ ಮಾರ್ಗದರ್ಶಕನನ್ನಾಗಿಯೂ ಸಂದೇಶವಾಹಕರನ್ನಾಗಿಯೂ ನಿಯೋಜಿಸಿರುವನು. ಅವರಿಗೆ ಖಾತಮುನ್ನಬಿಯ್ಯೀನ್ (ಪ್ರವಾದಿ ಶ್ರೇಷ್ಠ) ಎಂಬ ಉನ್ನತ ಪದವಿಯನ್ನೂ ನೀಡಿರುವನು. ಹೀಗಿದ್ದರೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಒಬ್ಬ ಶಿಷ್ಯನು ತನ್ನ ಬಗ್ಗೆ ಇತರ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠ ಎಂದು ಅನ್ಯಧರ್ಮದವನ ಮುಂದೆ ಹೇಳಿ ಶಾಂತಿಯನ್ನು ಕೆಡಿಸುವುದನ್ನು ಸಹಿಸಲಿಲ್ಲ. ಬುಖಾರಿಯ ಹದೀಸು ಗ್ರಂಥದಲ್ಲಿ ಒಂದು ಘಟನೆ ಹೀಗೆ ವಿವರಿಸಲಾಗಿದೆ: ಒಮ್ಮೆ ಒಬ್ಬ ಯಹೂದಿ ಪೇಟೆಯಲ್ಲಿ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿದ್ದನು. ಆಗ ಒಬ್ಬ ಮುಸ್ಲಿಮ್ ಒಂದು ವಸ್ತುವಿಗೆ ಕಡಿಮೆ ಬೆಲೆ ಹೇಳಿದನು. ಅದು ಯಹೂದಿಗೆ ಅಸಹ್ಯವಾಗಿ ಅವನು ಹೇಳಿದನು – ಮೂಸಾರನ್ನು ಎಲ್ಲ ಮನುಷ್ಯರಿಗಿಂತ ಶ್ರೇಷ್ಠರನ್ನಾಗಿ ಮಾಡಿದ ದೇವನಾಣೆ. ಆಗ ಮುಸ್ಲಿಮನು ಕೋಪದಿಂದ ಯಹೂದಿಗೆ ಕೈಯಿಂದ ಹೊಡೆದನು. ಯಹೂದಿ ಹಝ್ರತ್ ಪೈಗಂಬರರಿಗೆ(ಸ) ದೂರು ನೀಡುತ್ತಾ ಹೇಳಿದನು – ಶಾಂತಿಯಿಂದ ನಮ್ಮನ್ನು ಇರಿಸುವುದು ನಿಮ್ಮ ಹೊಣೆಗಾರಿಕೆಯಾಗಿದೆ. ಈ ಮುಸ್ಲಿಮ್ ನನ್ನೊಂದಿಗೆ ಅತಿರೇಕದಿಂದ ವರ್ತಿಸಿ ಹೊಡೆದಿದ್ದಾನೆ. ಆಗ ಹಝ್ರತ್ ಪೈಗಂಬರ್(ಸ) ಆ ಮುಸ್ಲಿಮನ ವರ್ತನೆಯಬಗ್ಗೆ ಸಿಟ್ಟುಗೊಂಡು ಹೇಳಿದರು: ನನ್ನನ್ನು ಇತರ ಪ್ರವಾದಿಗಳಿಗಿಂತ ಶ್ರೇಷ್ಠನೆಂದು ಹೇಳಬೇಡ. (ಬುಖಾರಿ).

ಒಟ್ಟಾರೆ ಹೇಳುವುದಾದರೆ, ದೃಢವಾಗಿ ತಿಳಿಯಬೇಕಾದ ವಿಷಯವೇನೆಂದರೆ, ಮನುಷ್ಯರಲ್ಲಿ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸಹನೆಯು ವಿಶಾಲವಾಗಿ ಹರಡದಿದ್ದರೆ, ಅನ್ಯರ ಕಷ್ಟಗಳನ್ನು ನೀಗಿಸಿ ಸುಖವನ್ನು ಒದಗಿಸುವ ಮನೋಭಾವ ರೂಪಿಸಲ್ಪಡದಿದ್ದರೆ, ಅನ್ಯರಿಗೆ ಲಾಭವುಂಟುಮಾಡಲು ಸ್ವಾರ್ಥ ಲಾಭವನ್ನು ತ್ಯಾಗ ಮಾಡದಿದ್ದರೆ ಮತ್ತು ಎಲ್ಲದಕ್ಕಿಂತಲೂ ಮಿಗಿಲಾಗಿ ನ್ಯಾಯಪಾಲನೆಯನ್ನು ಮಾಡದಿದ್ದರೆ ಮನೆಗಳಲ್ಲಿ ಶಾಂತಿ ಸ್ಥಾಪಿತವಾಗಲಾರದು. ಬಡಾವಣೆಗಳಲ್ಲಿ ಶಾಂತಿ ಸ್ಥಾಪಿತವಾಗಲಾರದು. ನಗರಗಳಲ್ಲಿ ಶಾಂತಿ ಸ್ಥಾಪಿತವಾಗದು. ದೇಶದಲ್ಲಿ ಶಾಂತಿ ಸ್ಥಾಪಿತವಾಗಲಾರದು. ಅಂತರ್ರಾಷ್ಟ್ರೀಯವಾಗಿ ಶಾಂತಿಯು ಸ್ಥಾಪಿತವಾಗಲಾರದು.

ಆದುದರಿಂದ ಇಂದಲ್ಲವಾದರೆ ನಾಳೆ, ನಾಳೆ ಅಲ್ಲವಾದರೆ ನಾಳೆದು ಇಸ್ಲಾಮಿನ ಶಾಂತಿದಾಯಕ ಉಪದೇಶಗಳನ್ನು ಮತ್ತು ಸರ್ವಲೋಕಗಳಿಗೂ ಮಾರ್ಗದಾಯಕನಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಉಪದೇಶಗಳನ್ನೂ ಉತ್ತಮ ಮಾದರಿಯನ್ನೂ ಅನಿವಾರ್ಯವಾಗಿ ಅನುಸರಿಸಲೇಬೇಕಾದೀತು. ಹೀಗೆ ಮಾಡದಿದ್ದರೆ ಲೋಕ ಶಾಂತಿಯ ಮುಖವನ್ನು ಕಾಣಲಾರದು.

ನಮ್ಮ ಜಮಾಅತಿನ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಖಾಮಿಸ್ ಲೋಕದ ದೊಡ್ಡ ದೊಡ್ಡ ವಿಧಾನ ಸಭೆಗಳಲ್ಲಿ ವಿವಿಧ ದೇಶಗಳ ರಾಜಕೀಯ ನಾಯಕರಿಗೆ ಸಂದೇಶ ತಲಪಿಸುತ್ತಿದ್ದಾರೆ. ಬಾಗಿಲುಗಳಿಗೆ ತಲಪಿರುವ ಮತ್ತು ದೇಶಗಳೊಳಗೆ ಸಹ ಪ್ರವೇಶಿಸಿರುವ ಜಾಗತಿಕ ವಿನಾಶದ ಬಗ್ಗೆ ಎಚ್ಚರಿಕೆ ನೀಡುತ್ತಾ ಇರುತ್ತಾರೆ. ಕೆಲವು ತಿಂಗಳುಗಳ ಹಿಂದೆ ಜರ್ಮನಿಯಲ್ಲಿ ಜರಗಿದ ಜರ್ಮನಿಯ ವಾರ್ಷಿಕ ಜಲ್ಸ ಸಾಲಾನದ ಸಮಾರೋಪ ಭಾಷಣದಲ್ಲಿ ಖಲೀಫರು ಹೀಗೆ ಹೇಳಿದರು:

"ನಾವು ನೋಡುತ್ತೇವೆ ಮತ್ತು ಮನವರಿಕೆ ಮಾಡುತ್ತೇವೆ. ಶಾಂತಿ ಬಹಳ ಮಹತ್ವಪೂರ್ಣವಾದುದಾಗಿದೆ ಎಂದು ಎಲ್ಲರೂ ಶಾಂತಿಯ ಬಗ್ಗೆ ಚರ್ಚಿಸುತ್ತಾರೆ. ಪ್ರತಿಯೊಬ್ಬ ಹೇಳುತ್ತಾನೆ – ಶಾಂತಿ ಬಹಳ ಮಹತ್ವಪೂರ್ಣವಾಗಿದೆ ಎಂದು. ಶಾಂತಿಯ ಸ್ಥಿತಿಯೇ ಮನೆಯ ನೆಮ್ಮದಿ ಮತ್ತು ಸಂರಕ್ಷಣೆಯ ಖಾತರಿ ನೀಡುತ್ತದೆ. ಅಂತರ್ರಾಷ್ಟ್ರೀಯ ಮಟ್ಟದಲ್ಲಿಯೂ ಶಾಂತಿಯ ನೆಮ್ಮದಿ ಮತ್ತು ಸಂರಕ್ಷಣೆಯ ಖಾತರಿ ನೀಡುತ್ತದೆ. ಪ್ರತಿಯೊಂದು ಹಂತದಲ್ಲಿ ಶಾಂತಿ ಸ್ಥಾಪಿತವಾಗಲಿ ಎಂದು ಎಲ್ಲರೂ ಆಶಿಸುತ್ತಾರೆ. ಆದರೆ ಕೇವಲ ಆಶಾಭಾವನೆ ಶಾಂತಿಯನ್ನು ಹುಟ್ಟಿಸಲಾರದು. ಇಲ್ಲಿ ಸಹ ಶಾಂತಿಯ ಅಭಿಲಾಷೆಯು ಸ್ವಾರ್ಥ ಸಾಧನೆ ಹೊಂದಿರುತ್ತದೆ. ಲೋಕದಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ.

"ಲೋಕದಲ್ಲಿ ಸಾಮಾನ್ಯ ಜನರಲ್ಲೂ ರಾಜಕೀಯ ನಾಯಕರಲ್ಲೂ ಇದನ್ನೇ ಕಾಣುತ್ತಿದ್ದೇವೆ. ರಾಜಕಾರಣಿಗಳ ಪರಸ್ಪರ ಜಗಳಗಳ ಮತ್ತು ಅಧಿಕಾರವನ್ನು ಗಳಿಸಿದಾಗ ಪರಸ್ಪರ ದೌರ್ಜನ್ಯ ನಮ್ಮ ದೇಶಗಳಲ್ಲಿಯೇ ನಾವು ಕಾಣುತ್ತಿದ್ದೇವೆ. ಒಬ್ಬರಿನ್ನೊಬ್ಬರ ವಿರುದ್ಧ ಮಾಡುವ ಕ್ರಮಗಳು ಇಂತಹ ಯೋಚನೆಗಳ ಪರಿಣಾಮವಾಗಿವೆ. ಕೇವಲ ಶಾಂತಿಯನ್ನು ಆಶಿಸುವುದು ಕಲಹಕ್ಕೆ ಕಾರಣವಾಗುವುದು. ಏಕೆಂದರೆ ಈ ಆಶೆಯಲ್ಲಿ ಸ್ವಾರ್ಥ ಅಡಕವಾಗಿದೆ. ಶಾಂತಿಯನ್ನು ಆಶಿಸುವವರು ಹೇಗೆ ಇಚ್ಚಿಸುತ್ತಾರೆಂದರೆ ಕೇವಲ ಅವರಿಗೆ, ಅವರ ಸಮೀಪವಾಗಿರುವವರಿಗೆ, ಅವರ ಕೋಮಿಗೆ ಶಾಂತಿ ಲಭಿಸಲಿ ಎಂದು. ಅವರು ಅನ್ಯರ ಬಗ್ಗೆ ಮತ್ತು ಅವರ ಶತ್ರುಗಳು ಇಚ್ಚಿಸುವುದೇನೆಂದರೆ ಅವರ ಶಾಂತಿ ಅಳಿಸಿಬಿಡಬೇಕು ಎಂದು. ಆದುದರಿಂದ ನಮಗೊಂದು ನೀತಿ, ಬೇರೆಯವರಿಗೆ ಇನ್ನೊಂದು ನೀತಿ ಎಂಬ ತತ್ವ ಪ್ರಕಾರ ಲೋಕದಲ್ಲಿ ಶಾಂತಿ ಸ್ಥಾಪಿಸುವುದಾದರೆ ಅಂತಹ ಶಾಂತಿ ಕೆಲವು ಜನರಿಗೆ ಮಾತ್ರ ಸಿಗುವುದು. ಲೋಕದಾದ್ಯಂತ ಶಾಂತಿ ಸ್ಥಾಪಿತವಾಗಲಾರದು. ಲೋಕದಾದ್ಯಂತ ಶಾಂತಿಯು ಸ್ಥಾಪಿತವಾಗುವುದಿಲ್ಲವಾದರೆ ಅದನ್ನು ನೈಜ ಶಾಂತಿ ಎಂದು ಕರೆಯಲಾಗದು. ನೈಜ ಶಾಂತಿಯನ್ನು ಕೌಟುಂಬಿಕ, ಕೋಮು ಸಂಬಂಧವಾದ ವಂಶೀಯ, ರಾಷ್ಟ್ರೀಯ ಆದ್ಯತೆಗಳನ್ನು ಕಡೆಗಣಿಸಿ ಸ್ಥಾಪಿಸಲು ಪ್ರಯತ್ನಿಸಬೇಕು. ಕೇಂದ್ರ ಅಕ್ಷ ರೇಖೆಯನ್ನು ಹುಡುಕಬೇಕು. ಅದು ಸಾಧ್ಯವಾಗುವುದು ಹೀಗೆ: ಪ್ರತಿಯೊಬ್ಬ ಮನುಷ್ಯನು ಹೀಗೆ ಮನವರಿಕೆ ಮಾಡಿಕೊಳ್ಳಬೇಕು, ತಿಳುವಳಿಕೆ ಗಳಿಸಬೇಕು. ನನ್ನ ಮೇಲೆ ಒಂದು ಉನ್ನತ ಅಸ್ತಿತ್ವವಿದೆ ಆ ಉನ್ನತ ಅಸ್ತಿತ್ವ ನನ್ನ ಮನೆಯ ಮತ್ತು ದೇಶದ ಶಾಂತಿಯನ್ನು ಇಚ್ಛಿಸುವುದರೊಂದಿಗೆ ಎಲ್ಲ ದೇಶಗಳಲ್ಲೂ ಶಾಂತಿಯನ್ನು ಬಯಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನೀಡಿದ ಉಪದೇಶ ಈ ಕೇಂದ್ರ ಬಿಂದುವಿನ ಬಗ್ಗೆ ಹೀಗೆ ವಿಶ್ವಾಸ ಹೊಂದುವುದಾಗಿದೆ – ಒಂದು ಉನ್ನತ ಅಸ್ತಿತ್ವ ನನ್ನನ್ನು ವೀಕ್ಷಿಸುತ್ತಿದೆ. ನಾನು ನನ್ನ ನಡೆ ನುಡಿಗಳನ್ನು ಸರಿಪಡಿಸಬೇಕಾಗಿದೆ.

"ಯಾವಾಗಲೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ)

ಉಪದೇಶಿಸಿದ ಈ ಸುವರ್ಣ ತತ್ವವನ್ನು ನಿಮ್ಮ ಮುಂದೆ ಇರಿಸಬೇಕು. ನೀವು ನಿಮಗೆ ಇಷ್ಟಪಡುವುದನ್ನು ಅನ್ಯರಿಗೂ ಇಷ್ಟಪಡಿರಿ.

"ಆದುದರಿಂದ ನಮ್ಮ ಇಹಲೋಕ ಜೀವನವನ್ನೂ ಪರಲೋಕ ಜೀವನವನ್ನೂ ಸರಿಪಡಿಸಬೇಕಾದರೆ ಮತ್ತು ಶಾಂತಿ ಮತ್ತು ಸಮಾಧಾನದೊಂದಿಗೆ ಜೀವಿಸಬೇಕಾದರೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣವಾದ ಅಲ್ಲಾಹನ ಸಂದೇಶವಾಣಿಯನ್ನು ಯಾವಾಗಲೂ ನಮ್ಮ ಮುಂದೆ ಇರಿಸಬೇಕಾಗಿದೆ. ಅದು ಹೀಗೆ:

**ಯಹ್‌ದೀ ಬಿಹಿಲ್ಲಾಹು ಮನಿತ್ತಬಅ ರಿಝ್ವಾನಹೂ ಸುಬುಲಸ್ಸಲಾಮ.**

**'ಅಲ್ಲಾಹನು ಅದರ ಮೂಲಕ (ಎಂದರೆ ಪ್ರಕಾಶಮಾನವಾದ ಗ್ರಂಥವಾಗಿರುವ ಪವಿತ್ರ ಖುರ್‌ಆನ್ ಮೂಲಕ) ತನ್ನ ಸಂಪ್ರೀತಿಯನ್ನು ಬಯಸುವವರಿಗೆ ರಕ್ಷಾಮಾರ್ಗದ ಕಡೆಗೆ ದಾರಿ ತೋರಿಸುತ್ತಾನೆ.'**

(ಪವಿತ್ರ ಖುರ್‌ಆನ್ 5:17)

"ನೀವು ಯಾವಾಗಲೂ ಪ್ರಕಾಶಮಾನವಾದ ಈ ಗ್ರಂಥದ ಮಾರ್ಗದರ್ಶನಗಳನ್ನು ನಿಮ್ಮ ಮುಂದೆ ಇರಿಸಿರಿ. ಈ ಪ್ರಕಾಶಮಾನವಾದ ಗ್ರಂಥದ ಮಾರ್ಗದರ್ಶನಗಳನ್ನು ಓದಬೇಕು ಮತ್ತು ನಮ್ಮ ಮುಂದೆ ಇರಿಸಿಕೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ರಕ್ಷಾ ಮಾರ್ಗದಲ್ಲಿ ನಾವು ಚಲಿಸುವವರಾಗುವೆವು. ಈ ಗ್ರಂಥದ ಯಾವುದೇ ಉಪದೇಶ ಶಾಂತಿಯನ್ನು ನಾಶಮಾಡುವಂತಹದ್ದು ಅಲ್ಲ. ನಮ್ಮವರಿಗೂ ಅನ್ಯರಿಗೂ ಈ ಸಂದೇಶ ನೀಡಬೇಕಾದುದು ನಮ್ಮ ಕೆಲಸವಾಗಿದೆ. ಇದುವೇ ಲೋಕದಲ್ಲಿ ಶಾಂತಿಯ ಖಾತರಿ ನೀಡುವಂತಹದ್ದಾಗಿದೆ.

"ಈಗ ಈ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ಗೆ ವಹಿಸಿಕೊಡಲಾಗಿದೆ. ನಾವು ನಮ್ಮ ಮನೆಗಳಲ್ಲಿಯೂ ಅಂತರಾಷ್ಟ್ರೀಯ ಮಟ್ಟದಲ್ಲೂ ಇದಕ್ಕನುಸಾರವಾಗಿ ನಮ್ಮ ಕರ್ತವ್ಯಗಳನ್ನು ಈಡೇರಿಸದಿದ್ದರೆ ನಾವು ಶಾಂತಿ ಮತ್ತು ಸುರಕ್ಷೆಯಲ್ಲಿ ಜೀವಿಸುವ ಯಾವುದೇ ಖಾತರಿ ಇರುವುದಿಲ್ಲ. ನಮ್ಮ ಪೀಳಿಗೆಗಳು ಸಹ ಶಾಂತಿ ಮತ್ತು ಸುರಕ್ಷೆಯಲ್ಲಿ ಜೀವಿಸುವ ಖಾತರಿ ಇರುವುದಿಲ್ಲ. ಲೋಕ ಸಹ ಶಾಂತಿ ಮತ್ತು ಸುರಕ್ಷೆಯಲ್ಲಿರುವ ಖಾತರಿ ಇಲ್ಲ. ಅಲ್ಲಾಹನು ಲೋಕವನ್ನು ಅಂಧಕಾರದಿಂದ ಬೆಳಕಿನ ಕಡೆಗೆ ಒಯ್ಯುವವರನ್ನಾಗಿ ನಮ್ಮನ್ನು ಮಾಡಲಿ. ನಾವು ಈ ಹೊಣೆಗಾರಿಕೆಯನ್ನು ಅತ್ಯುತ್ತಮ ರೀತಿಯಲ್ಲಿ ಈಡೇರಿಸುವವರಾಗಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ." (ಸಮಾರೋಪ ಭಾಷಣ ಜಲ್ಸಾ ಸಾಲಾನ ಜರ್ಮನಿ ಸೆಪ್ಟಂಬರ್ 2022).

**(ಅಹ್ಮದಿಯಾ ಕೇಂದ್ರ ಖಾದಿಯಾನಿನಲ್ಲಿ ಜರಗಿದ ವಾರ್ಷಿಕ ಸಮ್ಮೇಳನದಲ್ಲಿ 2022 ಡಿಸೆಂಬರ್ 23ರಂದು ಮಾಡಿದ ಭಾಷಣ. ಕನ್ನಡಕ್ಕೆ: ಎಮ್. ಉಬೈದುಲ್ಲಾ)**

♦

**SWORDS CAN WIN TERRITORIES**
**BUT NOT HEARTS.**
**FORCES CAN BEND HEADS**
**BUT NOT MINDS.**

**- Hazrat Mirza Tahir Ahmad, Khalifathul Masih IV**

**ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು**
**ಆದರೆ ಹೃದಯಗಳನ್ನಲ್ಲ.**
**ಬಲದಿಂದ ಶಿರಗಳನ್ನು ಬಾಗಿಸಬಹುದು**
**ಆದರೆ ಮನಸ್ಸುಗಳನ್ನಲ್ಲ.**

**– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫ**

# ನೀನು ಮಾಡು – ಮಾಡಬೇಡ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)

## 6 – ಧರ್ಮಕ್ಕೆ ಸಂಬಂಧಿಸಿದ ವಿಷಯಗಳು

1. ನೀನು ದೇವನು ಏಕನೆಂದು ಸಾಕ್ಷ್ಯ ಹೇಳು. ಅದನ್ನು ನೀನು ಸ್ವತಃ ಮನವರಿಕೆ ಮಾಡಿಕೊಳ್ಳು.
2. ನೀನು ಐದು ಹೊತ್ತು ನಮಾಝನ್ನು ಸಮಯಕ್ಕೆ ಸರಿಯಾಗಿ ಮತ್ತು ಸಾಮೂಹಿಕವಾಗಿ ಮಾಡು. (ಜಮಾಅತಾಗಿ ನಿರ್ವಹಿಸು).
3. ನೀನು ಪ್ರಯಾಣಿಕ ಅಥವಾ ರೋಗಿ ಆಗಿಲ್ಲವಾದರೆ ರಮಝಾನ್ ತಿಂಗಳ ಉಪವಾಸಗಳನ್ನು ಅನುಷ್ಠಿಸು.
4. ನಿನ್ನಲ್ಲಿ ಸಂಪತ್ತು ಇದ್ದರೆ ಝಕಾತ್ ಕೊಡು.
5. ನಿನಗೆ ಹಜ್ಜ್ ಮಾಡುವುದು ಕಡ್ಡಾಯವಾದಾಗ ಹಜ್ಜ್ ಮಾಡು.
6. ನೀನು ನಿನ್ನ ಧಾರ್ಮಿಕ ವಿಶ್ವಾಸವನ್ನು ರಕ್ಷಿಸು. ಅದು ಅತ್ಯಂತ ಅಮೂಲ್ಯವಾದುದು.
7. ನಿನ್ನ ಆತ್ಮ ಅಲ್ಲಾಹನ ಮಸ್‌ಜಿದ್‌ಗಳಲ್ಲಿ ಸುಖಾನುಭೂತಿ ಹೊಂದಿರಬೇಕು.
8. ನಿನ್ನ ಹೃದಯ ಅಲ್ಲಾಹನ ಸ್ಮರಣೆಯಿಂದ ನೆಮ್ಮದಿ ಗಳಿಸಬೇಕು.
9. ನೀನು ಪರಿಶುದ್ಧವೂ ಧರ್ಮಬದ್ಧವೂ ಆಗಿರುವ ಆಹಾರವನ್ನು ಮಾತ್ರ ತಿನ್ನು.
10. ನೀನು ಅಲ್ಲಾಹನ ಸಂಪ್ರೀತಿ ಗಳಿಸಲು ಯಾವಾಗಲೂ ಪ್ರಯತ್ನಿಸು.
11. ನೀನು ಅಲ್ಲಾಹನನ್ನು ಗುರುತಿಸುವವನಾಗು.
12. ನೀನು ಎಂದೂ ಅಲ್ಲಾಹನನ್ನು ದೂರಬೇಡ.
13. ನೀನು ಹಝ್ರತ್ ಮುಹಮ್ಮದ್ ಪೈಗಂಬರರ ಹೆಸರನ್ನು ಹೇಳುವಾಗ ಅಥವಾ ಆಲಿಸುವಾಗ "ಸಲ್ಲಲ್ಲಾಹು ಅಲೈಹಿ ವಸಲ್ಲಮ್" ಎಂದು ಪ್ರಾರ್ಥಿಸು..
14. ಅನ್ಯ ಪ್ರವಾದಿಗಳ ಹೆಸರು ಹೇಳುವಾಗ ಅಲೈಹಿಸ್ಸಲಾಮ್ ಎಂದು ಹೇಳು.
15. ನೀನು ಪ್ರವಾದಿ ಶಿಷ್ಯರ ಹೆಸರನ್ನು ಹೇಳುವಾಗ ರಝಿಯಲ್ಲಾಹು ಅನ್‌ಹು ಎಂದು ಹೇಳು.
16. ಮೃತರಾದ ಧಾರ್ಮಿಕ ಮಹಾನುಭಾವರ ಹೆಸರನ್ನು ಹೇಳುವಾಗ ರಹ್ಮತುಲ್ಲಾಹಿ ಅಲೈಹಿ ಎಂದು ಹೇಳು.
17. ನೀನು ಅಲ್ಲಾಹನನ್ನು ನಿನ್ನ ಮತ್ತು ಸಕಲ ಲೋಕಗಳ ಸೃಷ್ಟಿಕರ್ತನೆಂದೂ ಪಾಲನೆ ಪೋಷಣೆ ಮಾಡುವವನೆಂದೂ ದೃಢವಾಗಿ ನಂಬು.
18. ಶರೀಅತ್‌ಗೆ ವಿರುದ್ಧವಾದ ಫ್ಯಾಶನನ್ನು ಹೊರತುಪಡಿಸಿ ನೀನು ಜೀವಿಸುವ ದೇಶದ ಫ್ಯಾಶನನ್ನು ಅಂಗೀಕರಿಸಬಹುದು.
19. ನಿನಗೆ ಆವಶ್ಯಕವಾದ ಎಲ್ಲ ಧಾರ್ಮಿಕ ಆವಶ್ಯಕತೆಗಳ ಬಗ್ಗೆ ಮಾಹಿತಿ ಪವಿತ್ರ ಖುರ್‌ಆನ್, ಹದೀಸ್ ಮತ್ತು ವಾಗ್ದತ್ತ ಮಸೀಹರ ಪುಸ್ತಕಗಳಲ್ಲಿವೆ.
20. ಹೇ ಮಹಿಳೆ, ನೀನು ಮಾರ್ಗದಲ್ಲಿ ಪರದೆ ಧರಿಸಿ ಹೋಗುವಾಗ ನಿನ್ನ ಮುಖದ ಒಂದು ಭಾಗ ನೀನು ಹೋಗುವಾಗ ಮತ್ತು ಮುಖದ ಇನ್ನೊಂದು ಭಾಗ ನೀನು ಮರಳಿ ಬರುವಾಗ ಜನರು ನೋಡುವಂತಿರಬಾರದು..
21. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಖಾತಮುನ್ನಬಿಯ್ಯೀನ್ ಎಂದು ನೀನು ನಂಬಬೇಕು.
22. ನೀನು ಮಸೀಹ್ ಮೌಊದ್‌ರನ್ನು(ಅ) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಮ್ಮತೀ ನಬಿ ಎಂದು ನಂಬಬೇಕು. ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಪರಿಪೂರ್ಣವಾಗಿ ಅನುಸರಿಸಿದುದರಿಂದ ವಾಗ್ದತ್ತ ಮಸೀಹರಿಗೆ(ಅ) ನುಬುವ್ವತ್ ದೊರಕಿತು.
23. ಹಝ್ರತ್ ಮೌಲಾನಾ ನೂರುದ್ದೀನ್ ರಝಿಯಲ್ಲಾಹು ಅನ್‌ಹುರನ್ನು ಹಝ್ರತ್ ಮಸೀಹ್ ಮೌಊದರ(ಅ) ಪ್ರಥಮ ಖಲೀಫ ಎಂದು ತಿಳಿದುಕೊಳ್ಳು.
24. ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ರಝಿಯಲ್ಲಾಹು ಅನ್‌ಹುರನ್ನು ಹಝ್ರತ್ ಮಸೀಹ್ ಮೌಊದರ(ಅ) ದ್ವಿತೀಯ ಖಲೀಫರೆಂದೂ ಮನವರಿಕೆ ಮಾಡಿಕೊಳ್ಳು. ಮುಸ್ಲಿಹ್ ಮೌಊದ್ ಎಂದೂ ದೃಢನಂಬಿಕೆ ಹೊಂದು.
25. ನೀನು ಅಹ್ಮದಿಯ ಹೊರತು ಬೇರೆ ಯಾರ ನೇತೃತ್ವದಲ್ಲಿಯೂ ನಮಾಝ್ ಅನುಷ್ಠಿಸಬೇಡ.
26. ಅಹ್ಮದಿಯೇತರನ ಜನಾಝ ನಮಾಝ್ ಅನುಷ್ಠಿಸಬೇಡ.
27. ಅಹ್ಮದಿ ಮಹಿಳೆಯ ವಿವಾಹ ಅಹ್ಮದಿಯೇತರನೊಂದಿಗೆ ನಡೆಯದಂತೆ ನೋಡಿಕೊಳ್ಳು.
28. ನೀನು ಇಸ್ಲಾಮ್ ಮತ್ತು ಅಹ್ಮದಿಯ್ಯತಿನ ಪ್ರಚಾರದ ಬಗ್ಗೆ ನಿರ್ಲಕ್ಷ್ಯ ಹೊಂದಬೇಡ.
29. ನೀನು ನೆನಪಿಡು – ಅಲ್ಲಾಹನ ಸನ್ನಿಧಿಯಲ್ಲಿ ಎಲ್ಲ ಗೌರವ ಸಿಗುವುದು ಭಯಭಕ್ತಿ (ತಖ್ವಾ) ಉಳ್ಳವನಿಗಾಗಿದೆ.
30. ನೀನು ನಿನ್ನ ಸ್ವಪ್ನಗಳನ್ನು ಲಕ್ಷಿಸು. ಅವುಗಳನ್ನು ಬರೆದಿಡು.
31. ನೀನು ಅಲ್ಲಾಹನನ್ನು ಎಲ್ಲ ವಿಚಾರಗಳಲ್ಲೂ ಸರ್ವಶಕ್ತನೆಂದು ತಿಳಿದುಕೊಳ್ಳು.

32. ನೀನು ಅಲ್ಲಾಹನನ್ನು ಅದೃಶ್ಯ ಕಾರ್ಯಗಳನ್ನು ಅರಿಯುವವನೆಂದು ದೃಢವಾಗಿ ನಂಬು.

33. ನೀನು ಅಲ್ಲಾಹನನ್ನು ಪರಮದಯಾವಂತನೂ ಕಾರುಣ್ಯನಿಧಿಯೂ ಆಗಿರುವನೆಂದು ತಿಳಿದುಕೊಳ್ಳು.

34. ನೀನು ಪವಿತ್ರ ಖುರ್‌ಆನಿನ ವಚನಗಳನ್ನು ಓದಿ ಚಿಂತಿಸು.

35. ನಿನ್ನ ದೇವನು ಎಂದೂ ದೌರ್ಜನ್ಯ ಮಾಡುವುದಿಲ್ಲ ಎಂದು ನೀನು ನಂಬು.

36. ಎಲ್ಲ ಪ್ರವಾದಿಗಳು ನಿಷ್ಕಳಂಕರೆಂದು ನೀನು ನಂಬು.

37. ನಿನ್ನ ದೇವನು ಎಲ್ಲ ನ್ಯೂನತೆಗಳಿಂದ ಮುಕ್ತನಾದವನೆಂದು ನೀನು ನಂಬು.

38. ಅಲ್ಲಾಹನ ಎಲ್ಲ ಗುಣಗಳು ಮತ್ತು ಕಾರ್ಯಗಳು ಸ್ತುತ್ಯರ್ಹವಾಗಿವೆ ಎಂದು ನೀನು ನಂಬು.

39. ಅಲ್ಲಾಹನಿಗೆ ಭಾಗೀದಾರನಿಲ್ಲ ಎಂದು ನೀನು ದೃಢವಾಗಿ ನಂಬು.

40. ನೀನು ಪ್ರತಿದಿನ ಪವಿತ್ರ ಖುರ್‌ಆನ್ ಪಾರಾಯಣ ಅವಶ್ಯಕವಾಗಿ ಮಾಡು.

41. ನೀನು ನಿನ್ನ ಜೀವ, ಮಕ್ಕಳು, ಪತ್ನಿ, ಸಂಪತ್ತು ಮತ್ತು ಇತರ ಎಲ್ಲ ವಸ್ತುಗಳಿಗಿಂತ ಅಲ್ಲಾಹನನ್ನು ಪ್ರೀತಿಸು.

42. ನೀನು ಅಲ್ಲಾಹನು ನೀಡಿದ ಅನುಗ್ರಹಗಳನ್ನು ಕೃತಜ್ಞತೆಯಿಂದ ಕಾಣುವ ಸ್ವಭಾವವನ್ನು ಹೊಂದು ಮತ್ತು ಅಲ್ಲಾಹನಿಗೆ ವಿಧೇಯನಾಗಿರು.

43. ಅಲ್ಲಾಹನು ಎಂದೂ ದೌರ್ಜನ್ಯ ಮಾಡುವುದಿಲ್ಲ ಎಂದು ನೀನು ನಂಬು.

44. ಅಲ್ಲಾಹನ ಯಾವುದೇ ಕೆಲಸ ನಿರರ್ಥಕವಲ್ಲವೆಂದು ನಂಬು.

45. ನೀನು ಏಕಾಂತದಲ್ಲಿ ಅಲ್ಲಾಹನ ಬಗ್ಗೆ ಭಯಪಡು.

46. ನೀನು ಧಾರ್ಮಿಕ ವಿಷಯದಲ್ಲಿ ಜ್ಞಾನಗಳಿಸು. ಅಂಧವಿಶ್ವಾಸ ಹೊಂದಬೇಡ.

47. ನೀನು ರಾತ್ರಿಯ ಅಂತಿಮ ಯಾಮದಲ್ಲಿ ತಹಜ್ಜುದ್ ನಮಾಝ್ ಅನುಷ್ಠಿಸು.

48. ನೀನು ಪ್ರತಿಯೊಂದು ಕೆಲಸ ಪ್ರಾರಂಭಿಸುವ ಮೊದಲು ಇಸ್ತಿಖಾರ ಪ್ರಾರ್ಥನೆ ಮಾಡು. ಎಂದರೆ ಅಲ್ಲಾಹನಿಂದ ಸಹಾಯ ಬೇಡುವ ಪ್ರಾರ್ಥನೆ ಮಾಡು.

49. ನೀನು ತಾಯಿತಿ, ಮಂತ್ರವಾದಗಳಿಂದ ದೂರವಿರು.

50. ನೀನು ಅಲ್ಲಾಹನ ಚಿಹ್ನೆಗಳನ್ನು ಗೌರವಿಸು.

51. ನೀನು ಬಡ್ಡಿ ತಿನ್ನಬೇಡ.

52. ನೀನು ಸದಾ ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡು.

53. ನೀನು ಪ್ರತಿಯೊಂದು ಕಷ್ಟ ಮತ್ತು ಆವಶ್ಯಕತೆ ಉಂಟಾಗುವಾಗ ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿ ಪ್ರಾರ್ಥಿಸುವ ಸ್ವಭಾವ ಹೊಂದು.

54. ನೀನು ಯಾವಾಗಲೂ ಸತ್ಯ ಹೇಳುವವನಾದರೆ ನಿನಗೆ ಸತ್ಯವಾದ ಕನಸುಗಳೇ ಕಾಣಿಸುವುವು.

55. ನೀನು ದೇವನನ್ನು ನಂಬು.

56. ನೀನು ದೇವದೂತರನ್ನು ನಂಬು.

57. ನೀನು ಅಲ್ಲಾಹನ ಎಲ್ಲ ಗ್ರಂಥಗಳನ್ನು ನಂಬು.

58. ನೀನು ಅಲ್ಲಾಹನ ಎಲ್ಲ ಸಂದೇಶವಾಹಕರನ್ನು ನಂಬು.

59. ನೀನು ಪುನರುತ್ಥಾನ, ಶಿಕ್ಷೆ ರಕ್ಷೆ, ಸ್ವರ್ಗ ನರಕಗಳಿವೆ ಎಂದು ನಂಬು.

60. ಒಳ್ಳೆಯದು ಕೆಟ್ಟದು ಅಲ್ಲಾಹನ ಇಷ್ಟ ಪ್ರಕಾರವೆಂದು ನೀನು ನಂಬು.

61. ನೀನು ಧಾರ್ಮಿಕ ಜ್ಞಾನ ಗಳಿಸಲು ಯಾವಾಗಲೂ ಪ್ರಯತ್ನಿಸುತ್ತಾ ಇರು.

62. ನೀನು ನಿನ್ನ ಬಲಹೀನತೆಗಳಿಗೋಸ್ಕರ ಮತ್ತು ಪಾಪಗಳಿಗೋಸ್ಕರ ದಿನಂಪ್ರತಿ ಇಸ್ತಿಗ್‌ಫಾರ್ ಪ್ರಾರ್ಥನೆ (ಕ್ಷಮಾಯಾಚನೆ) ಮಾಡುತ್ತಾ ಇರು.

63. ನೀನು ನಿನ್ನ ಬಗ್ಗೆ, ನಿನ್ನ ಹಿರಿಯರ ಬಗ್ಗೆ, ನಿನ್ನ ಕುಟುಂಬದ ಬಗ್ಗೆ ಮತ್ತು ಜಮಾಅತಿನ ಬಗ್ಗೆ ಪ್ರಾರ್ಥಿಸುತ್ತಾ ಇರಬೇಕು.

64. ನೀನು ಅಹ್ಮದಿಯ್ಯತ್ ಮತ್ತು ಇಸ್ಲಾಮಿನ ಅಭಿವೃದ್ಧಿಗೋಸ್ಕರ ಯಾವಾಗಲೂ ಪ್ರಯತ್ನಿಸುತ್ತಾ ಇರು.

65. ನೀನು ಪ್ರತಿದಿನ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ದುರೂದ್ ಪ್ರಾರ್ಥನೆ ಮಾಡು. ಹಝ್ರತ್ ಮಸೀಹ್ ಮೌಊದ್‌ರಿಗೂ(ಅ) ಪ್ರಾರ್ಥಿಸು.

66. ನೀನು ಪವಿತ್ರ ಖುರ್‌ಆನಿನ ಆಜ್ಞೆಗಳಿಗೆ ಬೇರೆ ಎಲ್ಲದರ ಮೇಲೆ ಆದ್ಯತೆ ನೀಡು.

67. ನೀನು ನಿನ್ನ ಸ್ವಭಾವಗುಣಗಳನ್ನು, ಅಲ್ಲಾಹನ ಸ್ವಭಾವ ಗುಣಗಳನ್ನು ಮಾದರಿಯಾಗಿಟ್ಟುಕೊಂಡು ರೂಪಿಸು.

68. ನೀನು ಅನಾವಶ್ಯಕವಾಗಿ ನಾಯಿಗಳನ್ನು ಸಾಕಬೇಡ – ಮನೆಗಳನ್ನು ಕಾವಲು ಕಾಯಲಿಕ್ಕಾಗಿ ಅಥವಾ ಬೇಟೆಯಾಡಲಿಕ್ಕಾಗಿ ಹೊರತು.

69. ಊಟ ಮಾಡುವ ಮೊದಲು ಬಿಸ್ಮಿಲ್ಲಾಹ್ (ಅಲ್ಲಾಹನ ನಾಮದಿಂದ) ಎಂದು ಉಚ್ಚರಿಸು.

70. ಊಟ ಮಾಡಿ ಮುಗಿಸಿದಾಗ ಅಲ್‌ಹಮ್‌ದುಲಿಲ್ಲಾಹ್ (ಎಲ್ಲ

ಸ್ತುತಿಗಳು ಅಲ್ಲಾಹನಿಗೆ) ಎಂದು ಹೇಳು.

71. ನಿನ್ನ ಜೀವಿತದ ಪ್ರತಿಯೊಂದು ಮುಹೂರ್ತದಲ್ಲಿ ಉಚ್ಚರಿಸಬೇಕಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಾರ್ಥನೆಗಳನ್ನು ನೆನಪಿನಲ್ಲಿಡಲು ಪ್ರಯತ್ನಿಸು.

72. ನೀನು ಒಳ್ಳೆಯದನ್ನು ಉಪದೇಶಿಸು.

73. ನೀನು ಕೆಡುಕಿನಿಂದ ತಡೆ.

74. ನೀನು ನಿನ್ನ ಯಜಮಾನನ ನಿಷ್ಠಾವಂತ ನೌಕರನಾಗು.

75. ನೀನು ಅಲ್ಲಾಹನು ಪ್ರೀತಿಸುವುದನ್ನು ಪ್ರೀತಿಸು. ಅಲ್ಲಾಹ್ ಇಷ್ಟಪಡದುದನ್ನು ನೀನು ಸಹ ಇಷ್ಟಪಡಬೇಡ.

76. ನೀನು ಹಿರಿಯರ ಮತ್ತು ಸಾತ್ವಿಕರ ಜೊತೆ ಕುಳಿತುಕೊಳ್ಳು.

77. ನೀನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮತ್ತು ಇತರ ಪ್ರವಾದಿಗಳ ಹಾಗೂ ಸಂತರ ಜೀವನ ಚರಿತ್ರೆಗಳನ್ನು ಓದುತ್ತಾ ಇರು.

78. ನಿನ್ನ ಒಳ್ಳೆಯತನಕ್ಕಾಗಿ ಜನರು ನಿನ್ನ ಬಗ್ಗೆ ಗೌರವವುಳ್ಳವರಾಗಲಿ, ನಿನ್ನ ಅಹಂಕಾರ ಮತ್ತು ಐಶ್ವರ್ಯದ ಕಾರಣದಿಂದಲ್ಲ.

79. ನೀನು ನಿನ್ನನ್ನು ಭೇಟಿಯಾಗುವವರಿಗೆ ಮೊದಲು ಸಲಾಮ್ ಹೇಳಲು ಪ್ರಯತ್ನಿಸು.

80. ನೀನು ನಿನಗೆ ಮೋಕ್ಷ ಸಿಗುವುದು ಅಲ್ಲಾಹನ ಅನುಗ್ರಹದಿಂದಲ್ಲದೆ ನಿನ್ನ ಸತ್ಕಾರ್ಯಗಳಿಂದಲ್ಲ ಎಂದು ತಿಳಿದುಕೊಳ್ಳು. ಆದರೆ ಸತ್ಕಾರ್ಯಗಳು ಅಲ್ಲಾಹನ ಅನುಗ್ರಹವನ್ನು ಗಳಿಸುತ್ತವೆ ಎಂದು ತಿಳಿದುಕೋ.

81. ನೀನು ಮುಸ್ಲಿಮರ ಜನಾಝ ನಮಾಝ್‌ಗಳಲ್ಲಿ ಸೇರಲು ಸಾಧ್ಯವಿರುವಷ್ಟು ಪ್ರಯತ್ನ ಮಾಡು.

82. ನೀನು ಪ್ರತಿದಿನ ಸ್ವಲ್ಪ ಸಮಯ ಅಲ್ಲಾಹನನ್ನು ಸ್ಮರಿಸುತ್ತಾ ಏಕಾಂತದಲ್ಲಿರಲು ಪ್ರಯತ್ನಿಸು.

83. ನೀನು ನಿನಗೆ ಉಪಕಾರ ಮಾಡಿದವರಿಗೋಸ್ಕರ ಪ್ರಾರ್ಥಿಸುತ್ತಾ ಇರು.

84. ನೀನು ಪವಿತ್ರ ಖುರ್‌ಆನಿನ ಅರ್ಥ ತಿಳಿಯುವುದನ್ನು ನಿನ್ನ ಮೇಲೆ ಕಡ್ಡಾಯಗೊಳಿಸು.

85. ನೀನು ಸೃಷ್ಟಿಗಳನ್ನು ಪೂಜಿಸದಿರು.

86. ನೀನು ಗೋರಿಗಳನ್ನು ಪೂಜಿಸಬೇಡ.

87. ನೀನು ತಾಝಿಯದ ಪೂಜೆ ಮಾಡಬೇಡ.

88. ನೀನು ಪೀರರನ್ನು ಆರಾಧಿಸಬೇಡ.

89. ನೀನು ಪುಣ್ಯ ಪುರುಷರ ಅವಶೇಷಗಳನ್ನು ಪೂಜಿಸಬೇಡ.

90. ನೀನು ವಿಗ್ರಹಾರಾಧನೆ ಮಾಡಬೇಡ.

91. ನೀನು ನಿಷಿದ್ಧ ವಸ್ತುಗಳನ್ನು ಅಥವಾ ನಿಷಿದ್ಧ ಕೆಲಸಗಳಿಂದ ಸಂಪಾದಿಸಿದುದನ್ನು ತಿನ್ನಬೇಡ. ಅಂತಹ ಜನರ ಪ್ರಾರ್ಥನೆ ಸ್ವೀಕರಿಸಲ್ಪಡಲಾರದು.

92. ನೀನು ಪ್ರತಿದಿನ ಒಮ್ಮೆಯಾದರೂ ಅಲ್ಲಾಹನ ಮುಂದೆ ಅತ್ತು ಪ್ರಾರ್ಥಿಸು.

93. ನೀನು ಖಬರಸ್ಥಾನಗಳಿಗೆ ಹೋಗಿ ಸಹ ನೀತಿಪಾಠಗಳನ್ನು ಕಲಿತುಕೊಳ್ಳು.

94. ನೀನು ಅಲ್ಲಾಹನ ಸೃಷ್ಟಿಗಳಲ್ಲಿ ಅಲ್ಲಾಹನ ಸೃಷ್ಟಿ ಸೌಂದರ್ಯ ಮತ್ತು ಸೃಷ್ಟಿಯ ಉದ್ದೇಶದ ಬಗ್ಗೆ ಅನ್ವೇಷಣೆ ನಡೆಸು.

95. ನೀನು ಅನಿಸ್ಲಾಮಿಕ ಆಚಾರಗಳನ್ನೂ ಮುಸ್ಲಿಮೇತರರ ಆಚಾರಗಳನ್ನೂ ಅನುಷ್ಠಾನಕ್ಕೆ ತರಬಾರದು.

96. ನೀನು ಲೌಕಿಕತೆಯ ಮೇಲೆ ಹೆಚ್ಚು ಆಸಕ್ತನಾಗಬೇಡ. ಅಲ್ಲಾಹನನ್ನು ದರ್ಶಿಸುವ ಅಭಿಲಾಷೆಯನ್ನು ಹೊಂದು.

97. ನೀನು ಇಹಲೋಕ ಜೀವಿತ ತಾತ್ಕಾಲಿಕವೆಂದೂ ಪರಲೋಕ ಜೀವಿತ ಶಾಶ್ವತವೆಂದೂ ಗಣಿಸಿ ಅದಕ್ಕೋಸ್ಕರ ಸಾಧ್ಯವಿರುವಷ್ಟು ಸಿದ್ಧತೆಗಳನ್ನು ಮಾಡು.

98. ನೀನು ಇಹಲೋಕ ಜೀವಿತಕ್ಕೆ ಸಂಬಂಧಿಸಿ ಬೇಡಿಕೊಳ್ಳುವಾಗ ಪರಲೋಕದ ಬಗ್ಗೆಯೂ ಪ್ರಾರ್ಥಿಸು.

99. ನೀನು ಬುದ್ಧಿವಂತರನ್ನು ಮತ್ತು ಸಾತ್ವಿಕರನ್ನು ಮಾತ್ರ ನಿನ್ನ ಸ್ನೇಹಿತರನ್ನಾಗಿ ಮಾಡಿಕೊಳ್ಳು.

100. ನೀನು ಜಮಾಅತಿನಲ್ಲಿ ಒಡಕಿಗೆ ಕಾರಣವಾಗಬೇಡ.

* * * * *

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

# ಮರೆತುಬಿಡಲು ಅಸಾಧ್ಯವಾದ ಕೆಲವು ನೆನಪುಗಳು

ಲೇಖಕ: ಕೆ.ಎಂ. ಉಮರ್

ಲೋಕದಲ್ಲಿ ಅಂಧಕಾರವೂ ಅಧರ್ಮವೂ ವ್ಯಾಪಿಸುತ್ತಿರುವಾಗ ಅಲ್ಲಾಹನು ತನ್ನ ಮಹತ್ತಾದ ಅನುಗ್ರಹದ ಮೂಲಕ ತನ್ನ ಶ್ರೇಷ್ಠ ದಾಸರನ್ನು ಲೋಕಕ್ಕೆ ಕಳುಹಿಸಿ ಜನರನ್ನು ನೇರಮಾರ್ಗದಲ್ಲಿ ಚಲಿಸುವಂತೆ ಮಾಡುವುದು ಅಲ್ಲಾಹನ ಸ್ಥಿರವಾದ ನಡೆವಳಿಕೆಯಾಗಿದೆ. ಅಲ್ಲಾಹನು ನಿಯೋಜಿಸಿದ ಸತ್ಯಸಂಧರಾದ ಮಹಾತ್ಮರನ್ನು ಮಿಥ್ಯವಾದಿಗಳೆಂದು ಆಕ್ಷೇಪಿಸಿ ವಿರೋಧಿಸಿ ತಮಗೆ ಸಾಧ್ಯವಿರುವ ಸರ್ವಶಕ್ತಿಗಳನ್ನೂ ಬಳಸಿ ಆ ಮಹಾನುಭಾವರನ್ನು ನಾಶಮಾಡಲು ಪ್ರಯತ್ನಿಸುತ್ತಾ ಇರುವುದು ಹಝ್ರತ್ ಆದಮ್ ಅಲೈಹಿಸ್ಸಲಾಮರಿಂದ ಮೊದಲುಗೊಂಡು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನಕದ ಕಾಲಘಟ್ಟಗಳಲ್ಲಿ ಅವರ ಶತ್ರುಗಳು ಅನುಸರಿಸುತ್ತಾ ಬಂದಿರುವ ಕಾರ್ಯ ವಿಧಾನವಾಗಿದೆ. ಆದರೆ ಅಲ್ಲಾಹನು ತನ್ನ ಉದ್ದೇಶಲಕ್ಷ್ಯಗಳನ್ನು ಈಡೇರಿಸುತ್ತಾ ತನ್ನ ಶ್ರೇಷ್ಠ ದಾಸರ ಶತ್ರುಗಳನ್ನು ನಾಶಮಾಡುತ್ತಾ ಇರುವುದಾಗಿ ನಾವು ಪ್ರವಾದಿಗಳ ಚರಿತ್ರೆಯಿಂದ ಮನವರಿಕೆ ಮಾಡಿಕೊಂಡಿರುವೆವು.

ಅಲ್ಲಾಹನು ನಿಯೋಜಿಸಿದ ಅವನ ಶ್ರೇಷ್ಠ ದಾಸರನ್ನು ಅನುಸರಿಸಿದ ಕಾರಣದಿಂದ ಆ ಶ್ರೇಷ್ಠ ದಾಸರ ಅನುಯಾಯಿಗಳು ಸಹ ಧಾರಾಳವಾಗಿ ಕಷ್ಟನಷ್ಟಗಳನ್ನು ಶತ್ರುಗಳಿಂದ ಅನುಭವಿಸಿದರೆಂಬುದು ಒಂದು ಚಾರಿತ್ರಿಕ ಸತ್ಯವಾಗಿದೆ. ಇಂತಹ ಚಾರಿತ್ರಿಕ ಸಂಭವಗಳಲ್ಲಿ ದಾಖಲಿಸಲ್ಪಡಬೇಕಾದ ಒಂದು ಸಂಭವ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಮೊಗ್ರಾಲಿನಲ್ಲಿ ಸಂಭವಿಸಿರುವುದಕ್ಕೆ ನಾನು ದೃಕ್ಸಾಕ್ಷಿಯಾಗಿದ್ದೇನೆ. ಅದನ್ನು ನಾನು ಮುಂದೆ ವಿವರಿಸುವೆನು. ಅದಕ್ಕೆ ಮೊದಲು ನಾನು ನನ್ನ ಬಗ್ಗೆ ಕಿರುಪರಿಚಯ ನೀಡುವೆನು.

ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನಲ್ಲಿರುವ ಕಾಮನಹಳ್ಳಿ ಎಂಬ ಗ್ರಾಮದಲ್ಲಿ ನಾವು ವಾಸಿಸುತ್ತಾ ಇದ್ದಾಗ ನನ್ನ ಪ್ರಿಯ ಪಿತ ಜನಾಬ್ ಜಿ.ಕೆ. ಮಹ್‌ಮೂದ್ ಸಾಹಿಬರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಕೇರಳದ ಕಣ್ಣೂರು ಸಿಟಿಯಲ್ಲಿ ಪುನರ್‌ನಿರ್ಮಿಸಲಾದ ಅಹ್ಮದಿಯಾ ಮುಸ್ಲಿಮ್ ಮಸ್‌ಜಿದ್ ಉದ್ಘಾಟನೆಗೆ 1961 ಜೂನ್ ದಿನಾಂಕ 4ರಂದು ಹೋದರು. ಕಣ್ಣೂರಿನಿಂದ ನಾವು ಮೊಗ್ರಾಲಿಗೆ ಹೋದೆವು. ಅಲ್ಲಿ ಅಖಿಲ ಕೇರಳ ಅಹ್ಮದಿಯಾ ಜಮಾಅತಿನ ಪ್ರಥಮ ಅಮೀರ್‌ರಾಗಿದ್ದ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮನೆಯಲ್ಲಿ ನನ್ನನ್ನು ಪವಿತ್ರ ಖುರ್‌ಆನ್ ಕಲಿತುಕೊಳ್ಳಲು ನಿಲ್ಲಿಸಿ ನನ್ನ ಪಿತ ಕಾಮನಹಳ್ಳಿಗೆ ಮರಳಿ ಹೋದರು.

ಒಂದು ವಿಷಯ ವಿಶದೀಕರಿಸಲು ಇಚ್ಛಿಸುತ್ತೇನೆ. ನನ್ನ ಪಿತ, ನನ್ನ ಮಾತೆ, ನನ್ನ ಅಣ್ಣ ಕೆ.ಎಂ. ಜಮಾಲುದ್ದೀನ್ ಸಾಹಿಬ್ ಮತ್ತು ನನ್ನ ಹಿರಿಯ ಸಹೋದರಿ ಬೀಫಾತಿಮ ಹಝ್ರತ್ ಮೌಲಾನಾ ಬಿ. ಅಬ್ದುಲ್ಲಾ ಸಾಹಿಬರ ಹಸ್ತದಲ್ಲಿ 1960ರಲ್ಲಿ ಬೈಅತ್ ಮಾಡಿದ್ದರು. ನಾನು ಮತ್ತು ನನ್ನ ಮೂವರು ತಮ್ಮಂದಿರಾದ ಅಬ್ಬಾಸ್, ಹಸೈನಾರ್ ಮತ್ತು ಗುಲಾಮ್ ಅಹ್ಮದ್ ಚಿಕ್ಕ ವಯಸ್ಸಿನವರಾದ ಕಾರಣ ಈಗ ಬೈಅತ್ ಮಾಡುವ ಆವಶ್ಯಕತೆ ಇಲ್ಲವೆಂದು ಹಝ್ರತ್ ಮೌಲವಿ ಸಾಹಿಬರು ಹೇಳಿದರು.

ಅಹ್ಮದಿಯಾ ಜಮಾಅತಿನ ಸಂದೇಶ ನನ್ನ ತಂದೆಯವರಿಗೆ ಲಭಿಸಿದುದು ಮಂಜೇಶ್ವರದ ನಿವಾಸಿಯಾಗಿದ್ದ ಜನಾಬ್ ಯು.ಕೆ. ಅಬ್ದುಶ್ಶಾಫಿ ಸಾಹಿಬರ ಮುಖಾಂತರವಾಗಿದ್ದರೂ ಅಹ್ಮದಿಯಾ ಜಮಾಅತಿನ ಪರಿಪೂರ್ಣವಾದ ಸತ್ಯತೆಯನ್ನು ನನ್ನ ತಂದೆಯವರಿಗೆ ಮನವರಿಕೆ ಮಾಡಿಕೊಟ್ಟದ್ದು ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರಾಗಿದ್ದರು.

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮನೆಯಲ್ಲಿ ನನ್ನನ್ನು ಪವಿತ್ರ ಖುರ್‌ಆನ್ ಕಲಿಯಲು ನನ್ನ ತಂದೆಯವರು ಬಿಟ್ಟು ಹೋಗುವಾಗ ನನ್ನ ಪ್ರಾಯ 13 ವರ್ಷವಾಗಿತ್ತು. 1961ರಲ್ಲಿ ಮೊಗ್ರಾಲಿನಲ್ಲಿ ಸಂಭವಿಸಿದುದು ಅತ್ಯಂತ ರೋಮಾಂಚನೆಯುಂಟುಮಾಡುವ ಘಟನೆಯಾಗಿತ್ತು. ಆ ಘಟನೆಯನ್ನು ವಿವಿಧ ರೀತಿಗಳಲ್ಲಿ ವರ್ಣಿಸಿ ನಾನು ಆ ಕಾಲದಲ್ಲಿ ಆರು ಪದ್ಯಗಳನ್ನು ಬರೆದಿದ್ದೆನು.

ಕೇರಳದ ಕಾಸರಗೋಡು ಜಿಲ್ಲೆಯಲ್ಲಿರುವ ಮೊಗ್ರಾಲ್ ಗ್ರಾಮ ಹಚ್ಚಹಸುರಾದ ಕೃಷಿಭೂಮಿ ಮತ್ತು ತೆಂಗಿನ ಮರಗಳು ನಿಬಿಡವಾಗಿ ಅರಬಿ ಸಮುದ್ರದ ಕರಾವಳಿಯಲ್ಲಿರುವ ಗ್ರಾಮವಾಗಿದೆ. ಮೊಗ್ರಾಲಿನ ನಿವಾಸಿಗಳಲ್ಲಿ ಬಹುಸಂಖ್ಯಾತರು ಸುನ್ನಿ ಮುಸ್ಲಿಮರಾಗಿದ್ದಾರೆ. ಈ ಗ್ರಾಮದಲ್ಲಿ ವಾಸಿಸುತ್ತಿದ್ದ ಜನರಿಂದ ಅತ್ಯಂತ ಗೌರವಿಸಲ್ಪಡುತ್ತಿದ್ದ ಧನಿಕನೂ ಭೂಮಾಲಿಕನೂ ಆಗಿದ್ದ ಜನಾಬ್ ಮೊಗ್ರಾಲ್ ಕುಂಞಿಪಕ್ಕಿ ಸಾಹಿಬ್ ಎಂಬವರ ಮೊಮ್ಮಗನಾದ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರಿಗೆ ಈ ಪ್ರದೇಶದ ಜನರಿಗೆ ಈ ಕಾಲಘಟ್ಟದ ಇಮಾಮರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ಸಂದೇಶವನ್ನು ತಲಪಿಸುವ ಮಹತ್ತಾದ ಭಾಗ್ಯ ಲಭಿಸಿತು.

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಅಹ್ಮದಿಯಾ ಜಮಾಅತನ್ನು ಪ್ರವೇಶಿಸಿದ ಕಾರಣದಿಂದ ಮೊಗ್ರಾಲಿನ ಸುನ್ನಿ ಮುಸ್ಲಿಮರು ಮತ್ತು ಸುನ್ನಿ ಮುಸ್ಲಿಮರಾಗಿದ್ದ ಅವರ ಕುಟುಂಬ ಸದಸ್ಯರು ಅವರನ್ನು ಕಠಿಣವಾಗಿ ವಿರೋಧಿಸಿದರು. ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ವಿರೋಧಿಗಳ ಶತ್ರುತ್ವವನ್ನು ಕಡೆಗಣಿಸಿ, ಹಝ್ರತ್ ಮಹ್‌ದೀ ಮಸೀಹರಿಂದ ಗಳಿಸಿದ ತೇಜೋಮಯ ಪ್ರಕಾಶದ ಬೆಳಕಿನಲ್ಲಿ ಮಹ್‌ದೀ ಮಸೀಹರ ಸಂದೇಶವನ್ನು ಪ್ರಚಾರ ಮಾಡುತ್ತಾ ಜನರಿಗೆ ನೈಜ ಇಸ್ಲಾಮಿನ ಸುಂದರ ರೂಪವನ್ನು ತೋರಿಸಿಕೊಡುತ್ತಾ ಆ ಜನರಲ್ಲಿ ಸೇರಿಕೊಂಡಿರುವ ಮಾಲಿನ್ಯಗಳನ್ನು ದೂರ ಸರಿಸಲು ಪರಿಶ್ರಮಪಡುತ್ತಾ ಧೈರ್ಯದಿಂದ ಮುಂದೆ ಸಾಗುತ್ತಾ ಅಹ್ಮದಿಯತ್ ಎಂಬ ಹೂದೋಟದಲ್ಲಿ ಪ್ರವೇಶಿಸಿದ ಕಾಲದಿಂದ ಮೊದಲುಗೊಂಡು ತನ್ನ ಕೊನೆಯ ಉಸಿರಿನ ತನಕ ಧಾರ್ಮಿಕ

ಕಾರ್ಯಗಳಿಗೋಸ್ಕರ ತನ್ನ ಸಂಪತ್ತನ್ನೂ ತನ್ನ ಸ್ವತ್ತುಗಳನ್ನೂ ತನ್ನ ಸ್ಥಾನಮಾನಗಳನ್ನೂ ಅರ್ಪಿಸಿ ಮಾಡಿದ ಬಲಿದಾನಗಳು ಅತ್ಯಂತ ಸ್ಮರಣೀಯವಾಗಿವೆ.

ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದ ಕಾರಣದಿಂದ ತನ್ನ ಊರಿನ ಜನರಿಂದ ಅನುಭವಿಸಿದ ವಿರೋಧಗಳ, ಕಷ್ಟಗಳ ಮತ್ತು ಪರಿಹಾಸಗಳ ಬಗ್ಗೆ ವಿವರಿಸುವುದಾದರೆ ಅದೊಂದು ಗ್ರಂಥವಾಗಬಹುದು. ಆದರೆ ನಾನು ಅವುಗಳನ್ನೆಲ್ಲ ವಿವರಿಸದೆ ನಾನು ಸ್ವತಃ ದೃಕ್ಸಾಕ್ಷಿಯಾದ ಒಂದು ಘಟನೆಯ ಕೆಲವು ಮುಖ್ಯ ಭಾಗಗಳನ್ನು ಮಾತ್ರ ವಿವರಿಸುವೆನು.

ಈ ಘಟನೆ ಬಗ್ಗೆ ಬರೆಯಲು ನನಗೆ ಸಹಾಯ ನೀಡಿದ ಜನಾಬ್ ಸಿದ್ದೀಖ್ ಅಶ್ರಫ್ ಅಲಿ ಸಾಹಿಬ್, ಜನಾಬ್ ಬಶೀರ್ ಅಹ್ಮದ್ ಸಿದ್ದೀಖ್ ಸಾಹಿಬ್, ಜನಾಬ್ ಮುಬಾರಕ್ ಅಹ್ಮದ್ ಸಾಹಿಬ್‌ರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಾನು ವಿವರಿಸಲಿರುವ ಘಟನೆ ಸಂಭವಿಸಿದುದು 1961 ನವೆಂಬರ್ ದಿನಾಂಕ 24ರಂದು ಶುಕ್ರವಾರ ದಿವಸವಾಗಿತ್ತು. ಆ ಕಾಲದಲ್ಲಿ ಮೊಗ್ರಾಲಿನಲ್ಲಿ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಕುಟುಂಬದ ಸ್ವತ್ತಾಗಿ ಎರಡು ಮಸ್‌ಜಿದ್‌ಗಳು ಅವರ ಸ್ವಾಧೀನದಲ್ಲಿ ಇದ್ದುವು. ಚಳಿಯಂಗೋಡ್ ಪಳ್ಳಿ ಎಂದು ಕರೆಯಲ್ಪಡುತ್ತಿದ್ದ ಮಸ್‌ಜಿದ್ 88 ಸೆಂಟ್ ವಿಸ್ತೀರ್ಣದ ಭೂಮಿಯಲ್ಲಿ ಸ್ಥಾಪಿತವಾಗಿದ್ದ ಜಾಮಿಅ್ ಮಸ್‌ಜಿದ್ ಆಗಿತ್ತು. ಇನ್ನೊಂದು ಕಡವತ್ ಪಳ್ಳಿ ಎಂಬ ಚಿಕ್ಕ ಮಸ್‌ಜಿದ್ ಆಗಿತ್ತು.

ಚಳಿಯಂಗೋಡ್ ಮಸ್‌ಜಿದ್‌ನಲ್ಲಿ ನಮಾಝ್ ಮಾಡಲು ಮತ್ತು ಜುಮುಅ ನಿರ್ವಹಿಸಲು ಜನಾಬ್ ಅಮೀರ್ ಅಲಿ ಸಾಹಿಬರು ಮೊಗ್ರಾಲಿನ ಸುನ್ನಿಗಳಿಗೆ ಅನುಮತಿ ನೀಡಿದ್ದರು. ಆ ಪಳ್ಳಿಯ ಮುಕ್ರಿಗೆ ಮಾಸಿಕ ಸಂಬಳ ಜನಾಬ್ ಅಮೀರ್ ಅಲಿ ಸಾಹಿಬರೇ ನೀಡುತ್ತಿದ್ದರು.

ಚಳಿಯಂಗೋಡ್ ಮಸ್‌ಜಿದ್ ಜನಾಬ್ ಅಮೀರ್ ಅಲಿ ಸಾಹಿಬರ ಕುಟುಂಬದ ಸ್ವತ್ತು ಆಗಿದ್ದ ಕಾರಣದಿಂದಲೂ ಅದು ಅವರ ಸ್ವಾಧೀನದಲ್ಲಿ ಇದ್ದುದರಿಂದಲೂ ಆಗಾಗ ಅವರು ಆ ಮಸ್‌ಜಿದ್‌ಗೆ ಹೋಗುತ್ತಾ ಇದ್ದರು ಮತ್ತು ಹೋದಾಗಲೆಲ್ಲ ಆ ಮಸ್‌ಜಿದ್‌ನಲ್ಲಿ ನಮಾಝ್ ಮಾಡುತ್ತಾ ಇದ್ದರು. ಆದರೆ ಅವರು ಹೀಗೆ ಮಾಡುತ್ತಾ ಇದ್ದುದು ಅವರು ಅಹ್ಮದಿಯಾದ ಕಾರಣದಿಂದ ಸುನ್ನಿಗಳಿಗೆ ಇಷ್ಟಕರವಾಗಿರಲಿಲ್ಲ.

ನಾನು ಮುಂದೆ ವಿವರಿಸಲಿರುವ ಘಟನೆ ನಡೆದ ದಿವಸ ಜನಾಬ್ ಅಮೀರ್ ಅಲಿ ಸಾಹಿಬರ ಮನೆಯಲ್ಲಿ ಅಂದಿನ ಕಾಲದಲ್ಲಿ ದಕ್ಷಿಣ ಭಾರತದ ಪ್ರಮುಖ ಮುಬಲ್ಲಿಗರಾಗಿದ್ದ ಹಝ್ರತ್ ಮೌಲಾನಾ ಬಿ. ಅಬ್ದುಲ್ಲಾ ಸಾಹಿಬ್ ಎಚ್.ಎ.ರವರು ಮತ್ತು ಮಾಟೂಲ್ ಕುಂಞಹ್ಮದ್ ಮಾಸ್ಟರ್ ಸಾಹಿಬರು ಅತಿಥಿಗಳಾಗಿದ್ದರು. ಜನಾಬ್ ಕುಂಞಹ್ಮದ್ ಮಾಸ್ಟರ್ ಸಾಹಿಬರು ಆಗ ಅವಿವಾಹಿತರಾಗಿದ್ದು ಅಹ್ಮದಿಯಾ ಜಮಾಅತಿನ ಬಗ್ಗೆ ಅರಿತುಕೊಳ್ಳಲು ಆಸಕ್ತಿಯುಳ್ಳವರಾಗಿದ್ದರು. ಅವರು ಜನಾಬ್ ಮೂಸಾ ಮಾಸ್ಟರ್ ಸಾಹಿಬರ ಸಹೋದ್ಯೋಗಿಯಾಗಿ ಮೊಗ್ರಾಲ್ ಪುತ್ತೂರು ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಜನಾಬ್ ಮೂಸಾ ಮಾಸ್ಟರ್ ಸಾಹಿಬರು ಜನಾಬ್ ಕುಂಞಹ್ಮದ್ ಮಾಸ್ಟರ್ ಸಾಹಿಬರಿಗೆ ಅಹ್ಮದಿಯಾ ಜಮಾಅತಿನ ಸಂದೇಶ ತಲಪಿಸಿದ್ದರು ಮತ್ತು ಜಮಾಅತಿನ ಕೆಲವು ಪುಸ್ತಕಗಳನ್ನು ಅವರಿಗೆ ನೀಡಿದ್ದರು. ಅಹ್ಮದಿಯಾ ಜಮಾಅತ್ ಬಗ್ಗೆ ಹೆಚ್ಚಿನ ಮಾಹಿತಿ ಗಳಿಸಲು ಜನಾಬ್ ಕುಂಞಹ್ಮದ್ ಮಾಸ್ಟರ್ ಸಾಹಿಬರು ಪದೇ ಪದೇ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮನೆಗೆ ಹೋಗುತ್ತಿದ್ದರು. ಅವರು ಹಝ್ರತ್ ಮೌಲಾನಾ ಬಿ. ಅಬ್ದುಲ್ಲಾ ಸಾಹಿಬರನ್ನು ನೋಡಿರದಿದ್ದರೂ ಅವರ ಬಗ್ಗೆ ಜನರು ಹೇಳುತ್ತಾ ಇದ್ದುದನ್ನು ಆಲಿಸಿದ್ದರು. ಮೌಲಾನಾ ಸಾಹಿಬರನ್ನು ಭೇಟಿಯಾಗಬೇಕೆಂಬ ತನ್ನ ಆಶೆಯನ್ನು ಅವರು ಜನಾಬ್ ಮೂಸಾ ಮಾಸ್ಟರ್ ಸಾಹಿಬರೊಂದಿಗೆ ಹೇಳಿದ್ದರು. ಮೌಲಾನಾ ಸಾಹಿಬರು ಜನಾಬ್ ಅಮೀರ್ ಅಲಿ ಸಾಹಿಬರ ಮನೆಗೆ ಆಗಮಿಸಿದ ಬಗ್ಗೆ ಜನಾಬ್ ಮೂಸಾ ಮಾಸ್ಟರ್ ಸಾಹಿಬರಿಂದ ತಿಳಿದುಕೊಂಡು ಜನಾಬ್ ಕುಂಞಹ್ಮದ್ ಸಾಹಿಬರು ಆ ದಿನ ಮೊಗ್ರಾಲಿಗೆ ಆಗಮಿಸಿದ್ದರು.

ಹಝ್ರತ್ ಮೌಲಾನಾ ಸಾಹಿಬರು ಮೊಗ್ರಾಲಿಗೆ ಆಗಮಿಸಿದ ಬಗ್ಗೆ ತಿಳಿದುಕೊಂಡು ಮಂಗಳೂರಿನಿಂದಲೂ ಮಂಜೇಶ್ವರದಿಂದಲೂ ಅಹ್ಮದಿಯರು ಅವರನ್ನು ಭೇಟಿಯಾಗಲು ಆ ಶುಕ್ರವಾರ ದಿವಸ ಆಗಮಿಸಿದ್ದರು. ಮಂಗಳೂರಿನಿಂದ ಜನಾಬ್ ಯೂಸುಫ್ ಹುಸೈನ್ ಸಾಹಿಬರೂ ಅವರ ತಮ್ಮ ಜನಾಬ್ ಹಮ್ಮಬ್ಬ ಸಾಹಿಬರೂ ಆಗಮಿಸಿದ್ದರು. ಅವರ ಜೊತೆ ಮಂಗಳೂರಿನ ಈಗಿನ ಜಮಾಅತ್ ಸದರ್ ಬಿ.ಎಸ್. ಅಬ್ದುರ್ರಹೀಮ್ ಸಾಹಿಬರ ಪಿತ ಜನಾಬ್ ಬಿ. ಶೇಖ್ ಆಲಿ ಸಾಹಿಬರು ಸಹ ಆಗಮಿಸಿದ್ದರು. ಮಂಜೇಶ್ವರದಿಂದ ಜನಾಬ್ ಎಂ. ಅಬ್ದುರ್ರಶೀದ್ ಸಾಹಿಬರು ಆಗಮಿಸಿದ್ದರು. (ಅವರು ಎಂ. ಉಬೈದುಲ್ಲಾ ಸಾಹಿಬರ ಮತ್ತು ಯುಗರಶ್ಮಿ ಸಂಪಾದಕ ಮುಹಮ್ಮದ್ ಯೂಸುಫ್ ಸಾಹಿಬರ ಪಿತ).

ಮೊಗ್ರಾಲಿಗೆ ಆಗಮಿಸಿದ ಇನ್ನೊಬ್ಬರು ಜನಾಬ್ ಮೌಲವಿ ಪಿ.ಎ. ಮುಹಮ್ಮದ್ ಸಾಹಿಬರು. (ಅವರು ಮಡಿಕೇರಿಯ ಪಿ.ಎಂ. ಅಬ್ದುರ್ರಹ್ಮಾನ್ ಸಾಹಿಬರ ಮತ್ತು ವಿಜಯ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಜನಾಬ್ ಎಂ. ಅಬ್ದುಲ್ಲತೀಫ್ ಸಾಹಿಬರ ಪಿತ).

ಮೊಗ್ರಾಲಿನಲ್ಲಿದ್ದ ಇನ್ನೊಬ್ಬರು ನಮಗೆ ಪವಿತ್ರ ಖುರ್‌ಆನ್ ಮತ್ತು ಧಾರ್ಮಿಕ ವಿಷಯಗಳನ್ನು ಕಲಿಸುತ್ತಿದ್ದ ಕೂಡಾಳಿ ನಿವಾಸಿ ಮೌಲವಿ ಬಿ. ಮುಹಮ್ಮದ್ ಅಹ್ಮದ್ ಸಾಹಿಬ್.

ಕುಂಬಳೆಯ ಜನಾಬ್ ಮೂಸಾ ಮಾಸ್ಟರ್ ಸಾಹಿಬರೂ ಅವರ ತಮ್ಮ ಜನಾಬ್ ಮಮ್ಮು ಮಾಸ್ಟರ್ ಸಾಹಿಬರೂ ಜಮುಅ ನಮಾಝ್‌ಗೆ ಮೊಗ್ರಾಲಿಗೆ ಆಗಮಿಸಿದ್ದರು.

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಸ್ವಾಧೀನದಲ್ಲಿದ್ದ ಕಡವತ್ತ್ ಮಸ್‌ಜಿದ್ ಬಹಳ ಚಿಕ್ಕದಾಗಿತ್ತು. ಅಲ್ಲಿಗೆ ಯಾರೂ ನಮಾಝ್ ಮಾಡಲು ಹೋಗುತ್ತಿರಲಿಲ್ಲ. ಮೊಗ್ರಾಲಿನಲ್ಲಿ ಅಹ್ಮದಿಯರ ಜನಸಂಖ್ಯೆ ಕಡಿಮೆಯಾಗಿದ್ದುದರಿಂದಲೂ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮನೆಯಲ್ಲಿ ನಮಾಝ್ ಮಾಡಲು ವಿಶಾಲವಾದ ಸ್ಥಳವಿದ್ದುದರಿಂದಲೂ ಮನೆಯಲ್ಲಿಯೇ ನಮಾಝ್ ಅನುಷ್ಠಿಸಲಾಗುತ್ತಿತ್ತು. ಕಡವತ್ತ್ ಮಸ್‌ಜಿದ್ ಈಗ

ಪುನರ್‌ನಿರ್ಮಿಸಲ್ಪಟ್ಟಿದೆ. ಅದು ಮೊಗ್ರಾಲಿನ ಅಹ್ಮದಿಯಾ ಮುಸ್ಲಿಮ್ ಮಸ್‌ಜಿದ್ ಎಂದು ಕರೆಯಲ್ಪಡುತ್ತಿದೆ.

ರೂಢಿಪ್ರಕಾರ ಜನಾಬ್ ಅಮೀರ್ ಅಲಿ ಸಾಹಿಬರ ಮನೆಯಲ್ಲಿ ಜುಮುಅ ನಮಾಝ್ ನಿರ್ವಹಿಸಿದ ನಂತರ ಚಳಿಯಂಗೋಡ್ ಮಸ್‌ಜಿದನ್ನು ನೋಡಲು ಅತಿಥಿಗಳು ಮತ್ತು ಜನಾಬ್ ಅಮೀರ್ ಅಲಿ ಸಾಹಿಬರು ಹೋದರು. ಆಗ ಹಝ್ರತ್ ಮೌಲಾನಾ ಬಿ. ಅಬ್ದುಲ್ಲಾ ಸಾಹಿಬರು ಮತ್ತು ಜನಾಬ್ ಕುಂಞಹ್ಮದ್ ಮಾಸ್ಟರ್ ಸಾಹಿಬರು ಮನೆಯಲ್ಲಿಯೇ ಇದ್ದರು.

ಚಳಿಯಂಗೋಡ್ ಮಸ್‌ಜಿದ್‌ಗೆ ಹೋದವರ ಹೆಸರುಗಳು ಈ ಕೆಳಗಿನವುಗಳಾಗಿವೆ:

1. ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬ್.

2. ಜನಾಬ್ ಯೂಸುಫ್ ಹುಸೈನ್ ಸಾಹಿಬ್.

3. ಜನಾಬ್ ಹಮ್ಮಬ್ಬ ಸಾಹಿಬ್.

4. ಜನಾಬ್ ಎಂ. ಅಬ್ದುರ್ರಶೀದ್ ಸಾಹಿಬ್.

5. ಜನಾಬ್ ಶೈಖ್ ಅಲಿ ಸಾಹಿಬ್.

6. ಜನಾಬ್ ಮುಹಮ್ಮದ್ ಮೌಲವಿ ಸಾಹಿಬ್ (ಅತ್ತರ್ ಮೌಲವಿ).

7. ಜನಾಬ್ ಮೂಸಾ ಮಾಸ್ಟರ್ ಸಾಹಿಬ್.

8. ಜನಾಬ್ ಮಮ್ಮು ಮಾಸ್ಟರ್ ಸಾಹಿಬ್.

9. ಜನಾಬ್ ಮುಹಮ್ಮದ್ ಅಹ್ಮದ್ ಸಾಹಿಬ್.

10. ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ದ್ವಿತೀಯ ಪುತ್ರ ಜನಾಬ್ ಬಶೀರ್ ಅಹ್ಮದ್ ಸಿದ್ದೀಖ್ ಸಾಹಿಬ್ (ಪ್ರಾಯ 12).

11. ಜನಾಬ್ ಅಮೀರ್ ಅಲಿ ಸಾಹಿಬರ ಪತ್ನಿಯ ಸೋದರ ಸಂಬಂಧಿ ಜನಾಬ್ ಟಿ.ಎ. ಅಬ್ದುಲ್ ಖಾದಿರ್ ಸಾಹಿಬರ ಪುತ್ರ ಜನಾಬ್ ಮುಬಾರಕ್ ಅಹ್ಮದ್ ಸಾಹಿಬ್ (ಪ್ರಾಯ 9).

12. ಈ ಲೇಖನದ ಲೇಖಕ ಕೆ.ಎಂ. ಉಮರ್ (ಪ್ರಾಯ 13).

ಮೂವರು ಬಾಲಕರು ಸಮೇತರಾಗಿದ್ದ ಮೇಲೆ ವಿವರಿಸಿದ 12 ಜನರು ಅಸರ್ ನಮಾಝ್‌ಗೋಸ್ಕರ ಮಸ್‌ಜಿದಿನ ಕೊಳದಲ್ಲಿ ವುಝು ಮಾಡಿ ಮಸ್‌ಜಿದ್‌ಗೆ ಪ್ರವೇಶಿಸಲು ಪ್ರಾರಂಭಿಸಿದಾಗ ತಕ್‌ಬೀರ್ ಧ್ವನಿಗಳು ಕೇಳಿಸತೊಡಗಿದುವು. ಕೆಲವು ನಿಮಿಷಗಳೊಳಗೆ ಜನರ ಒಂದು ಗುಂಪು ಕತ್ತಿ, ಬೆತ್ತ, ಕಬ್ಬಿಣದ ಸರಳು ಹಿಡಿದುಕೊಂಡು ಮಸ್‌ಜಿದನ್ನು ಸುತ್ತುವರಿದರು. ಜನರು ತಕ್‌ಬೀರನ್ನು ನಿಲ್ಲಿಸಿ ಬೈಯುತ್ತಾ ಬೆದರಿಕೆ ಒಡ್ಡುತ್ತಾ ಇದ್ದರು. ಆಯುಧಗಳೊಂದಿಗೆ ಅಂದಾಜು ನೂರು ಮಂದಿ ಆಗಮಿಸಿದ್ದರು. ಅನಂತರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸಲು ತೊಡಗಿದರು. ವೃದ್ಧರೂ ಬಲಿಷ್ಠರಾದ ಯುವಕರೂ ಮೌಲವಿಗಳೂ ಆ ಗುಂಪಿನಲ್ಲಿದ್ದರು. ಬಹಳ ರೊಚ್ಚಿಗೆಬ್ಬಿಸಲ್ಪಟ್ಟ ಆ ಜನರು ನಮ್ಮನ್ನೆಲ್ಲ ಬೈಯುತ್ತಾ ಕತ್ತಿಯನ್ನೂ ಬೆತ್ತವನ್ನೂ ತೋರಿಸಿ ಬೆದರಿಕೆ ಒಡ್ಡುತ್ತಾ ಇದ್ದರು. ಆಗ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಶತ್ರುಗಳ ಮುಂದೆ ನಿಂತು ಬಹಳ ಮೃದುವಾಗಿ ಹೇಳಿದರು: ಸ್ನೇಹಿತರೇ, ನೀವು ಸಹನೆದೋರಿರಿ. ಇದು ಅಲ್ಲಾಹನ ಮಸ್‌ಜಿದ್ ಆಗಿದೆ. ಇಲ್ಲಿ ನೀವು ಕೆಟ್ಟ ಮಾತುಗಳನ್ನು ಉಚ್ಚರಿಸಬಾರದು. ನಿಮಗೆ ನನ್ನ ಮೇಲೆ ವಿರೋಧವಿರುವುದಾದರೆ ನಾನು ಹೊರಗೆ ಬರುವೆನು. ನೀವು ನನ್ನೊಂದಿಗೆ ನಿಮಗಿಷ್ಟವಿರುವ ಹಾಗೆ ವರ್ತಿಸಿರಿ. ನೀವು ಮಸ್‌ಜಿದಿನ ಒಳಗೆ ಹಾಗೆ ಮಾಡಬೇಡರಿ.

ವಿರೋಧಿಗಳೊಂದಿಗೆ ಎಷ್ಟು ಮಾತನಾಡಿದರೂ ಅವರ ಮೇಲೆ ಯಾವ ಪ್ರಭಾವವೂ ಉಂಟಾಗಲಿಲ್ಲ. ಅವರ ಬೆದರಿಕೆಯ ಧ್ವನಿಗಳು ವರ್ಧಿಸುತ್ತಾ ಹೋದುವು.

ಆ ಭಯಾನಕ ಸನ್ನಿವೇಶದಲ್ಲಿ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ತನ್ನ ಜೊತೆಗಾರರೊಂದಿಗೆ ಹೇಳಿದರು: ಸ್ನೇಹಿತರೇ ನೀವು ಭಯಭೀತರಾಗಬೇಡಿರಿ. ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಸತ್ಯವಂತರನ್ನು ಅಲ್ಲಾಹನು ಎಂದೂ ನಾಶಮಾಡಲಾರನು. ಅಲ್ಲಾಹನ ಸಹಾಯ ನಮಗಿರುವುದರಿಂದ ಶತ್ರುಗಳು ನಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ. ಅಲ್ಲಾಹನು ನಮ್ಮನ್ನು ಪರಾಜಿತರನ್ನಾಗಿ ಮಾಡಲಾರನು. ಅಂತಿಮ ವಿಜಯ ನಮಗೆಯೇ ಲಭಿಸುವುದು.

ಈ ಮಾತುಗಳನ್ನು ಆಲಿಸಿದ ಅಹ್ಮದಿಯರು ವೀರಾವೇಶದಿಂದ ಶತ್ರುಗಳನ್ನು ಎದುರಿಸಲು ಸಿದ್ಧರಾಗಿ ನಿಂತರು. ಶತ್ರುಗಳ ನಾಯಕ ಅಬ್ದುಲ್ ಖಾದಿರ್ ಬಲಿಷ್ಠನಾದ ಮನುಷ್ಯನಾಗಿದ್ದನು. ಅವನ ಎಡಗೈಯಲ್ಲಿ ಕತ್ತಿ, ಬಲಗೈಯಲ್ಲಿ ಬೆತ್ತವಿತ್ತು. ಅವನೊಂದಿಗೆ ಕೆಲವರು ಮಸ್‌ಜಿದ್‌ನೊಳಗೆ ನುಗ್ಗಿದರು. ಆಗ ಅಬ್ದುಲ್ ಖಾದಿರ್‌ನನ್ನು ಬಗಿಗೈಯಲ್ಲಿದ್ದ ಜನಾಬ್ ಶೇಖ್‌ಅಲಿ ಸಾಹಿಬರು ಎದುರಿಸಲು ಸಿದ್ಧರಾದರು. ಅವನ ಬೆತ್ತದ ಹೊಡೆತವನ್ನು ಎಡಗೈಯಿಂದ ತಡೆದ ಅವರು ಅವನ ಬಲಗೈಯಿಂದ ಬೆತ್ತವನ್ನು ಕಿತ್ತುಕೊಂಡರು. ಅವರಿಗೆ ಕದನ ಕಲೆ (ಕಳರಿ) ಅರಿತಿದ್ದುದರಿಂದ ಅದು ಸಾಧ್ಯವಾಯಿತು. ಆಗ ಮೂಸಾ ಮಾಸ್ಟರ್ ಸಾಹಿಬರು ಅಬ್ದುಲ್ ಖಾದಿರ್‌ನನ್ನು ಅವನ ಬೆನ್ನುಗಡೆಯಿಂದ ಬಲವಾಗಿ ಹಿಡಿಗೂಡಿದರು. ಆಗ ಅವನು ತನ್ನ ಎಡಗೈಯಲ್ಲಿದ್ದ ಕತ್ತಿಯನ್ನು ಹೊರಗೆಸೆದನು. ಅವನ ಕೈಯಿಂದ ಕಿತ್ತುಕೊಂಡ ಬೆತ್ತದಿಂದ ಜನಾಬ್ ಶೇಖ್‌ಅಲಿ ಸಾಹಿಬರು ಅವನನ್ನು ಚೆನ್ನಾಗಿ ಥಳಿಸಿದರು. ಅವನು ಪ್ರಜ್ಞೆ ರಹಿತನಾದವನಂತೆ ಆದನು. ಆಗ ಅವನನ್ನು ಜನಾಬ್ ಮೂಸಾ ಮಾಸ್ಟರ್ ಸಾಹಿಬರು ಮಸ್‌ಜಿದ್‌ನಿಂದ ಹೊರಗೆ ಹಾಕಿದರು.

ಇನ್ನೊಂದು ಕಡೆ ಜನಾಬ್ ಯೂಸುಫ್ ಹುಸೈನ್ ಸಾಹಿಬರನ್ನೂ ಅವರ ತಮ್ಮ ಜನಾಬ್ ಹಮ್ಮಬ್ಬ ಸಾಹಿಬರನ್ನೂ ಶತ್ರುಗಳು ಹೊಡೆಯುತ್ತಾ ಇದ್ದಾಗ ಅವರಿಬ್ಬರ ಬಳಿಗೆ ಜನಾಬ್ ಅಮೀರ್ ಅಲಿ ಸಾಹಿಬರು ಓಡಿ ಬಂದು ಜನಾಬ್ ಯೂಸುಫ್ ಹುಸೈನ್ ಸಾಹಿಬರನ್ನು ಆಕ್ರಮಿಸುತ್ತಿದ್ದ ಸುಲೈಮಾನ್ ಎಂಬವನ ಹೊಟ್ಟೆಗೂ ಎದೆಗೂ ಬಲವಾಗಿ ಗುದ್ದಿದಾಗ ಅವನು ತನ್ನ ಆಯುಧಗಳನ್ನು ಕೆಳಗೆಸೆದು ಓಡಿ ಹೋದನು. ಸುಲೈಮಾನನ ಮಗ ಹಸನ್ ಕೈಯಿಂದಲೂ ಜನಾಬ್ ಅಮೀರ್ ಅಲಿ ಸಾಹಿಬ್ ಬೆತ್ತವನ್ನು

ಕಿತ್ತುಕೊಂಡು ಅವನನ್ನು ಚೆನ್ನಾಗಿ ಅದರಿಂದ ಥಳಿಸಿದರು. ಆಗ ಹಸನ್ ಸಹ ಓಡಿ ಹೋದನು.

ಮಸ್‌ಜಿದ್‌ನೊಳಗಿದ್ದ ಜನಾಬ್ ಎಂ. ಅಬ್ದುರ್ರಶೀದ್ ಸಾಹಿಬರ ಮೇಲೆ ಹೊರಗಿನಿಂದ ಎಸೆದ ಕಲ್ಲಿನಿಂದ ಅವರ ತುಟಿಗೆ ಗಾಯವಾಗಿ ರಕ್ತ ಸುರಿಯಲಾರಂಭಿಸಿತು. ಅವರು ತಬ್ಬಿಬ್ಬಾಗಿ ಮಸ್‌ಜಿದಿನ ಮುಂಬಾಗಿಲಿನಿಂದ ಹೊರಗೆ ಬಿದ್ದರು. ಆಗ ಮುಖ ಕೆಳಗಾಗಿ ಬೆನ್ನು ಮೇಲಾಗಿ ಬಿದ್ದ ಅವರನ್ನು ಇಬ್ಬರು ಕಲ್ಲಿನಿಂದ ಥಳಿಸಲು ತೊಡಗಿದರು. ಒಬ್ಬ ಅನಂತರ ಎದ್ದು ಹೋದರೂ ಇನ್ನೊಬ್ಬ ಹೊಡೆತವನ್ನು ಮುಂದುವರಿಸಿದಾಗ ಅಲ್ಲೇ ಸಮೀಪದಲ್ಲಿದ್ದ ನನಗೆ ಬಹಳ ದುಃಖವಾಯಿತು. ನಾನು ಒಂದು ಕಲ್ಲನ್ನು ಎತ್ತಿಕೊಂಡು ಅವನ ಕೊರಳ ಹಿಂಬಾಗಕ್ಕೆ ಎಸೆದೆ. ಆಗ ಆ ದುಷ್ಟ ಮನುಷ್ಯನು ಜನಾಬ್ ಅಬ್ದುರ್ರಶೀದ್ ಸಾಹಿಬರನ್ನು ಬಿಟ್ಟು ನನ್ನ ಕಡೆಗೆ ತಿರುಗಿ ಕಲ್ಲೆಸೆಯಲು ತೊಡಗಿದನು. ಆಗ ನಾನು ತಪ್ಪಿಸಿಕೊಂಡು ಮಸ್‌ಜಿದ್‌ನೊಳಗೆ ನುಗ್ಗಿದೆ. ಜನಾಬ್ ಅಬ್ದುರ್ರಶೀದ್ ಸಾಹಿಬರು ಸಹ ಅನಂತರ ಮಸ್‌ಜಿದ್‌ನೊಳಗೆ ಪ್ರವೇಶಿಸಿದರು.

ಮದೋನ್ಮತ್ತ ಆನೆಯ ಹಾಗೆ ಮಸ್‌ಜಿದ್ ಒಳಗೆ ನುಗ್ಗಿದ ಶತ್ರುಗಳನ್ನು ಅಲ್ಲಾಹನ ಸಹಾಯದಿಂದ ಶೌರ್ಯದಿಂದ ಅಹ್ಮದಿಯರು ಎದುರಿಸಿ ಹೋರಾಡಿದರು. ಹಿಂದೆ ಬದರ್ ಯುದ್ಧದಲ್ಲಿ ಮುಸ್ಲಿಮರಿಗೆ ಸಹಾಯಕರಾಗಲು ದೇವದೂತರನ್ನು ಅಲ್ಲಾಹನು ಇಳಿಸಿದ ಹಾಗೆಯೇ ಇಲ್ಲಿ ಈ ಚಳಿಯಂಗೋಡ್ ರಣಾಂಗಣದಲ್ಲೂ ಅಲ್ಲಾಹನು ತನ್ನ ಮಹ್‌ದೀ ಮಸೀಹರ ಅನುಯಾಯಿಗಳಿಗೆ ಸಹಾಯ ಮಾಡಿದನು ಎಂದು ನನ್ನ ಆ ಬಾಲ್ಯಕಾಲದಲ್ಲಿ ನನ್ನ ಮನಸ್ಸಿಗೆ ತೋರಿತು. ಆಯುಧ ಧಾರಿಗಳಾಗಿ ಆಕ್ರಮಿಸಿದ ಶತ್ರುಗಳನ್ನು ನಿರಾಯುಧರಾದ ಅಹ್ಮದಿಯರು ಧೈರ್ಯದಿಂದ ಎದುರಿಸಿದರು.

ತೀವ್ರವಾಗಿ ಗಾಯಗೊಂಡ ತಮ್ಮ ನಾಯಕನಾದ ಅಬ್ದುಲ್ ಖಾದಿರ್‌ನನ್ನು ಶತ್ರುಗಳು ಕಂಡು ಭಯದಿಂದ ಹಿಂತಿರುಗಿ ಹೋಗಲು ಸಿದ್ಧರಾದಾಗ ಕೆಲವು ಮೌಲವಿಗಳು ಅವರನ್ನು ತಡೆದು ನಿಲ್ಲಿಸಲು ಪ್ರಯತ್ನಿಸಿದರು. ಆಗ ಶತ್ರುಗಳು ದೂರದಲ್ಲಿ ನಿಂತು ಮಸ್‌ಜಿದ್‌ನೊಳಗೆ ಕಲ್ಲೆಸೆಯಲು ತೊಡಗಿದರು. ಆ ಕಲ್ಲುಗಳ ಹೊಡೆತದಿಂದ ಅಹ್ಮದಿಯರು ಗಾಯಗೊಂಡರು.

ಒಂದು ವಿಷಯ ಗಮನಾರ್ಹವಾಗಿದೆ. ಮಸ್‌ಜಿದ್‌ಗೆ ಅಸರ್ ನಮಾಝ್ ಅನುಷ್ಠಿಸಲು ಹೋದವರಲ್ಲಿ ಮೂರು ಮಂದಿ ವಯೋವೃದ್ಧರಾಗಿದ್ದರು. ಮೂವರು ಬಾಲಕರಾಗಿದ್ದರು. ಉಳಿದ ಆರು ಮಂದಿ ಮಾತ್ರ ಮಧ್ಯವಯಸ್ಕರಾಗಿದ್ದು ಅವರು ಶತ್ರುಗಳನ್ನು ಎದುರಿಸಿದರು.

ಜನಾಬ್ ಯೂಸುಫ್ ಹುಸೈನ್ ಸಾಹಿಬರು ಕಲ್ಲೇಟಿನಿಂದ ತೀವ್ರವಾಗಿ ಗಾಯಗೊಂಡರು. ಅವರ ತಲೆಯಿಂದ ಧಾರಾಳ ರಕ್ತ ಹರಿಯಿತು. ಅವರ ತಮ್ಮ ಜನಾಬ್ ಹಮ್ಮಬ್ಬ ಸಾಹಿಬರ ಎಡಗೈಯ ಎಲುಬು ಮುರಿದ ಕಾರಣದಿಂದ ಅವರು ಬಹಳ ಬಲಗುಂದಿದವರಾಗಿದ್ದರು. ಜನಾಬ್ ಮೌಲವಿ ಮುಹಮ್ಮದ್ ಸಾಹಿಬ್ (ಅತ್ತರ್ ಮೌಲವಿ) ಅವರ ತಲೆಯ ಮುಂಭಾಗಕ್ಕೆ ಕಲ್ಲೇಟಿನಿಂದ ಗಾಯವಾಗಿತ್ತು. ಅವರ ತಲೆಯಿಂದಲೂ ರಕ್ತ ಹರಿಯಿತು. ಜನಾಬ್ ಅಬ್ದುರ್ರಶೀದ್ ಸಾಹಿಬರ ಮುಖಕ್ಕೆ ಮತ್ತು ಬೆನ್ನಿಗೆ ಕಲ್ಲೇಟು ತಗಲಿದ ಕಾರಣ ರಕ್ತ ಧಾರಾಳವಾಗಿ ಹರಿಯಿತು. ಗಾಯಗೊಂಡವರೆಲ್ಲ ಬಹಳ ಬಲಗುಂದಿದವರಾದರು. ಕೆಲವರು ಬಲಹೀನತೆಯಿಂದ ಮಲಗಿದರು.

ಶತ್ರುಗಳು ಕಲ್ಲೆಸೆಯುವುದನ್ನು ಮುಂದುವರಿಸಿದಾಗ ನಾವು ಮಸ್‌ಜಿದ್‌ನ ಬಾಗಿಲುಗಳನ್ನೂ ಕಿಟಿಕಿ ಬಾಗಿಲುಗಳನ್ನೂ ಮುಚ್ಚಿದೆವು. ಎಲ್ಲರೂ ಜೊತೆ ಸೇರಿ ಒಂದು ತುರ್ತು ಸಭೆ ಸೇರಿ ಅಲ್ಲಾಹನೊಂದಿಗೆ ಸಂರಕ್ಷಣೆ ನೀಡಲು ಬೇಡಿಕೊಂಡೆವು. ಮುಚ್ಚಿದ ಬಾಗಿಲುಗಳನ್ನು ಶತ್ರುಗಳು ದೊಡ್ಡ ಕಲ್ಲುಗಳನ್ನು ಎಸೆದು ಮುರಿಯಲು ಪ್ರಯತ್ನಿಸುತ್ತಿದ್ದರು. ಕೆಲವು ಕಲ್ಲುಗಳು ಮಸ್‌ಜಿದ್‌ನೊಳಗೆ ಸಹ ಎಸೆಯಲ್ಪಟ್ಟವು. ಆಗ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಬಾಲಕರಾದ ನಮ್ಮೊಂದಿಗೆ ಹೇಳಿದರು: ನಿಮ್ಮಲ್ಲೊಬ್ಬ ಕುಂಬಳೆಗೆ ಹೋಗಿ ಪೊಲೀಸರಿಗೆ ದೂರು ನೀಡಬೇಕು. ಆಗ ನಾನು ಹಾಗೆ ಮಾಡಲು ಸಿದ್ಧನಾಗಿ ಮಸ್‌ಜಿದ್‌ನಿಂದ ಹೊರಗೆ ಬಂದು ಮನೆಯ ಕಡೆಗೆ ಓಡತೊಡಗಿದೆನು. ಕೆಲವರು ನನ್ನನ್ನು ಬೆನ್ನಟ್ಟಿ ಕಲ್ಲು ಎಸೆದಾಗ ನನ್ನ ಬಲಗೈಗೆ ಒಂದು ಕಲ್ಲು ತಗಲಿ ಗಾಯವಾದರೂ ಅಲ್ಲಾಹನ ಅನುಗ್ರಹದಿಂದ ಮನೆಯ ಕಡೆಗೆ ಓಡುತ್ತಾ ಇದ್ದಾಗ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಪತ್ನಿ ಬೀಫಾತಿಮ ಸಾಹಿಬರವರು ಬುರ್ಖಾ ಧರಿಸಿ ಮಸ್‌ಜಿದನ್ನು ಅಭಿಮುಖೀಕರಿಸಿ ಬರುವುದನ್ನು ಕಂಡೆನು. ನಾನು ಅವರನ್ನು ತಾಯಿ ಎಂದು ಕರೆಯುತ್ತಿದ್ದೆನು. ನಾನು ಅವರನ್ನು ತಬ್ಬಿಕೊಂಡು ಅಳುತ್ತಾ ಹೇಳಿದೆ: "ಉಮ್ಮ, ಮಸ್‌ಜಿದ್‌ನಲ್ಲಿ ಭಯಂಕರ ಜಗಳ ಪ್ರಾರಂಭವಾಗಿದೆ. ಅನೇಕರಿಗೆ ಗಾಯಗಳಾಗಿವೆ. ಪೋಲೀಸರಿಗೆ ದೂರು ನೀಡಲು ತಂದೆಯವರು ನನ್ನನ್ನು ಕಳುಹಿಸಿರುವರು." ಆಗ ಅವರು ನನ್ನನ್ನು ಸಮಾಧಾನಪಡಿಸಿಕೊಂಡು ಹೇಳಿದರು: "ಪೋಲೀಸರಿಗೆ ದೂರು ನೀಡಲು ನಾನು ಒಬ್ಬನನ್ನು ಕಳುಹಿಸಿದ್ದೇನೆ. ನೀನು ಭಯಪಡಬೇಡ. ನನ್ನೊಂದಿಗೆ ಬಾ." ಆಗ ನಾವಿಬ್ಬರೂ ಮಸ್‌ಜಿದ್ ಕಡೆಗೆ ಹೊರಟೆವು.

ಮಸ್‌ಜಿದ್‌ನಲ್ಲಿ ನಡೆದ ಘಟನೆ ಬಗ್ಗೆ ಯಾರೋ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮನೆಯವರಿಗೆ ತಿಳಿಸಿದ್ದರು. ಆ ವಿಷಯ ತಿಳಿದ ಕೂಡಲೆ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಪತ್ನಿ ಬೀಫಾತಿಮ ಸಾಹಿಬ ಅಲ್ಲಾಹನೊಂದಿಗೆ ಪ್ರಾರ್ಥಿಸಿದರು. ಅನಂತರ ಆ ಘಟನೆ ಬಗ್ಗೆ ಹಝ್ರತ್ ಮೌಲಾನ ಬಿ. ಅಬ್ದುಲ್ಲಾ ಸಾಹಿಬರಿಗೆ ತಿಳಿಸಿದರು ಮತ್ತು ಮಸ್‌ಜಿದ್‌ಗೆ ಹೋಗಲು ಅವರ ಅನುಮತಿಯನ್ನು ಅಪೇಕ್ಷಿಸಿದರು. ಆಗ ಹಝ್ರತ್ ಮೌಲಾನ ಸಾಹಿಬರು ಹೇಳಿದರು: ನಿಮಗೆ ಅಲ್ಲಿಗೆ ಹೋಗಲು ಸಾಧ್ಯವಾಗುವುದೇ? ಬೀಫಾತಿಮ ಸಾಹಿಬ ಹೇಳಿದರು: ನನಗೆ ಅಲ್ಲಿಗೆ ಹೋಗುವ ಬಗ್ಗೆ ಯಾವ ಆತಂಕವೂ ಇಲ್ಲ. ನಾನು ಹೋಗಲು ಸಿದ್ಧಳಾಗಿದ್ದೇನೆ. ಆಗ ಹಝ್ರತ್ ಮೌಲಾನ ಸಾಹಿಬರು ಅಲ್ಲಾಹನು ನಿಮಗೆ ಸಕಲ ಸಂರಕ್ಷಣೆ ನೀಡಲಿ ಎಂದು ಪ್ರಾರ್ಥಿಸಿ ಅನುಮತಿ ನೀಡಿದರು.

ಬೀಫಾತಿಮ ಸಾಹಿಬ ತನ್ನ ಮನೆಗೆಲಸಗಾರನಾದ ಅಬ್ದುಲ್ ಖಾದರ್‌ನೆಂಬ ಒಬ್ಬ ಸುನ್ನಿ ಯುವಕನನ್ನು ಪೋಲೀಸು ಸ್ಟೇಷನಿಗೆ

ದೂರು ನೀಡಲು ಕಳುಹಿಸಿದರು. ಮನೆಯಲ್ಲಿದ್ದ ಅಂದಾಜು ಆರು ಇಂಚು ಉದ್ದವಾಗಿರುವ ಒಂದು ಕಬ್ಬಿಣದ ರಾಡನ್ನು ಬುರ್ಖಾದ ಒಳಗೆ ಇಟ್ಟುಕೊಂಡು ಮಸ್‌ಜಿದ್ ಕಡೆಗೆ ಹೊರಟರು.

ಬೀಫಾತಿಮ ಸಾಹಿಬರೊಂದಿಗೆ ನಾನು ಮಸ್‌ಜಿದ್‌ಗೆ ತಲಪಿದಾಗ ಅಹ್ಮದಿಯರು ಮಸ್‌ಜಿದ್‌ನಿಂದ ಇಳಿದು ಬರಲು ಪ್ರಾರಂಭಿಸಿದ್ದರು. ನಮ್ಮ ಉಸ್ತಾದ್ ಬಿ. ಮುಹಮ್ಮದ್ ಅಹ್ಮದ್ ಸಾಹಿಬರ ಹಿಂಭಾಗದಿಂದ ಒಬ್ಬನು ಕತ್ತಿ ಹಿಡಿದು ಆಕ್ರಮಿಸಲು ತೊಡಗುವಾಗ ಫಕ್ಕನೆ ಅವರು ತನ್ನ ಕೈಯಲ್ಲಿದ್ದ ಅಂದಾಜು ಮೂರು ಅಡಿ ಉದ್ದದ ಸರಳನ್ನು ಬೀಸಿದಾಗ ಆ ಕತ್ತಿ ಆ ಶತ್ರುವಿನ ಕೈಯಿಂದ ಕೆಳಗೆ ಬಿತ್ತು. ಆ ಕತ್ತಿಯನ್ನು ಅವರು ಎತ್ತಿಕೊಂಡಾಗ ಶತ್ರು ಓಡಿ ಹೋದನು. ಕತ್ತಿಯನ್ನು ಅನಂತರ ಪೋಲೀಸರಿಗೆ ನೀಡಲಾಯಿತು. ಗಾಯಗೊಂಡವರ ಸ್ಥಿತಿ ಬಹಳ ದುಃಖಕರವಾಗಿತ್ತು ಅವರ ಬಟ್ಟೆಗಳೆಲ್ಲ ರಕ್ತಸಿಕ್ತವಾಗಿದ್ದುವು. ಅವರನ್ನು ಕುಂಬಳೆಯ ಆಸ್ಪತ್ರೆಗೆ ದಾಖಲಿಸಲಾಯಿತು.

### ಬೀಫಾತಿಮ ಧೀರ ವನಿತೆ, ಔದಾರ್ಯವಂತೆ

ಅತ್ಯಂತ ಧೈರ್ಯಶಾಲಿಯಾದ ಬೀಫಾತಿಮ ಸಾಹಿಬರು ಮನೆಯಿಂದ ತಂದ ಕಬ್ಬಿಣದ ರಾಡನ್ನು ತನ್ನ ಪತಿಗೆ ನೀಡಿದಾಗ ಅವರು ಅದನ್ನು ತನ್ನ ಪಾಯಿಜಾಮದ ಕಿಸೆಯೊಳಗೆ ಹಾಕಿದರು. ಅದನ್ನು ಕಂಡ ಶತ್ರುಗಳು ಅದು ಒಂದು ಪಿಸ್ತೂಲ್ ಎಂದು ತಪ್ಪಾಗಿ ಗ್ರಹಿಸಿ ಹೆದರಿಕೆಯಿಂದ ಹಿಂಜರಿದರು. ಇದು ಸಹ ಒಂದು ಕರಾಮತ್ ಎಂದು ಹೇಳದಿರಲು ಸಾಧ್ಯವಿಲ್ಲ. ಜನಾಬ್ ಅಮೀರ್ ಅಲಿ ಸಾಹಿಬರಿಗೆ ಸರಕಾರದ ಲೈಸನ್ಸ್ ದೊರೆತ ಒಂದು ಕೋವಿ ಇತ್ತು. ಬೀಫಾತಿಮ ಸಾಹಿಬ ತನ್ನ ಪತಿಗೆ ಕೊಟ್ಟ ವಸ್ತು ಒಂದು ಪಿಸ್ತೂಲ್ ಎಂದು ಶತ್ರುಗಳು ಊಹಿಸಿದರು ಮತ್ತು ಅಲ್ಲಿಂದ ಚದುರಿಹೋದರು.

1971 ಏಪ್ರಿಲ್ 14, 15 ದಿನಾಂಕ ಅಖಿಲ ಕೇರಳ ಅಹ್ಮದಿಯಾ ಸಮ್ಮೇಳನ ಮೊಗ್ರಾಲಿನಲ್ಲಿ ಜರಗಿದಾಗ ಬೀಫಾತಿಮ ಸಾಹಿಬರವರು ಅದರ ಸಂಪೂರ್ಣ ಖರ್ಚು ವೆಚ್ಚಗಳನ್ನು ನಿರ್ವಹಿಸಿದ್ದರು. ಆ ಸಮ್ಮೇಳನ ಜರಗುವುದಕ್ಕೆ ಮೊದಲು ಕಾಸರಗೋಡಿನಲ್ಲಿದ್ದ ಇಸ್ಲಾಮಿಯಾ ಟೈಲ್ ಫ್ಯಾಕ್ಟರಿ ಮಾರಾಟ ಮಾಡಿದಾಗ ಅವರಿಗೆ ಅವರ ಪಿತರ ವಾರಸು ಹಕ್ಕಾಗಿ ಒಂದು ಪಾಲು ದೊರೆತಿತ್ತು. ಆ ಹಣದಿಂದ ಸಮ್ಮೇಳನದ ಎಲ್ಲ ಖರ್ಚು ವೆಚ್ಚಗಳನ್ನು ನಿರ್ವಹಿಸಿದರು.

ಚಳಿಯಂಗೋಡ್ ಮಸ್‌ಜಿದ್‌ನಲ್ಲಿ ಶತ್ರುಗಳ ಆಕ್ರಮಣ ನಡೆದಾಗ ಅವರನ್ನು ಪ್ರಮುಖವಾಗಿ ಎದುರಿಸಿದವರು ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು, ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಮತ್ತು ಜನಾಬ್ ಬಿ. ಶೇಖ್ ಅಲಿ ಸಾಹಿಬರಾಗಿದ್ದರು. ಅಲ್ಲಾಹನ ಅನುಗ್ರಹದಿಂದ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರಿಗೆ, ಜನಾಬ್ ಮೂಸಾ ಮಾಸ್ಟರ್ ಸಾಹಿಬರಿಗೆ ಮತ್ತು ಜನಾಬ್ ಮಮ್ಮು ಮಾಸ್ಟರ್ ಸಾಹಿಬರಿಗೆ ಯಾವುದೇ ಗಾಯ ಸಂಭವಿಸಿರಲಿಲ್ಲ.

ಪೋಲೀಸರು ಸುನ್ನಿಗಳಿಗೆ ಸೇರಿದ 15 ಜನರ ವಿರುದ್ಧ ಮೊಕದ್ದಮೆ ದಾಖಲಿಸಿದರು. ಆ ಮೊಕದ್ದಮೆ ಅಂದಾಜು ಹತ್ತು ವರ್ಷ ನಡೆಯಿತು. ಆ ಮೊಕದ್ದಮೆ ಕಾಲದಲ್ಲಿ ಸುನ್ನಿಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿತ್ತು. ಕೆಲವರು ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರನ್ನು ಭೇಟಿಯಾಗಿ ಕ್ಷಮೆಯಾಚಿಸಿದರು.

### ನನ್ನ ಬೇರೆ ಕೆಲವು ನೆನಪುಗಳು

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮನೆಯಲ್ಲಿ ಜನಾಬ್ ಮೌಲವಿ ಮುಹಮ್ಮದ್ ಅಹ್ಮದ್ ಸಾಹಿಬರು ಅಂದಾಜು ಒಂದು ವರ್ಷದಷ್ಟು ಕಾಲ ಪವಿತ್ರ ಖುರ್‌ಆನ್, ಹದೀಸು ಮತ್ತು ಮಲಯಾಳಂ ಕಲಿಸುತ್ತಾ ಇದ್ದರು. ಮಗ್‌ರಿಬ್ ನಮಾಝಿನ ನಂತರ ಇಶಾ ನಮಾಝ್ ತನಕ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಪ್ರತಿದಿನ ದರ್ಸ್ ನೀಡುತ್ತಿದ್ದರು. ಬಾಲಕರಾದ ನಮಗೆ ಒಂದೊಂದು ಹದೀಸು ಬಾಯಿಪಾಠ ಮಾಡಲು ನೀಡುತ್ತಿದ್ದರು. ಮರುದಿನ ಆ ಹದೀಸು ಬಾಯಿಪಾಠ ಮಾಡಿ ಹೇಳಬೇಕಾಗುತ್ತಿತ್ತು. ಇಸ್ಲಾಮಿನ ಬಗ್ಗೆ ಮತ್ತು ಅಹ್ಮದಿಯಾ ಜಮಾಅತ್ ಬಗ್ಗೆ ವಿಶದವಾಗಿ ನಮಗೆ ಕಲಿಸಿಕೊಡಲಾಗುತ್ತಿತ್ತು. ಏನಾದರೂ ಸಂಶಯವಿದ್ದರೆ ಸಂಶಯ ನಿವಾರಣೆ ಮಾಡುತ್ತಿದ್ದರು.

ಆ ಕಾಲಘಟ್ಟದಲ್ಲಿ ಮೊಗ್ರಾಲಿನಿಂದ ಕುಂಬಳೆಗೆ ಹೋಗಲು ಬಸ್ಸುಗಳೇ ಇರಲಿಲ್ಲ. ಮೊಗ್ರಾಲಿನಿಂದ ಕುಂಬಳೆಗಿರುವ ಮೂರುವರೆ ಕಿಲೋಮೀಟರ್ ದೂರವನ್ನು ನಡೆದುಕೊಂಡು ಹೋಗಬೇಕಾಗುತ್ತಿತ್ತು. ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರಿಗೆ ಕುಂಬಳೆಗೆ ಹೋಗುವ ಆವಶ್ಯಕತೆ ಬಂದಾಗ ಅವರು ನನ್ನನ್ನು ತಮ್ಮ ಜೊತೆಗೆ ಕರೆದುಕೊಂಡು ನಡೆದು ಹೋಗುತ್ತಿದ್ದರು. ನಾವು ಮನೆಯಿಂದ ಹೊರಟು ಕುಂಬಳೆ ಕಡೆಗೆ ಹೋಗುವ ಮಾರ್ಗವನ್ನು ತಲಪಿದಾಗ ಕೆಲವು ಜನರು ಭೀಕರವಾಗಿ ಕೂಗುತ್ತಲೂ ಬೈಯ್ಯುತ್ತಲೂ ಇದ್ದರು. ಇಂತಹ ಕೂಗು ಅಚಾನಕವಾಗಿ ಆಲಿಸುವಾಗ ನಾನು ಭಯಭೀತನಾಗಿ ನಡುಗುತ್ತಿದ್ದೆನು. ಕೆಲವರು ಅಹ್ಮದಿಯರ ವಿರುದ್ಧ ಕೆಲವು ಹಾಡುಗಳನ್ನು ರಚಿಸಿ ಉಚ್ಚ ಧ್ವನಿಯಿಂದ ಹಾಡುತ್ತಿದ್ದರು. ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಮತ್ತು ಮಮ್ಮು ಮಾಸ್ಟರ್ ಸಾಹಿಬ್ ಮಾರ್ಗದಲ್ಲಿ ನಡೆದುಕೊಂಡು ಬರುವಾಗ ಶತ್ರುಗಳು ಅಂತಹ ಪದ್ಯಗಳನ್ನು ಹಾಡುತ್ತಿದ್ದರು. ಆ ಪದ್ಯಗಳಿಗೆ ಉತ್ತರವಾಗಿ ಜನಾಬ್ ಮೂಸಾ ಮಾಸ್ಟರ್ ಸಾಹಿಬರು ಸಹ ಪದ್ಯ ರಚಿಸಿದ್ದರು. ಶತ್ರುಗಳು ಹಾಡುತ್ತಿದ್ದ ಒಂದು ಪದ್ಯದ ಮೊದಲನೆಯ ಎರಡು ಚರಣಗಳು ಹೀಗೆ:

1. ಖಾದಿಯಾನಿತ್ತಂ ಕುಂಬಳ ವೇಂಡ ಕಟ್ಟಾಯಂ ಇದ್ ಚದಿ ಚದಿ.

2. ಪಾದಿರಿ ವೇಷಂ ಕಂಡ್ ಜನಂಗಳೆ ಪೆಡರುದು ನಿಂಗಳ್ ಅಧೋಗದಿ.

ಈ ಪದ್ಯಗಳ ಅರ್ಥ ಹೀಗೆ:

1. ಅಹ್ಮದಿಯ್ಯತ್ ಕುಂಬಳೆಯಲ್ಲಿ ಖಂಡಿತವಾಗಿಯೂ ಬೇಡ. ಅದು ಮೋಸ ಮೋಸವೇ ಆಗಿದೆ.

2. ಪಾದರಿಯ ವೇಷಭೂಷಣವನ್ನು ಕಂಡು ಓ ಜನರೇ ನೀವು ಮೋಸಕ್ಕೀಡಾಗಿ ಅಧಃಪತನ ಹೊಂದಬೇಡಿರಿ.

ಮೇಲಿನ ಪದ್ಯ ಚರಣಗಳಿಗೆ ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಹೀಗೆ ಉತ್ತರ ನೀಡಿದರು.

1. ഖാദിയാനിത്തം കുംബള വേണം കട്ടായം ഇദ് ശരി ശരി.

2. ಪಾದಿರಿ ವೇಷಂ ಅಲ್ಲ ಜನಂಗಳೆ ಹಕ್ಕರಿಯಾನ್ ನಿಂಗಳ್ ವರುವೀನ್ ವರುವೀನ್.

ಈ ಪದ್ಯ ಚರಣಗಳ ಅರ್ಥ:

1. ಅಹ್ಮದಿಯ್ಯತ್ ಕುಂಬಳೆಯಲ್ಲಿ ಖಂಡಿತವಾಗಿಯೂ ಬೇಕಾಗಿದೆ. ಅದು ಸರಿಯಾದ ತತ್ವವೇ ಆಗಿದೆ.

2. ಪಾದಿರಿ ವೇಷ ಇದು ಅಲ್ಲ. ಹೇ ಜನರೇ ನೀವು ಸತ್ಯವನ್ನು ಅರಿತುಕೊಳ್ಳಲು ಬನ್ನಿರಿ.

ವಿರೋಧಿಗಳ ಕೆಟ್ಟ ವರ್ತನೆಗಳನ್ನು ಕಾಣುವಾಗ ನನ್ನ ಬಾಲ ಹೃದಯದಲ್ಲಿ ಬಹಳ ಭಯಭೀತಿಯೂ ಆ ಜನರ ಬಗ್ಗೆ ದ್ವೇಷವೂ ತಲೆದೋರಿತ್ತು. ಆಗ ನಾನು ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರಿಗೆ ಅತ್ಯಂತ ಸಮೀಪವಾಗಿ ಅವರೊಂದಿಗೆ ನಡೆದು ಹೋಗುತ್ತಿದ್ದೆನು. ಆಗ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ನನ್ನೊಂದಿಗೆ ಹೀಗೆ ಹೇಳುತ್ತಿದ್ದರು: ಹೇ ಉಮರ್, ನೀನು ಈ ಜನರ ವಿರುದ್ಧ ದ್ವೇಷಭಾವನೆ ಹೊಂದಬಾರದು. ಅವರಿಗೋಸ್ಕರ ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು. ಅಲ್ಲಾಹನು ಈ ಜನರಿಗೆ ಮುಂದೆ ಮಾರ್ಗದರ್ಶನ ನೀಡಬಹುದು.

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಮಾತುಗಳನ್ನು ಆಲಿಸಿ ಅವರು ಹೇಳಿದುದು ಸರಿ ಎಂದು ತಲೆಯನ್ನು ಅಲುಗಾಡಿಸುತ್ತಿದ್ದರೂ ಆಗ ನನ್ನ ಮನಸ್ಸು ಹೇಳುತ್ತಿತ್ತು, ಈ ಜನರಿಗೋಸ್ಕರ ಪ್ರಾರ್ಥಿಸಬೇಕೆ? ಇವರನ್ನು ಶಪಿಸಬೇಕಾಗಿದೆ ಎಂದು. ಆದರೆ ಅನಂತರ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಉಪದೇಶದ ಸಮಂಜಸತೆ ನನಗೆ ಮನವರಿಕೆಯಾಯಿತು.

## ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರಿಗೆ ಅಹ್ಮದಿಯಾ ಸಂದೇಶ ಲಭಿಸಿದುದು ಹೇಗೆ?

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಜ್ಯೇಷ್ಠ ಪುತ್ರ ಜನಾಬ್ ಸಿದ್ದೀಖ್ ಅಶ್ರಫ್ ಅಲಿ ಸಾಹಿಬರು ನನ್ನೊಂದಿಗೆ ಹೀಗೆ ಹೇಳಿದರು: ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು 1947ರಲ್ಲಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದರು. ಅವರ ತವರೂರು ತ್ರಿಕ್ಕರಿಪುರದಲ್ಲಿ ಅವರು ಒಂದು ಕಿರಾಣಿ ಅಂಗಡಿಯಿಂದ ಖರೀದಿಸಿದ ವಸ್ತುವನ್ನು ಸುತ್ತಿರುವ ಮಲಯಾಳಂ ಭಾಷೆಯಲ್ಲಿರುವ ಪುಸ್ತಕದ ಹಾಳೆಯನ್ನು ಗಮನಿಸಿದರು. ಆ ಹಾಳೆಯನ್ನು ಅವರು ಓದಿದಾಗ ಅದರಿಂದ ಆಕರ್ಷಿಸಿತರಾಗಿ ಅವರು ಅಂಗಡಿಗೆ ಹೋಗಿ ಆ ಹಾಳೆ ಯಾವ ಪುಸ್ತಕದಿಂದ ಹರಿಯಲಾಗಿತ್ತೋ ಆ ಪುಸ್ತಕವನ್ನು ಖರೀದಿಸಿದರು. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆದ ಇಸ್ಲಾಮೀ ಉಸೂಲ್‌ಕಿ ಫಿಲಾಸಫಿ ಎಂಬ ಉರ್ದು ಭಾಷೆಯ ಗ್ರಂಥದ ಮಲಯಾಳಂ ಭಾಷಾಂತರವಾದ ಇಸ್ಲಾಮ್ ಮತ ಸಿದ್ಧಾಂತಂ (ಇಸ್ಲಾಮ್ ಮತ ತತ್ವಜ್ಞಾನ) ಆಗಿತ್ತು. ಅಂಗಡಿಯವನಿಗೆ ಆ ಪುಸ್ತಕ ಹೇಗೆ ದೊರೆತಿತು ಎಂದು ವಿಚಾರಿಸಿದಾಗ ಆ ಅಂಗಡಿಯವನು ಹೀಗೆ ಹೇಳಿದನು: ಕಣ್ಣೂರು, ಪಯಂಗಾಡಿ ಪ್ರದೇಶಗಳ ಕೆಲವು ಅಹ್ಮದಿಯರು ಈ ಪುಸ್ತಕವನ್ನು ಇಲ್ಲಿ ಹಂಚಿರುವರು ಎಂದು. ಒಂದೆರೆಡು ಹಾಳೆಗಳು ಹರಿದು ಹೋಗಿದ್ದರೂ ಆ ಪುಸ್ತಕವನ್ನು ಪೂರ್ಣವಾಗಿ ಓದಿದಾಗ ಆ ಗ್ರಂಥದ ಲೇಖಕ ಮಹಾನುಭಾವರೆಂದೂ ಇಂದಿನ ಕಾಲದಲ್ಲಿ ಇಸ್ಲಾಮನ್ನು ರಕ್ಷಿಸಲು ಆ ಮಹಾನುಭಾವರಿಗೆ ಮಾತ್ರ ಸಾಧ್ಯವೆಂದೂ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಚಿಂತಿಸಿದರು. ಆ ಗ್ರಂಥವನ್ನು ಉರ್ದು ಭಾಷೆಯಿಂದ ಮಲಯಾಳಂ ಭಾಷೆಗೆ ಭಾಷಾಂತರಿಸಿದ ಜನಾಬ್ ಎನ್. ಹಾಮಿದ್ ಸಾಹಿಬರನ್ನು ಕಣ್ಣೂರಿನಲ್ಲಿ ಬೇಟಿಯಾಗಿ ಅನಂತರ ಹಝ್ರತ್ ಮೌಲಾನಾ ಬಿ. ಅಬ್ದುಲ್ಲಾ ಸಾಹಿಬ್ ಎಚ್.ಎ. ರನ್ನು ಭೇಟಿಯಾದರು.

1947ರಲ್ಲಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಉರ್ದು ಭಾಷೆ ಕಲಿತು ಜಮಾಅತಿನ ಅನೇಕ ಗ್ರಂಥಗಳನ್ನು ಪಾರಾಯಣ ಮಾಡಿದರಲ್ಲದೆ ಧರ್ಮಪ್ರಚಾರ ಕ್ಷೇತ್ರದಲ್ಲಿ ಸಕ್ರಿಯರಾಗಿ ಸಾಗಿದರು. ಅವರ ಮೂಲಕ ಕುಂಬಳೆಯ ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಮತ್ತು ಅವರ ಇಬ್ಬರು ತಮ್ಮಂದಿರಾದ ಮಮ್ಮು ಮಾಸ್ಟರ್ ಸಾಹಿಬರು, ಜನಾಬ್ ಕುಂಞಹ್ಮದ್ ಸಾಹಿಬರು ಮತ್ತು ಜನಾಬ್ ಟಿ.ಎ. ಅಬ್ದುಲ್ ಖಾದಿರ್ ಸಾಹಿಬ್ ಅಹ್ಮದಿಯರಾದರು.

1950–51ರ ಕಾಲದಲ್ಲಿ ಕುಂಬಳೆಯಲ್ಲಿ ಮುಸ್ಲಿಮರ ಒಂದು ಏಯಿಡಡ್ ಎಲ್.ಪಿ. ಸ್ಕೂಲಿನಲ್ಲಿ ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಮತ್ತು ಜನಾಬ್ ಮಮ್ಮು ಮಾಸ್ಟರ್ ಸಾಹಿಬರು ಅಧ್ಯಾಪಕರಾಗಿದ್ದರು. ಆ ಶಾಲೆಯ ವಿದ್ಯಾರ್ಥಿಗಳಲ್ಲಿ ಬಹುಸಂಖ್ಯಾತರು ಸುನ್ನಿ ಮುಸ್ಲಿಮರಾಗಿದ್ದರು. ಕೆಲವು ಮುಸ್ಲಿಮೇತರ ವಿದ್ಯಾರ್ಥಿಗಳೂ ಇದ್ದರು. ಮಮ್ಮು ಮಾಸ್ಟರ್ ಸಾಹಿಬರು ಕೆಲವು ಸಾರಿ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಜೊತೆಗೆ ಕುಂಬಳೆ ಪೇಟೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅದನ್ನು ಕಾಣುವಾಗ ಸುನ್ನಿಗಳಿಗೆ ಸಹಿಸಲಾಗುತ್ತಿರಲಿಲ್ಲ. ಒಂದು ದಿವಸ ಅವರಿಬ್ಬರು ಪೇಟೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಸುನ್ನಿಗಳ ಒಂದು ಗುಂಪು ಅವರನ್ನು ತಡೆದು ನಿಲ್ಲಿಸಿದರು ಮತ್ತು ಚಪ್ಪಲಿಗಳ ಒಂದು ಹಾರವನ್ನು ಜನಾಬ್ ಮಮ್ಮು ಮಾಸ್ಟರ್ ಸಾಹಿಬರ ಕೊರಳಿಗೆ ಹಾಕಿದರು. ಆಗ ಮಮ್ಮು ಮಾಸ್ಟರ್ ಸಾಹಿಬ್: ನಾನು ವಿರೋಧಿಗಳ ಭಯದಿಂದ ಇಷ್ಟರವರೆಗೆ ಬೈಅತ್ ಮಾಡಿರಲಿಲ್ಲ. ಇನ್ನು ಬೈಅತ್ ಮಾಡುವೆನು ಎಂದು ಹೇಳಿ ಕೆಲವು ದಿವಸಗಳ ನಂತರ ಬೈಅತ್ ಮಾಡಿದರು. ಅನಂತರ ಎರಡು ವರ್ಷಗಳು ದಾಟಿಹೋದ ನಂತರ ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಬೈಅತ್ ಮಾಡಿದರು.

ಮಮ್ಮು ಮಾಸ್ಟರ್ ಅಹ್ಮದಿಯಾ ಜಮಾಅತಿಗೆ ಸೇರಿದ ಬಗ್ಗೆ ತಿಳಿದುಕೊಂಡ ಸುನ್ನಿ ಮುಸ್ಲಿಮರು ಆ ಎಲ್.ಪಿ. ಶಾಲೆಗೆ ತಮ್ಮ ವಿದ್ಯಾರ್ಥಿಗಳನ್ನು ಕಳುಹಿಸದೆ ಬಹಿಷ್ಕರಿಸಿದರು. ಕೆಲವು ಮುಸ್ಲಿಮೇತರ ವಿದ್ಯಾರ್ಥಿಗಳು ಮಾತ್ರ ಶಾಲೆಯಲ್ಲಿದ್ದರು.

ಆ ಸಂದರ್ಭದಲ್ಲಿ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ತನ್ನ ಜ್ಯೇಷ್ಠ ಪುತ್ರ ಜನಾಬ್ ಸಿದ್ದೀಖ್ ಅಶ್ರಫ್ ಅಲಿಯವರನ್ನೂ ತನ್ನ ಪತ್ನಿಯ ಸೋದರ ಸಂಬಂಧಿ ಟಿ.ಎ. ಅಬ್ದುಲ್ ಖಾದಿರ್

ಸಾಹಿಬರ ಪುತ್ರಿ ನಫೀಸರನ್ನೂ ಬೇರೆ ಇಬ್ಬರನ್ನೂ ಮೊಗ್ರಾಲ್ ಸ್ಕೂಲಿನಿಂದ ಕುಂಬಳೆಯಲ್ಲಿ ಜನಾಬ್ ಮಮ್ಮು ಮಾಸ್ಟರ್ ಕಲಿಸುವ ಸ್ಕೂಲಿಗೆ ವರ್ಗಾಯಿಸಿದರು. ತಾವು ಶಾಲೆಯನ್ನು ಬಹಿಷ್ಕರಿಸಿದರೂ ಶಾಲೆಯು ಜಾರಿಯಲ್ಲಿರುವುದನ್ನು ಕಂಡು ಸಿಟ್ಟುಗೊಂಡು ಶಾಲೆಯನ್ನು ಸುನ್ನಿಗಳು ಸ್ವಾಧೀನಪಡಿಸಿಕೊಂಡರು. ಆ ಕಾಲದಲ್ಲಿ ಕುಂಬಳೆಯಲ್ಲಿ ಪೋಲೀಸ್ ಸ್ಟೇಷನ್ ಇರಲಿಲ್ಲ. ಆದುದರಿಂದ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರೂ ಜನಾಬ್ ಮಮ್ಮು ಮಾಸ್ಟರ್ ಸಾಹಿಬರೂ ಜನಾಬ್ ಮೂಸಾ ಮಾಸ್ಟರ್ ಸಾಹಿಬರೂ ವಿದ್ಯಾರ್ಥಿಗಳೂ ಮಂಜೇಶ್ವರ ಪೋಲೀಸ್ ಸ್ಟೇಷನಿಗೆ ಹೋಗಿ ದೂರು ನೀಡಿದರು. ಅನಂತರ ಎರಡು ವರ್ಷಗಳ ಕಾಲ ಕೋರ್ಟಿನಲ್ಲಿ ಮೊಕದ್ದಮೆಯ ವಿಚಾರಣೆ ನಡೆಯಿತು. ದುರ್ಭಾಗ್ಯ ವಶಾತ್ ಮೊಕದ್ದಮೆಯಲ್ಲಿ ಸುನ್ನಿಗಳ ಪರವಾಗಿ ತೀರ್ಪು ಆಯಿತು. ಆ ಕಾರಣದಿಂದ ಜನಾಬ್ ಮಮ್ಮು ಮಾಸ್ಟರ್ ಸಾಹಿಬರಿಗೂ ಜನಾಬ್ ಮೂಸಾ ಮಾಸ್ಟರ್ ಸಾಹಿಬರಿಗೂ ಅಧ್ಯಾಪಕ ವೃತ್ತಿ ನಷ್ಟವಾಯಿತು. ಅನಂತರ ಜನಾಬ್ ಮೂಸಾ ಮಾಸ್ಟರ್ ಸಾಹಿಬ್ ಮೊಗ್ರಾಲ್ ಪುತ್ತೂರಿನ ಶಾಲಿಯಲ್ಲಿ ಅಧ್ಯಾಪಕರಾದರು. ಮಮ್ಮು ಮಾಸ್ಟರ್ ಸಾಹಿಬ್ ಅಧ್ಯಾಪಕ ವೃತ್ತಿ ತ್ಯಜಿಸಿ ಮರದ ವ್ಯಾಪಾರಿಯಾದರು. ಕೇರಳ ವಿದ್ಯಾಭ್ಯಾಸ ಇಲಾಖೆ ಆ ಶಾಲೆಯ ಅಂಗೀಕಾರವನ್ನು ರದ್ದುಗೊಳಿಸಿತು. ಒಂದು ವರ್ಷ ಕಳೆದ ನಂತರ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ತನ್ನ ಹಿರಿಯ ಪುತ್ರ ಜನಾಬ್ ಸಿದ್ದೀಖ್ ಅಶ್ರಫ್ ಅಲಿ ಸಾಹಿಬರನ್ನು ವಿದ್ಯಾಭ್ಯಾಸ ಮಾಡಲು ಖಾದಿಯಾನಿಗೆ ಕಳುಹಿಸಿದರು. ಆಗ ಅವರ ಪ್ರಾಯ ಒಂಬತ್ತು ವರ್ಷವಾಗಿತ್ತು.

ಮೊಗ್ರಾಲಿನ ಮಸ್‌ಜಿದ್‌ನಲ್ಲಿ ನಡೆದ ಘಟನೆಗೆ ಮೊದಲು ಸಂಭವಿಸಿದ ಇನ್ನೊಂದು ಘಟನೆ ಬಗ್ಗೆ ಜನಾಬ್ ಬಶೀರ್ ಅಹ್ಮದ್ ಸಿದ್ದೀಖ್ ಸಾಹಿಬರು ನನ್ನೊಂದಿಗೆ ಹೀಗೆ ಹೇಳಿದರು:

ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರ ಪತ್ನಿಯ ಸೋದರ ಸಂಬಂಧಿಯಾದ ಟಿ.ಎ. ಅಬ್ದುಲ್ ಖಾದರ್ ಸಾಹಿಬ್‌ರವರ ಮನೆಯಲ್ಲಿ ಒಬ್ಬ ಬಡವಳಾದ ಸುನ್ನಿ ಮಹಿಳೆ ವಾಸಿಸುತ್ತಿದ್ದರು. ಅವರ ಹೆಸರು ಕೋಟಪುರಂ ಪಾತುಮ್ಮ ಎಂದಾಗಿತ್ತು. ಆ ಮಹಿಳೆಗೆ ಸಂಬಂಧಿಕರು ಇಲ್ಲದ ಕಾರಣ ಆಕೆ ಜನಾಬ್ ಟಿ.ಎ. ಅಬ್ದುಲ್ ಖಾದರ್ ಸಾಹಿಬರ ಕುಟುಂಬದಲ್ಲಿ ಕುಟುಂಬದ ಒಬ್ಬ ಸದಸ್ಯೆಯ ಹಾಗೆ ಗಣಿಸಲ್ಪಟ್ಟು ವಾಸಿಸುತ್ತಿದ್ದರು. ಧಾರ್ಮಿಕ ವಿಶ್ವಾಸಗಳ ವಿಭಿನ್ನತೆಯ ಕಾರಣದಿಂದ ಅವರ ಜೀವಿತಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಆ ಮಹಿಳೆ ವಾರ್ಧಕ್ಯ ಸಹಜವಾಗಿ ಮೃತಳಾದಾಗ ಅವರನ್ನು ದಫನು ಮಾಡಲು ಚೆಳಿಯಂಗೋಡ್ ಮಸ್‌ಜಿದ್ ಖಬರಸ್ಥಾನದಲ್ಲಿ ಅಹ್ಮದಿಯರು ವ್ಯವಸ್ಥೆ ಮಾಡಿದರು. ಆ ಮಹಿಳೆ ಸುನ್ನಿಯಾದ ಕಾರಣ ಅವರ ಜನಾಝ ನಮಾಝ್ ಸುನ್ನಿ ಮುಕ್ರಿ ನಿರ್ವಹಿಸಬೇಕೆಂದು ಜನಾಬ್ ಟಿ.ಎ. ಅಬ್ದುಲ್ ಖಾದರ್ ಸಾಹಿಬರು ಅಪೇಕ್ಷಿಸಿದರು. ಆದರೆ ಮುಕ್ರಿ ಮಹಿಳೆಯ ಮಯ್ಯತ್ತನ್ನು ಕಾಣಲು ಬರಲಿಲ್ಲ ಮತ್ತು ಜನಾಝ ನಮಾಝ್ ನಿರ್ವಹಿಸಲೂ ಇಲ್ಲ. ಅಹ್ಮದಿಯರು ಮೃತ ಮಹಿಳೆಯ ಅಂತ್ಯ ಕರ್ಮಗಳನ್ನು ನಿರ್ವಹಿಸಿ ಚೆಳಿಯಂಗೋಡ್ ಮಸ್‌ಜಿದ್ ಖಬರಸ್ಥಾನದಲ್ಲಿ ದಫನು ಮಾಡಿದರು.

ಅನಂತರ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಒಂದು ಧರ್ಮಪ್ರಚಾರ ಸಭೆಯನ್ನು ಮೊಗ್ರಾಲಿನಲ್ಲಿ ಜರಗಿಸಿದರು. ಅ ಸಭೆಯ ನಂತರ ಉದ್ರೇಕಿಸಲ್ಪಟ್ಟ ಸುನ್ನಿಗಳು ಒಂದು ದೊಡ್ಡ ಸಭೆಯನ್ನು ಮೊಗ್ರಾಲಿನಲ್ಲಿ ಜರಗಿಸಿದರು. ಆ ಸಭೆಯಲ್ಲಿ ವಿವಿಧ ಸ್ಥಳಗಳಿಂದ ಮೌಲವಿಗಳು ಅಹ್ಮದಿಯರನ್ನು ಅತ್ಯಂತ ಕಠಿಣವಾಗಿ ನಿಂದಿಸಿ ಭಾಷಣ ಮಾಡಿದರು. ಒಬ್ಬ ಮೌಲವಿಯ ಭಾಷಣ ಅತ್ಯಂತ ರೊಚ್ಚಿಗೆಬ್ಬಿಸುವಂತಹದ್ದಾಗಿತ್ತು. ಆ ಮೌಲವಿ ಹೀಗೆ ಹೇಳಿದ: ಏನು ಖಾದಿಯಾನಿಗಳು ಈ ಊರಿನಲ್ಲಿ ಸಭೆ ಸೇರಿಸುವರೇನು? ಅವರಿಗೆಷ್ಟು ಅಹಂಭಾವವಿದೆ. ಅವರ ಮಸ್‌ಜಿದ್‌ಗಳನ್ನು ಧ್ವಂಸ ಮಾಡಬೇಕು. ಅವರನ್ನು ಅಭಿವೃದ್ಧಿ ಗಳಿಸಲು ಬಿಡಬಾರದು.

ಅನಂತರ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬರು ಒಂದು ಕರಪತ್ರ ಮುದ್ರಿಸಿ ಪ್ರಕಟಿಸಿದರು. ಅದರ ಶೀರ್ಷಿಕೆ ಹೀಗಿತ್ತು– "ಮುಕ್ರಿ ಜನಾಝ ನಮಾಝ್ ಅನುಷ್ಠಿಸಲಿಲ್ಲ." ಕೆಲವು ದಿನಗಳು ಕಳೆದ ನಂತರ ಚಳಿಯಂಗೋಡ್ ಮಸ್‌ಜಿದ್‌ಗೆ ಸಂಬಂಧಿಸಿದ ಘಟನೆ ನಡೆಯಿತು.

**(ಕನ್ನಡ ಭಾಷಾಂತರ: ಎಮ್. ಉಬೈದುಲ್ಲಾ)**

♦


# LOVE FOR ALL

# HATRED FOR NONE

# LET'S MAKE IT HEAVEN

ವಾರ್ತೆಗಳು

## ಬೆಂಗಳೂರು ಸಾಹಿತ್ಯೋತ್ಸವ – 2022

**ಬೆಂಗಳೂರು:** ಡಿಸೆಂಬರ್ 3 ಮತ್ತು 4 ರಂದು ಬೆಂಗಳೂರಿನಲ್ಲಿ ಸಾಹಿತ್ಯೋತ್ಸವ ಜರಗಿತು. ದೇಶಾದ್ಯಂತದ ಮತ್ತು ಪರದೇಶಗಳ ನೂರಾರು ಸಾಹಿತಿಗಳು, ಕವಿಗಳು, ಪತ್ರಕರ್ತರು ಭಾಗವಹಿಸಿ ತಮ್ಮ ಕೃತಿಗಳನ್ನು ಪ್ರದರ್ಶಿಸಿದರು.

ಈ 11ನೇ ಸಾಹಿತ್ಯೋತ್ಸವ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಯಿತು.

ಬೆಂಗಳೂರು ಅಹ್ಮದಿಯಾ ಮುಸ್ಲಿಂ ಸಂಘಟನೆಯ ಅಮೀರ್ ಮುಹಮ್ಮದ್ ಹಷ್ಮತುಲ್ಲಾಹ್ ಸಾಹಿಬ್, ಮುಬಲ್ಲಿಗ್ ಮೌಲವಿ ಕೆ.ವಿ. ತಾಹಿರ್ ಸಾಹಿಬ್, ಸಿ.ಜಿ. ಸುಹೈಲ್ ಸಾಹಿಬ್ ಸಹಿತ 20 ಸದಸ್ಯರು ಈ ಸಾಹಿತ್ಯೋತ್ಸವದಲ್ಲಿ ಭಾಗವಹಿಸಿದರು. ಸುಮಾರು 50ರಷ್ಟು ಗಣ್ಯ ವ್ಯಕ್ತಿಗಳನ್ನು ಸಂಪರ್ಕಿಸಿ ಅಹ್ಮದಿಯಾ ಸಂಘಟನೆಯ ಪರಿಚಯ ಮಾಡಿಕೊಡಲಾಯಿತು. ಅಹ್ಮದಿಯಾ ಸಂಘಟನೆಯ ಖಲೀಫ ರಚಿಸಿದ "World Crisis And Pathway To Peace" ಎಂಬ ಕೃತಿಯನ್ನು ಅವರಿಗೆ ನೀಡಲಾಯಿತು. **(ವರದಿ: ಶಾಹಿದ್ ಬದ್ರುದ್ದೀನ್)**.

==========================================================

## ರೋಗಿಗಳಿಗೆ ಹಣ್ಣು ಹಂಪಲು ವಿತರಣೆ

**ಮಂಗಳೂರು:** ಮಂಗಳೂರಿನ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಜನವರಿ 1ರಂದು ಲೇಡಿಗೋಶನ್ ಆಸ್ಪತ್ರೆಯ ಸುಮಾರು 300 ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಅಹ್ಮದಿಯಾ ಉಪ ಘಟಕಗಳಾದ ಮಜ್ಲಿಸ್ ಅನ್ಸಾರುಲ್ಲಾಹ್ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸಹಕಾರದಿಂದ ಈ ಕಾರ್ಯಕ್ರಮವನ್ನು ನಡೆಸಲಾಯಿತು.

ಸ್ಥಳೀಯ ಅಧ್ಯಕ್ಷರಾದ ಬಿ.ಎಸ್. ಅಬ್ದುರ್ರಹೀಂ, ಮೌಲವಿ ಶರೀಫ್ ಖಾನ್, ಅನ್ಸಾರುಲ್ಲಾಹ್ ಝುಈಂ ಮುಹಮ್ಮದ್ ಯೂಸುಫ್, ನಾಇಬ್ ಖಾಯಿದ್ ಇರ್ಫಾನ್ ರಾಯ್‌ಚೂರಿ, ಮಂಜೇಶ್ವರ ಘಟಕದ ಖಾಯಿದ್ ಅಹ್ಮದ್ ರಾಶಿಕ್ ಸಹಿತ 18 ಮಂದಿ ಭಾಗವಹಿಸಿದರು.

==========================================================

## ಉಚಿತ ನೇತ್ರ ಪರೀಕ್ಷೆ ಕ್ಯಾಂಪ್



**ಕಡಲಾಯಿ:** ಅಹ್ಮದಿಯಾ ಮಹಿಳಾ ಘಟಕಗಳಾದ ಲಜ್ನಾ ಇಮಾಇಲ್ಲಾಹ್ ಕಡಲಾಯಿ, ತಲಚ್ಚೇರಿ, ಮಾಹಿ ಮತ್ತು ಅಲ್–ಸಲಾಮ ಕಣ್ಣಾಸ್ಪತ್ರೆ ಕಣ್ಣೂರ್ ಸಹಯೋಗದಲ್ಲಿ ಕಳೆದ ನವೆಂಬರ್ 27ರಂದು ಕಡಲಾಯಿ ಸೌತ್ ಯು.ಪಿ. ಸ್ಕೂಲ್‌ನಲ್ಲಿ ಬೆಳಿಗ್ಗೆ 9:30ರಿಂದ ಮಧ್ಯಾಹ್ನ 1ರ ವರೆಗೆ ಉಚಿತ ನೇತ್ರ ಪರೀಕ್ಷೆ ಶಿಬಿರವನ್ನು ಏರ್ಪಡಿಸಲಾಯಿತು. ಅನೇಕ ಮಂದಿ ಪ್ರಯೋಜನ ಪಡೆದರು.

==========================================================

### ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

**1. ಜ॥ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಬೆಂಗಳೂರು – ರೂ. 2000/–**

**2. ಜ॥ ಎಂ. ಇ. ಮುಹಮ್ಮದಲಿ ಸಾಹಿಬ್, ಮೈಸೂರು – ರೂ. 500/–**

## ಜನಾಬ್ ಸಿ. ಸಲೀಂ ಅಹ್ಮದ್ ಸಾಹಿಬ್



**ಪಯಂಗಾಡಿ:** ಜ। ಸಿ. ಸಲೀಂ ಅಹ್ಮದ್ ಸಾಹಿಬ್ ತನ್ನ 84ನೇ ಪ್ರಾಯದಲ್ಲಿ 28–1–2022 ರಂದು ಸ್ವಗೃಹದಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

1965 ಮೊದಲ್ಗೊಂಡು ದುಬೈ ಜಮಾಅತಿನಲ್ಲಿ ಅವರು 40 ವರ್ಷಗಳ ಕಾಲ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು. ಆದ್ಯಕಾಲದಲ್ಲಿ ದುಬೈ – ಶಾರ್ಜಾ ಸಂಯುಕ್ತ ಜಮಾಅತಿನಲ್ಲಿ ಸೆಕ್ರಿಟರಿ ಮಾಲ್ ಮತ್ತು ನಾಇಬ್ ಅಮೀರ್ ಆಗಿದ್ದರು. 1989ರಲ್ಲಿ ದುಬೈ ಸ್ವತಂತ್ರ ಜಮಾಅತಾಗ, ಪ್ರಥಮ ಅಮೀರ್ ಆಗಿ 9 ವರ್ಷ ಕಾಲ ಸೇವೆ ಸಲ್ಲಿಸಿದರು. 1972 ಮೊದಲ್ಗೊಂಡು ಸ್ವವಸತಿಯಲ್ಲಿ ಜುಮುಅ ನಮಾಝ್ ಮಾಡಲು ವ್ಯವಸ್ಥೆ ಮಾಡಿದ್ದರು.

ಸ್ವದೇಶಕ್ಕೆ ಮರಳಿದ ಬಳಿಕ 2007ರಿಂದ 9 ವರ್ಷಗಳ ಕಾಲ ಅವರು ಪಯಂಗಾಡಿ ಜಮಾಅತಿನ ಅಮೀರ್ ಆಗಿ ಸೇವೆ ಸಲ್ಲಿಸಿದರು. ಡಾ। ಗುಲಾಂ ಅಹ್ಮದ್ ಸಾಹಿಬರು (ಅಮೀರ್, ಜಮಾಅತ್ ಪಯಂಗಾಡಿ) ಅವರ ಹಿರಿಯ ಪುತ್ರ. ಅವರು ಪತ್ನಿ, ನಾಲ್ವರು ಪುತ್ರರು ಮತ್ತು ಅನೇಕ ಬಂಧುಬಾಂಧವರನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.

==========================================================

## ಜನಾಬ್ ಮೌಲವಿ ಮುಹಮ್ಮದ್ ಸಲೀಂ ಸಾಹಿಬ್



**ಕೊಡುಂಗಲ್ಲೂರ್:** ಕೊಡುಂಗಲ್ಲೂರ್ ನಿವಾಸಿ ಜ। ಮೌಲವಿ ಮುಹಮ್ಮದ್ ಸಲೀಂ ಸಾಹಿಬ್ 29–9–2022 ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

1989ರಲ್ಲಿ "ಮುಬಾಹಲ" ಕಿರುಹೊತ್ತಗೆ ಮೂಲಕ ಅವರಿಗೆ ಅಹ್ಮದಿಯತಿನ ಸಂದೇಶ ತಲಪಿತು. ಅಹ್ಮದಿಯತ್ ಸ್ವೀಕರಿಸಿದ ನಂತರ ಅವರು ವಿರೋಧಿಗಳಿಂದ ದೌರ್ಜನ್ಯಕ್ಕೆ ಗುರಿಯಾದರು. ಖಾದಿಯಾನಿನ ಜಮೀಅತುಲ್ ಮುಬಶ್ಶಿರೀನ್‌ನಲ್ಲಿ ಕಲಿತ ನಂತರ ಆಂಧ್ರ ಪ್ರದೇಶದ ಕುಗ್ರಾಮಗಳಲ್ಲಿ ಅವರು ಸೇವೆ ಸಲ್ಲಿಸಿದರು. ಅನಿಸ್ಲಾಮಿಕ ಆಚಾರ ವಿಚಾರಗಳಲ್ಲಿ ಮುಳುಗಿದ್ದ ಅಲ್ಲಿನ ಮುಸ್ಲಿಮರಿಗೆ ಇಸ್ಲಾಮಿನ ಸರಿಯಾದ ಪಾಠಗಳನ್ನು ಅವರು ಕಲಿಸಿದರು. ಅಲ್ಲಿ 15 ವರ್ಷಗಳ ಕಾಲ ಅವರು ವಿವಿಧ ಕಡೆಗಳಲ್ಲಿ ಸೇವೆ ಸಲ್ಲಿಸಿದರು.

2010ರ ನಂತರ ಕೇರಳದ ಕೋಝಿಕ್ಕೋಡ್, ಆಲೂರ್, ತಲಚ್ಚೇರಿ, ಮಾಹಿ, ಕೊಡುಂಗಲ್ಲೂರ್ ಎಂಬೆಡೆಗಳಲ್ಲಿ ಸೇವೆ ಸಲ್ಲಿಸಿದರು. ಅವರು ಪ್ರತಿವರ್ಷ ಜಲ್ಸಾ ಸಾಲಾನಾದಲ್ಲಿ ಭಾಗವಹಿಸುತ್ತಿದ್ದರು. ಚತುರ್ಥ ಖಲೀಫರ ಕಾಲದಲ್ಲಿ ದುಬೈಯಲ್ಲಿ ರಮಝಾನ್ ಮಾಸದಲ್ಲಿ ಅವರು ಸೇವೆ ಸಲ್ಲಿಸಿದರು. ಚತುರ್ಥ ಖಲೀಫ ಮತ್ತು ಪಂಚಮ ಖಲೀಫರನ್ನು ಭೇಟಿಯಾಗುವ ಸೌಭಾಗ್ಯ ಅವರಿಗೆ ಲಭಿಸಿತ್ತು. ಅಕ್ಟೋಬರ್ 2ರಂದು ಖಾದಿಯಾನಿನ ಬಿಹಿಶ್ತಿ ಮಖ್‌ಬರದಲ್ಲಿ ಅವರನ್ನು ದಫನ ಮಾಡಲಾಯಿತು. ಮೌಲವಿ ಮುಹಮ್ಮದ್ ಸಾಲಿಹ್ ಸಾಹಿಬ್ (ಮುಬಲ್ಲಿಗ್) ಅವರ ಪುತ್ರರಾಗಿದ್ದಾರೆ. ಅವರು ಪತ್ನಿ, ಓರ್ವ ಪುತ್ರಿ ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.

==========================================================

## ಎಂ. ಮುಸ್ತಫ ಸಾಹಿಬ್



**ಕರುಳಾಯಿ:** ಕರುಳಾಯಿ ಜಮಾಅತಿನ ಮಲಪ್ಪುರಮ್ ಮುಸ್ತಫ ಸಾಹಿಬ್ ("ಯುಗರಶ್ಮಿ" ಬಳಗದ ಕೆ.ಎಂ. ಉಮರ್ ಸಾಹಿಬರ ಮಗಳ ಗಂಡ) ತನ್ನ 64ನೇ ವಯಸ್ಸಿನಲ್ಲಿ 9–11–2022ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಅವರು ಸೌಮ್ಯ ಸ್ವಭಾವದವರಾಗಿದ್ದರು. ಜಮಾಅತಿನ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಅವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅನೇಕ ಬಂಧು ಬಳಗದವರನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.

## ಸಂಪಾದಕರಿಗೆ ಪತ್ರ

ಮಾನ್ಯರೇ,

ಅಕ್ಟೋಬರ್ 2022ರ ತ್ರೈಮಾಸಿಕ ಪತ್ರಿಕೆ "ಯುಗರಶ್ಮಿ" ತಲುಪಿತು. ಧನ್ಯವಾದಗಳು.

ಮುಖಪುಟದ "ಮಸ್ಜಿದ್ ಫತ್‌ಹೆ ಅಝೀಮ್" ಚಿತ್ರ ತುಂಬಾ ಸೊಗಸಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿರುವ ಹಾಗೆ ಪ್ರಾರ್ಥನೆಗಳು ಪರಿವರ್ತನೆಯನ್ನುಂಟುಮಾಡುತ್ತವೆ.

ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು ತುಂಬಾ ಚೆನ್ನಾಗಿದೆ. ವಿಶ್ವ ಭ್ರಾತೃತ್ವ ಮತ್ತು ಮಾನವರೆಲ್ಲರೂ ಸಮಾನರೆಂಬ ಸಿದ್ಧಾಂತ ಮುಹಮ್ಮದರು ಪ್ರತಿಪಾದಿಸಿದರು. "ಯಾವುದಾದರೂ ಧರ್ಮಕ್ಕೆ ಇಂಗ್ಲೆಂಡನ್ನು ಅಲ್ಲ, ಯುರೋಪನ್ನು ಒಂದು ನೂರು ವರ್ಷಗಳೊಳಗೆ ಆಳಲು ಸಂದರ್ಭ ಸಿಗುವುದಾದರೆ ಅದು ಇಸ್ಲಾಮ್ ಧರ್ಮಕ್ಕೆ ಆಗಿದೆ" ಎಂದು ಜೋರ್ಜ್ ಬರ್ನಾರ್ಡ್ ಶಾ ಹೇಳಿರುವರು.

"ಮುಹಮ್ಮದ್ ಪೈಗಂಬರ್ ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ" ಇದರಲ್ಲಿ ಜವಾಹರಲಾಲ್ ನೆಹರೂ, ಮೋಹನ್‌ದಾಸ್ ಕರಮ್‌ಚಂದ್ ಗಾಂಧೀ, ಎಚ್.ಜಿ. ವೆಲ್ಸ್ ಮುಂತಾದವರು ಬರೆದಿರುವರು. ಯುಗರಶ್ಮಿಗೆ ಧನ್ಯವಾದಗಳು.

ತಮ್ಮ ಸೋದರಿ

ಬಿ.ಎಸ್. ಶಾಂತಾ ಬಾಯಿ. ಪ್ರಧಾನ ಕಾರ್ಯದರ್ಶಿ,

ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ, ಬೆಂಗಳೂರು

---

ನಿಮ್ಮ ಪತ್ರಿಕೆಯನ್ನು ವಿಜಯಪುರದ ಗ್ರಂಥಾಲಯದಲ್ಲಿ ಗಮನಿಸಿ ಪತ್ರ ಬರೆದಿರುವೆ.

ಮಾನವೀಯ ಗುಣಗಳ ಬಗ್ಗೆ ಪತ್ರಿಕೆಯ ಮಾಹಿತಿ ತುಂಬಾ ಉಪಯುಕ್ತ. ಅನುಭವದ ಹಿತವಚನ ಸರ್ವರ ಬಾಳಿಗೆ ದಾರಿದೀಪದ ಮಾತುಗಳು ಆಗಿವೆ.

ಇಸ್ಲಾಂ ಬಗ್ಗೆ ನನ್ನ ಅಭಿಪ್ರಾಯ: ನಾನು ಜಂಗಮ ಕಾರ್ಮಿಕ ಆಗಿರುವುದರಿಂದ ದಿನವೂ ಪ್ರಯಾಣದಲ್ಲಿ ನಾನು ವಿಜಯಪುರ ಮಾರ್ಗವಾಗಿ ಬರುವಾಗ ರಾತ್ರಿ 9ರ ನಂತರ KSRTC ಬಸ್ ನಿಲ್ದಾಣದ ಆವರಣದಲ್ಲಿ ಕೆಲವು ಮುಸ್ಲಿಂ ಯುವಕರು, ಹಿರಿಯರು ಬಂದು ಹಸಿದವರಿಗೆ ನೂರಾರು ಆಹಾರದ ಪೊಟ್ಟಣಗಳನ್ನು ಉಚಿತವಾಗಿ ಕೊಡುತ್ತಾರೆ. ನಿರ್ಗತಿಕರಿಗೆ, ಅಂಗವಿಕಲರಿಗೆ, ಹಸಿದು ಬಂದ ಪ್ರವಾಸಿಗರಿಗೆ ತುಂಬಾ ಪ್ರಯೋಜನಕಾರಿ ಸಮಾಜ ಸೇವೆ, ಪ್ರಾಮಾಣಿಕ ಸೇವೆ. ಮಾನವೀಯ ಗುಣದ ಇಸ್ಲಾಂ ಧರ್ಮಕ್ಕೆ ಶುಭವಾಗಲಿ. ನಾನು ಆಹಾರ ಸೇವಿಸಿರುವೆ. ಬಿಸಿಯಾಗಿ ಇರುತ್ತದೆ. ಉತ್ತಮವಾಗಿ ಇರುತ್ತದೆ. ನಿಸ್ವಾರ್ಥ ಸೇವೆಗೆ ನಮನ.

ಇದುವೇ ಬಸವಣ್ಣನವರು ಹೇಳಿದ್ದು – "ದಯವೇ ಧರ್ಮದ ಮೂಲವಯ್ಯಾ".

– ಎಂ.ಎಸ್. ಹಿರೇಮಠ

ಬಸವನವಾಗೇವಾಡಿ

---

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

## "ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

ಓದಿದ್ದು

# 2021ರ ವಿಶ್ವಸಂಸ್ಥೆ ಮಾನವ ಅಭಿವೃದ್ಧಿ ಸೂಚ್ಯಂಕ 132ನೇ ಸ್ಥಾನಕ್ಕೆ ಕುಸಿದ ಭಾರತ

**ಹೊಸದಿಲ್ಲಿ, ಸೆ.8:** ಗುರುವಾರ ಪ್ರಕಟಗೊಂಡ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ವರದಿಯಲ್ಲಿ 2021ರ ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ)ದಲ್ಲಿ ಭಾರತವು 2020ಕ್ಕೆ ಹೋಲಿಸಿದರೆ ಇನ್ನಷ್ಟು ಕೆಳಕ್ಕೆ ಜಾರಿದೆ. 191 ದೇಶಗಳ ಪಟ್ಟಿಯಲ್ಲಿ ಭಾರತವು 132ನೇ ಸ್ಥಾನದಲ್ಲಿದೆ.

ವರದಿಯು ಈ ದೇಶಗಳ ಪ್ರಜೆಗಳ ಸುದೀರ್ಘ ಮತ್ತು ಆರೋಗ್ಯಕರ ಜೀವನವನ್ನು ನಡೆಸುವ ಸಾಮರ್ಥ್ಯ, ಅವರಿಗೆ ಜ್ಞಾನಗಳಿಕೆಗೆ ಅವಕಾಶ ಮತ್ತು ಯೋಗ್ಯವಾದ ಜೀವನಮಟ್ಟ ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದೆ. **(ವಾರ್ತಾಭಾರತಿ 9–9–2022).**

================================================================

# ಗಮನ ಸೆಳೆದ 10 ಕೋ. ರೂ. ಬೆಲೆಯ ಭೀಮ!

**ಶಿವಮೊಗ್ಗ, ಅ. 2:** ಇಲ್ಲಿನ ಗಾಂಧಿ ಪಾರ್ಕ್ ರವಿವಾರ ಶ್ವಾನ ಪ್ರಿಯರ ಆಕರ್ಷಣೆಯ ತಾಣವಾಗಿತ್ತು. ಶಿವಮೊಗ್ಗ ದಸರಾ ಅಂಗವಾಗಿ ರಾಜ್ಯಮಟ್ಟದ ಶ್ವಾನ ಪ್ರದರ್ಶನ ಸ್ಪರ್ಧೆ ಏರ್ಪಡಿಸಲಾಗಿತ್ತು. ಉಡುಪಿ, ಮಂಗಳೂರು, ದಾವಣಗೆರೆ, ಹುಬ್ಬಳ್ಳಿ, ಭದ್ರಾವತಿಯಿಂದ ಹಲವು ಜನರು ತಮ್ಮ ನಾಯಿಗಳೊಂದಿಗೆ ಭಾಗವಹಿಸಿದ್ದರು. ಇದರಲ್ಲಿ ಹಸ್ಕಿ, ಜರ್ಮನ್ ಶೆಫರ್ಡ್, ಪಮೋರಿಯನ್ ಮುಧೋಳ, ಗೋಲ್ಡನ್ ರಿಟ್ರೇವರ್, ರಾಟ್ ವಿಲ್ಲರ್ ಫಗ್ ಸಹಿತ ಪ್ರಮುಖ 15 ಬಗೆಯ ನಾಯಿಗಳಿದ್ದುವು. ಇದರಲ್ಲಿ 10 ಕೋಟಿ ರೂ. ಮೌಲ್ಯದ ಟಿಬೇಟಿಯನ್ ಮಸ್ತಿಫ್ 'ಭೀಮ' ಎಲ್ಲರ ಆಕರ್ಷಣೆಯ ಕೇಂದ್ರಬಿಂದುವಾಗಿದ್ದು, ಇದನ್ನು ನೋಡಲು ಸಾವಿರಾರು ಜನ ಆಗಮಿಸಿದ್ದರು. ಇದನ್ನು ಬೆಂಗಳೂರಿನ ನಟ ಹಾಗೂ ಇಂಡಿಯನ್ ಡಾಗ್ ಬ್ರೀಡರ್ಸ್ ಅಸೋಸಿಯೇಶನ್ಸ್ ಅಧ್ಯಕ್ಷ ಸತೀಶ್ ಕರೆತಂದಿದ್ದರು. ಬೀಜಿಂಗ್‌ನಿಂದ ತರಿಸಿಕೊಂಡಿದ್ದ ಈ ನಾಯಿಗೆ ಎರಡೂವರೆ ವರ್ಷ ವಯಸ್ಸು. ಪ್ರತಿ ದಿನ ಚಿಕನ್ ನೀಡಬೇಕಾಗಿದೆ ಹಾಗೂ ಯಾವಾಗಲೂ ಎಸಿ ರೂಮ್‌ನಲ್ಲೇ ಇರಿಸಬೇಕು. ತಿಂಗಳಿಗೆ 50 ಸಾವಿರ ಖರ್ಚು ಬರುತ್ತದೆ ಎನ್ನುತ್ತಾರೆ ಸತೀಶ್. **(ಉದಯವಾಣಿ 3–10–2022)**

================================================================

# ದುಬ್ಯಾಯಲ್ಲಿ ದೇಗುಲ ಲೋಕಾರ್ಪಣೆ

ಸಂಯುಕ್ತ ಅರಬ್ ಗಣರಾಜ್ಯದ ರಾಜಧಾನಿ ದುಬ್ಯಾಯ ಜೆಬೆಲ್ ಅಲಿಯಲ್ಲಿ ಬೃಹದಾಕಾರದ ದೇಗುಲ ನಿರ್ಮಿಸಲಾಗಿದ್ದು, ಅದು ದಸರಾ 9ನೇ ದಿನವಾದ ಮಂಗಳವಾರ ಲೋಕಾರ್ಪಣೆಗೊಂಡಿದೆ. ಅಲ್ಲಿನ ಸಹಿಷ್ಣುತೆ ಮತ್ತು ಸಹಬಾಳ್ವೆ ಸಚಿವ ಶೇಕ್ ನಹ್ಯಾನ್ ಬಿನ್ ಮುಬಾರಕ್ ಅಲ್ ನಹ್ಯಾನ್ ಅವರು ದೀಪ ಬೆಳಗಿಸಿ, ದೇಗುಲವನ್ನು ಉದ್ಘಾಟಿಸಿದ್ದಾರೆ. **(ಉದಯವಾಣಿ 6–10–2022)**

================================================================

# ಇಮ್ರಾನ್ ಪ್ರಮಾಣೀಕೃತ ಕಳ್ಳ ಪಾಕ್ ಪ್ರಧಾನಿ ಟೀಕೆ

**ಇಸ್ಲಾಮಾಬಾದ್, ಅ. 22:** ಉಡುಗೊರೆಗಳನ್ನು ಮಾರಾಟ ಮಾಡಿದ ಪ್ರಕರಣದಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ರನ್ನು ಚುನಾವಣಾ ಆಯೋಗ ಅನರ್ಹಗೊಳಿಸಿರುವ ಬಗ್ಗೆ ಪ್ರತಿಕ್ರಿಯಿಸಿರುವ ಪಾಕಿಸ್ತಾನ ಪ್ರಧಾನಿ ಶಹಬಾಝ್ ಶರೀಫ್, ಇಮ್ರಾನ್ ಖಾನ್ ಓರ್ವ ಪ್ರಮಾಣೀಕೃತ ಕಳ್ಳ ಎಂದು ಟೀಕಿಸಿದ್ದಾರೆ.

ಲಾಹೋರ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶರೀಫ್, ತಾನೊಬ್ಬ ಪ್ರಮಾಣೀಕೃತ ಸುಳ್ಳುಗಾರ ಮತ್ತು ಕಳ್ಳ ಎಂಬುದನ್ನು ಇಮ್ರಾನ್ ಖಾನ್ ಸಾಬೀತುಪಡಿಸಿದ್ದಾರೆ. ಆದರೆ ಇದು ಸಂತೋಷದ ಕ್ಷಣವಲ್ಲ. ವಾಸ್ತವದ ಪ್ರತಿಬಿಂಬ ಎಂದು ಹೇಳಿದರು. ಸರಕಾರದ ಮುಖ್ಯಸ್ಥನಾಗಿ ಪಡೆದಿರುವ ಉಡುಗೊರೆಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಿ ಅವನ್ನು ಭಾರೀ ಲಾಭದಲ್ಲಿ ಮಾರಾಟ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಶರೀಫ್, ಇಮ್ರಾನ್ ಉಡುಗೊರೆಗಳನ್ನು ಹರಾಜು ಹಾಕಿ ಅದರ ಮೊತ್ತವನ್ನು ಸರಕಾರದ ಖಜಾನೆಗೆ ಸೇರಿಸಬೇಕಿತ್ತು ಎಂದರು. **(ವಾರ್ತಾಭಾರತಿ 23–10–2022)**

================================================================

# ಬಾಲಕ ಕಚ್ಚಿದ್ದರಿಂದ ಸತ್ತೇ ಹೋದ ಹಾವು

ನಾಗರಹಾವು ಕಡಿದರೆ ಸಾವು ಗ್ಯಾರಂಟಿ ಎಂಬ ನಂಬಿಕೆ ಹೆಚ್ಚಿನವರಲ್ಲಿ ಇದೆ. ಆದರೆ ಛತ್ತೀಸ್‌ಗಢದ ಜಶ್ಪುರ್ ಜಿಲ್ಲೆಯಲ್ಲಿ ನಡೆದ ಅಚ್ಚರಿಯ ಬೆಳವಣಿಗೆಯಲ್ಲಿ ದೀಪಕ್ ಎಂಬ ಬಾಲಕನೇ ಹಾವಿಗೆ ಎರಡು ಬಾರಿ ಕಚ್ಚಿದ್ದಾನೆ. ಹೀಗಾಗಿ ಅದು ಸತ್ತೇ ಹೋಗಿದೆ. ಮನೆಯ ಹಿಂಭಾಗದಲ್ಲಿ ಆಟವಾಡಿಕೊಂಡು ಇದ್ದಾಗ ಆತನಿಗೆ ನಾಗರಹಾವು ಕಡಿದಿತ್ತು. ಮಾತ್ರವಲ್ಲದೆ ಆತನ ಕೈಗೆ ಸುತ್ತಿಕೊಂಡಿತು. ಮೊದಲಿಗೆ

ಹೆದರಿಕೆಯಾಗಿದ್ದರೂ ಅದನ್ನು ಕೈಯಿಂದ ಕೊಡವಿ ಹಾಕಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹೆದರದೆ ಆತ ಎರಡು ಬಾರಿ ಹಾವಿಗೆ ಪ್ರತಿಯಾಗಿ ಕಚ್ಚಿದ್ದಾನೆ. ಕೂಡಲೇ ಮನೆಯ ಸದಸ್ಯರಿಗೆ ವಿಚಾರ ಗೊತ್ತಾಗಿ ದೀಪಕ್‌ನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದ್ದಾರೆ. ಹಾವು ಕಡಿದ ಹೊರತಾಗಿಯೂ ಅದರಿಂದ ವಿಷ ಆತನ ದೇಹಕ್ಕೆ ಬಂದಿರಲಿಲ್ಲ. ಹೀಗಾಗಿ ಆತ ಆರೋಗ್ಯಪೂರ್ಣವಾಗಿದ್ದಾನೆ ಎಂದು ದೃಢಪಟ್ಟ ಅನಂತರ ಡಿಸ್ಚಾರ್ಜ್ ಮಾಡಲಾಗಿದೆ. **(ಉದಯವಾಣಿ 3–11–2022)**

==========================================================

## ಮಾನವನ ದೇಹಕ್ಕೆ ಕೃತಕ ರಕ್ತ ಕಣಗಳು!

**ಲಂಡನ್:** ವಿಶ್ವದಲ್ಲಿ ಇದೇ ಮೊದಲ ಬಾರಿಗೆ ಬ್ರಿಟನ್ ವಿಜ್ಞಾನಿಗಳು ವೈದ್ಯಕೀಯ ಪ್ರಯೋಗದ ಭಾಗವಾಗಿ ಪ್ರಯೋಗಾಲಯದಲ್ಲಿ ತಯಾರಿಸಿದ ರಕ್ತ ಕಣಗಳನ್ನು ಮಾನವರ ದೇಹಕ್ಕೆ ವರ್ಗಾಯಿಸಿದ್ದಾರೆ. ಬ್ರಿಟನ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ ಸಂಶೋಧಕರ ತಂಡ ಈ ಪ್ರಯೋಗ ಕೈಗೊಂಡಿದೆ. 'ಈ ಪ್ರಯೋಗವು ಸುರಕ್ಷಿತ ಮತ್ತು ಪರಿಣಾಮಕಾರಿ ಎಂದು ಸಾಬೀತಾದರೆ ರಕ್ತಕ್ಕೆ ಸಂಬಂಧಿಸಿದ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವವರ ಚಿಕಿತ್ಸೆಯಲ್ಲಿ ಪ್ರಯೋಗಾಲಯದಲ್ಲಿ ತಯಾರಿಸಿದ ರಕ್ತ ಕಣಗಳು ಕ್ರಾಂತಿಕಾರಿ ಪರಿಣಾಮ ಉಂಟುಮಾಡಲಿದೆ' ಎಂದು ವಿಜ್ಞಾನಿಗಳು ಹೇಳಿದ್ದಾರೆ. 'ಈ ರೀತಿಯ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಅವರದೇ ಗುಂಪಿನ ರಕ್ತ ಸಿಗುವುದು ಕಷ್ಟಸಾಧ್ಯ. ರಕ್ತ ಕಣಗಳನ್ನು ದಾನಿಗಳ ಕಾಂಡಕೋಶದಿಂದ ಬೆಳಸಲಾಯಿತು. ಅನಂತರ ಕೆಂಪು ರಕ್ತ ಕಣಗಳನ್ನು ಆರೋಗ್ಯಕರ ಸ್ವಯಂ ಸೇವಕರ ದೇಹಕ್ಕೆ ವರ್ಗಾಯಿಸಲಾಯಿತು. ಈ ರೀತಿಯ ಪ್ರಯೋಗವು ವಿಶ್ವದಲ್ಲೇ ಇದೇ ಮೊದಲು' ಎಂದು ವಿಜ್ಞಾನಿಗಳು ಮಾಹಿತಿ ನೀಡಿದ್ದಾರೆ. **(ಉದಯವಾಣಿ 8–11–2022)**

==========================================================

## ಒಂದು ಊಟಕ್ಕೆ 19,000 ರೂ.!

**ಲಂಡನ್:** ಬ್ರೆಕ್ಸಿಟ್‌ನಿಂದ ಬ್ರಿಟನ್ ಹೊರಬಂದ ಅನಂತರ ಹಣದುಬ್ಬರ ಏರಿಕೆಯಾಗಿದ್ದು, ಜೀವನ ವೆಚ್ಚ ದುಬಾರಿಯಾಗಿದೆ. ಇದಕ್ಕೆ ಉದಾಹರಣೆ ಎಂಬಂತೆ ಈ ಹಿಂದೆ ಬ್ರಿಟನ್‌ನ ಟಾಪ್ ರೆಸ್ಟೋರೆಂಟ್‌ಗಳಲ್ಲಿ ಒಂದು ಊಟಕ್ಕೆ 100 ಪೌಂಡ್ (9,000 ರೂ.) ಪಡೆಯಲಾಗುತ್ತಿತ್ತು. ಆದರೆ ಇದು ಈಗ ದುಪ್ಪಟ್ಟಾಗಿದೆ. ಒಂದು ಊಟಕ್ಕೆ 200 ಪೌಂಡ್ (ಸುಮಾರು 19,000 ರೂ.) ವಿಧಿಸಲಾಗುತ್ತಿದೆ. ಯನಿಶಿರ್ ಹಾಲ್ ರೆಸ್ಟೋರೆಂಟ್‌ನಲ್ಲಿ ಒಂದು ಊಟಕ್ಕೆ 410 ಪೌಂಡ್ ನಿಗದಿಪಡಿಸಲಾಗಿದೆ. **(ಉದಯವಾಣಿ 12–11–2022)**

==========================================================

## ನಾಟಕ ವೀಕ್ಷಿಸಿದ್ದಕ್ಕೆ ಮರಣದಂಡನೆ!

**ಪ್ಯಾಂಗ್ಯಾಂಗ್:** ದಕ್ಷಿಣ ಕೊರಿಯಾದ ನಾಟಕಗಳನ್ನು ವೀಕ್ಷಿಸಿದ ಮತ್ತು ಸ್ನೇಹಿತರೊಂದಿಗೆ ಅದನ್ನು ಹಂಚಿಕೊಂಡ ಕಾರಣಕ್ಕಾಗಿ ಉತ್ತರ ಕೊರಿಯಾದಲ್ಲಿ ಇಬ್ಬರು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಮರಣದಂಡನೆ ವಿಧಿಸಲಾಗಿದೆ!

ಉತ್ತರ ಕೊರಿಯಾದ ಕಾನೂನಿನ ಪ್ರಕಾರ, ವಿದೇಶಿ ನಾಟಕಗಳ ವೀಕ್ಷಣೆ ಮತ್ತು ಹಂಚಿಕೆ ಶಿಕ್ಷಾರ್ಹ ಅಪರಾಧವಾಗಿದೆ. ಚೀನ ಗಡಿಗೆ ಹೊಂದಿಕೊಂಡಿರುವ ಉತ್ತರ ಕೊರಿಯಾದ ರಿಯಾಂಗ್ ಹ್ಯಾಂಗ್ ಪ್ರಾಂತದ ಪ್ರೌಢ ಶಾಲೆ ಒಂದರಲ್ಲಿ ಈ ಇಬ್ಬರು ವಿದ್ಯಾರ್ಥಿಗಳು ಕಲಿಯುತ್ತಿದ್ದರು.

ಕಳೆದ ಅಕ್ಟೋಬರ್‌ನಲ್ಲಿ ಇವರು ದಕ್ಷಿಣ ಕೊರಿಯಾ ಮತ್ತು ಅಮೆರಿಕದ ಅನೇಕ ನಾಟಕಗಳನ್ನು ವೀಕ್ಷಿಸಿದ್ದಾರೆ. ಅಲ್ಲದೇ ತಮ್ಮ ಸ್ನೇಹಿತರಿಗೂ ಹಂಚಿದ್ದಾರೆ. ಅಪರಾಧ ಸಾಬೀತಾದ ಹಿನ್ನಲೆಯಲ್ಲಿ ಇಬ್ಬರು ಬಾಲಕರನ್ನು ಹೊಲಕ್ಕೆ ಕರೆದೊಯ್ದು, ಸಾರ್ವಜನಿಕರೆದುರೇ ಗುಂಡಿಕ್ಕಿ ಹತ್ಯೆಗೈಯ್ಯಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. **(ಉದಯವಾಣಿ 7–12–2022)**

==========================================================

## ಅನಾನಸಿನ ಬೆಲೆ 1 ಲಕ್ಷ ರೂ.!

**ಹೊಸದಿಲ್ಲಿ:** ಒಂದು ಅನಾನಸಿನ ಬೆಲೆ ಎಷ್ಟಿರಬಹುದು? 46ರೂ., ಹೆಚ್ಚೆಂದರೆ 50 ರೂ. ಆದರೆ ಹರಾಜಿನಲ್ಲಿ ಮಾರಾಟವಾಗಿರುವ ಈ ಅನಾನಸಿನ ಬೆಲೆ ಬರೋಬ್ಬರಿ 1 ಲಕ್ಷ ರೂ. ಸ ಹೆಲಿಗನ್ ಎಂಬ ವೆಬ್‌ಸೈಟ್ ಮೂಲಕ ಅದನ್ನು ಹರಾಜಿನಲ್ಲಿ ಮಾರಾಟ ಮಾಡಲಾಗಿದೆ. ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಿರುವ ಮಾಹಿತಿ ಪ್ರಕಾರ, 1819ರಲ್ಲಿ ಇಂಗ್ಲೆಂಡ್‌ಗೆ ಅನಾನಸ್ ಅನ್ನು ಪರಿಚಯಿಸಲಾಯಿತು. ದೇಶದ ಹವಾಮಾನ ಅದರ ಬೆಳೆಗೆ ಸೂಕ್ತವಲ್ಲ ಎಂದು ತೋಟಗಾರಿಕೆ ಇಲಾಖೆಯ ಪರಿಣತರು ಅಭಿಪ್ರಾಯಪಟ್ಟಿದ್ದರು. ಹೀಗಾಗಿ ಮರದಿಂದ ತಯಾರಿಸಿದ ಪೆಟ್ಟಿಗೆಯಲ್ಲಿ ರಸಗೊಬ್ಬರ ಮಿಶ್ರಿತ ಮಣ್ಣನ್ನು ತುಂಬಿ ಅದರಲ್ಲಿ ಬೆಳೆಯಲು ಆರಂಭಿಸಲಾಯಿತು. ಇಷ್ಟು ಕಷ್ಟಪಟ್ಟು ಬೆಳೆಯುವ ಕಾರಣ, ಒಂದೊಂದು ಅನಾನಸು ಕೂಡ ತಲಾ 1 ಲಕ್ಷ ರೂ. ಗೆ ಮಾರಾಟವಾಗುತ್ತದೆ. **(ಉದಯವಾಣಿ 10–12–2022)**

==========================================================

## ತಾಜ್‌ಗೆ 9.81 ಕೋಟಿ ತೆರಿಗೆ ನೋಟಿಸ್

*** ಇದೇ ಮೊದಲ ಬಾರಿಗೆ ಘೋಷಿತ ಸ್ಮಾರಕಕ್ಕೆ ನೋಟಿಸ್**
*** ಪಾವತಿಸದಿದ್ದರೆ 15 ದಿನಗಳಲ್ಲಿ ಮುಟ್ಟುಗೋಲು ಹಾಕುವ ಎಚ್ಚರಿಕೆ**
*** ಆಗ್ರಾ ಪಾಲಿಕೆ ಕ್ರಮಕ್ಕೆ ಭಾರತೀಯ ಪುರಾತತ್ವ ಇಲಾಖೆ ಆಕ್ಷೇಪ**

**ಆಗ್ರಾ:** ತಾಜ್‌ಮಹಲ್‌ಗೆ ಇದೇ ಮೊದಲ ಬಾರಿ 9.81 ಕೋಟಿ ರೂ. ತೆರಿಗೆ ನೀಡುವಂತೆ ನೋಟಿಸ್ ನೀಡಲಾಗಿದೆ. 15 ದಿನಗಳಲ್ಲಿ ಮೊತ್ತ ಪಾವತಿ ಮಾಡದೇ ಇದ್ದಲ್ಲಿ ಅದನ್ನು ಮುಟ್ಟುಗೋಲು ಹಾಕುವುದಾಗಿ ಎಚ್ಚರಿಸಲಾಗಿದೆ. 2021–22 ಮತ್ತು ಪ್ರಸಕ್ತ ವರ್ಷಕ್ಕಾಗಿ ಆಗ್ರಾ ಮಹಾನಗರ ಪಾಲಿಕೆ ಈ ನೋಟಿಸ್ ನೀಡಿದೆ.

ನೀರಿನ ಬಿಲ್ 1.94 ಕೋಟಿ ರೂ., 1.40 ಲಕ್ಷ ರೂ. ಆಸ್ತಿ ತೆರಿಗೆ, 1.40 ಲಕ್ಷ ರೂ. ಮತ್ತೊಂದು ಸ್ಮಾರಕ್ಕೆ ಸಂಬಂಧಿಸಿದಂತೆ ಇರುವ ತೆರಿಗೆ ಬಾಕಿ ಇದೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ಇದಲ್ಲದೆ, ಆಗ್ರಾ ಕೋಟೆಯ ನಿರ್ವಹಣಾ ವೆಚ್ಚ ಎಂದು ಆಗ್ರಾ ದಂಡು ಮಂಡಳಿ (ಆಗ್ರಾ ಕಂಟೋನ್ಮೆಂಟ್ ಬೋರ್ಡ್) ವತಿಯಿಂದ 5 ಕೋಟಿ ರೂ. ಶುಲ್ಕ ವಿಧಿಸಲಾಗಿದೆ.

ತಾಜ್‌ಮಹಲ್‌ನ ನಿರ್ವಹಣೆ ಮತ್ತು ಉಸ್ತುವಾರಿ ನೋಡಿಕೊಳ್ಳುತ್ತಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ಆಗ್ರಾ ವಲಯದ ಸೂಪರಿಂಟೆಂಡಿಂಗ್ ಪುರಾತತ್ವಶಾಸ್ತ್ರಜ್ಞ ರಾಜೇಶ್ ಕುಮಾರ್ ಪಟೇಲ್ ಮಾತನಾಡಿ 'ತಾಜ್‌ಮಹಲ್‌ಗೆ ತೆರಿಗೆ ವಿಧಿಸಲು ಸಾಧ್ಯವಿಲ್ಲ. ವಾಣಿಜ್ಯಿಕ ಬಳಕೆ ಇಲ್ಲದ್ದರಿಂದ ನೀರಿನ ತೆರಿಗೆ ಕೂಡ ಪಾವತಿ ಮಾಡುವಂತೆ ಇಲ್ಲ. ನೀರನ್ನು ಆವರಣದ ಗಿಡಗಳಿಗೆ ಬಳಕೆ ಮಾಡಲಾಗುತ್ತದೆ. 1920ರಲ್ಲಿಯೇ ಅದನ್ನು ಸಂರಕ್ಷಿತ ಸ್ಮಾರಕ ಎಂದು ಘೋಷಿಸಲಾಗಿದೆ' ಎಂದು ಹೇಳಿದ್ದಾರೆ. ನಮ್ಮ ಸಂಸ್ಥೆ ದೇಶದಲ್ಲಿ 4 ಸಾವಿರ ಸ್ಮಾರಕಗಳ ಹೊಣೆ ಹೊತ್ತಿದೆ. ಇಂಥ ನೋಟಿಸ್ ಬೇರೆಲ್ಲೂ ಬಂದಿಲ್ಲ ಎಂದಿದ್ದಾರೆ. **(ಉದಯವಾಣಿ 21–12–2022)**

==================================================

## ದಿನಗೂಲಿಗೆ 14 ಕೋಟಿ ತೆರಿಗೆ ನೋಟಿಸ್!

**ಪಾಟ್ನಾ, ಡಿ. 20:** ಬಿಹಾರದ ದಿನಗೂಲಿ ನೌಕರ ಮನೋಜ್ ಯಾದವ್‌ಗೆ ಕಳೆದ ಶನಿವಾರ ಅಚ್ಚರಿ ಕಾದಿತ್ತು! ಆತನ ಮನೆಗೆ ಬಂದ ಆದಾಯ ತೆರಿಗೆ ಅಧಿಕಾರಿಗಳು 14 ಕೋಟಿ ರೂ. ತೆರಿಗೆ ಪಾವತಿಸಿ ಎಂದು ನೋಟಿಸ್ ನೀಡಿದರು. ಆಗ ಮನೋಜ್, ನಿಮಗೆ ಅಷ್ಟು ತೆರಿಗೆ ಕಟ್ಟಲು ನನ್ನಲ್ಲಿರುವ ಅಷ್ಟೂ ಆಸ್ತಿಯನ್ನು ಹತ್ತಾರು ಬಾರಿ ಮಾರಿದರೂ ಸಾಧ್ಯವಿಲ್ಲ. ತಾನೊಬ್ಬ ದಿನಗೂಲಿ ನೌಕರ ಎಂದಿದ್ದು, ಆತನ ಪರಿಸ್ಥಿತಿ ನೋಡಿ ಅಧಿಕಾರಿಗಳಿಗೇ ದಿಗಿಲಾಗಿದೆ. ಈ ವೇಳೆ ಆತ ಕೆಲ ಮಾಹಿತಿ ನೀಡಿದ್ದಾನೆ. ಕೊರೊನಾಗೂ ಮುನ್ನ ತಾನು ಪಂಜಾಬ್, ಹರಿಯಾಣ, ದಿಲ್ಲಿಗಳಲ್ಲಿ ಕೆಲವು ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡಿದ್ದೇನೆ. ಅವರು ತನ್ನ ಪಾನ್‌ಕಾರ್ಡ್, ಆಧಾರ್ ಸಂಖ್ಯೆ ಪಡೆದಿದ್ದರು. ಅವರೇ ತನ್ನ ಹೆಸರಲ್ಲಿ ನಕಲಿ ಬ್ಯಾಂಕ್ ಖಾತೆ ತೆರೆದು ಮೋಸ ಮಾಡಿರಬಹುದು ಎಂದಿದ್ದಾನೆ. ವಿಚಿತ್ರವೆಂದರೆ ಈ ಖಾತೆಯಲ್ಲಿ ಸತತ ಕೋಟ್ಯಂತರ ರೂ. ವ್ಯವಹಾರ ನಡೆದಿದೆ! **(ಉದಯವಾಣಿ 21–12–22)**

==================================================

## ಅಂಬೇಡ್ಕರ್ ದೇಶದ ಸಂವಿಧಾನದಲ್ಲಿ ಪ್ರವಾದಿ ಮುಹಮ್ಮದರ ಪರಿಕಲ್ಪನೆಗಳನ್ನು ಅಳವಡಿಸಿದ್ದಾರೆ: ರಮೇಶ್ ಕುಮಾರ್

**ಮಂಗಳೂರು:** ಸಮಾನತೆ, ಸಹೋದರತೆ, ಪ್ರಜಾಪ್ರಭುತ್ವ ಇತ್ಯಾದಿ ಪರಿಕಲ್ಪನೆಗಳು ಪ್ರವಾದಿ ಪೈಗಂಬರ್ ಅವರದ್ದಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೇಶದ ಸಂವಿಧಾನದಲ್ಲಿ ಪ್ರವಾದಿ ಪೈಗಂಬರ್‌ರ ಈ ಪರಿಕಲ್ಪನೆಯನ್ನೇ ಅಳವಡಿಕೆ ಮಾಡಿಕೊಂಡಿದ್ದಾರೆ ಎಂದು ರಾಜ್ಯ ವಿಧಾನಸಭೆಯ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಹೇಳಿದ್ದಾರೆ.

ನಗರದ ಪುರಭವನದಲ್ಲಿ ಶುಕ್ರವಾರ ನಡೆದ 'ಯುನಿವೆಫ್ ಕರ್ನಾಟಕ'ದ ಪ್ರವಾದಿ ಮುಹಮ್ಮದ್(ಸ)ರ ಸಂದೇಶ ಪ್ರಚಾರ ಅಭಿಯಾನ (ಅರಿಯಿರಿ ಮನುಕುಲದ ಪ್ರವಾದಿಯನ್ನು) ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್, ರಾಷ್ಟ್ರಪಿತ ಮಹಾತ್ಮಾಗಾಂಧಿ, ಕಾರ್ಮಿಕ ನಾಯಕ ಕಾರ್ಲ್‌ಮಾರ್ಕ್ಸ್‌ರಂತಹ ಮಹನೀಯರು ಪ್ರವಾದಿಯ ಅನುಯಾಯಿಗಳೇ ಆಗಿದ್ದಾರೆ. ಆದರೆ ಇಂದು ಸಮಾಜದಲ್ಲಿ ಧರ್ಮದ ತಿರುಳನ್ನು ಅರ್ಥ ಮಾಡಿಕೊಳ್ಳದವರು ಅದರ ಬಗ್ಗೆ ಮಾತನಾಡತೊಡಗಿದ್ದಾರೆ ಮತ್ತು ಸಮುದಾಯಗಳ ನಾಯಕರಂತೆ ಬಿಂಬಿಸಲ್ಪಡುತ್ತಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆಯಾಗಿದೆ ಎಂದ ರಮೇಶ್ ಕುಮಾರ್, ಅಯೋಧ್ಯೆಯ ರಾಜನಾಗುವ, ಅಧಿಕಾರ ನಡೆಸುವ ಎಲ್ಲಾ ಅವಕಾಶಗಳನ್ನು ತ್ಯಜಿಸಿದ ತ್ಯಾಗಮಯಿ ಶ್ರೀರಾಮನನ್ನು ಇಂದು ಕೆಲವು ರಾಜಕಾರಣಿಗಳು ಅಧಿಕಾರಕ್ಕಾಗಿ ರಾಮನ ಹೆಸರಿನಲ್ಲಿ ದೊಂಬಿ ನಡೆಸುತ್ತಿರುವುದು ವಿಪರ್ಯಾಸ ಎಂದರು.

ಪ್ರವಾದಿ ಎಂದೂ ಕೂಡ ಸರ್ವಾಧಿಕಾರವನ್ನು ಆಶಿಸಿರಲಿಲ್ಲ. ಅವರು ಸದಾ ಪ್ರಜೆಗಳ ಪ್ರಭುತ್ವಕ್ಕೆ ಆದ್ಯತೆ ನೀಡುತ್ತಿದ್ದರು. ನುಡಿದಂತೆ ನಡೆಯುತ್ತಿದ್ದರು. ಅದಕ್ಕಾಗಿ ತನ್ನ ಬದುಕನ್ನೇ ಪ್ರಯೋಗವಾಗಿಸುತ್ತಿದ್ದರು. ಅಂತಹ ಪ್ರವಾದಿಯ ಬಗ್ಗೆ, ಇಸ್ಲಾಮ್ ಧರ್ಮದ ಬಗ್ಗೆ ಏನನ್ನೂ

ತಿಳಿಯದವರು ಮಾತನಾಡುವುದು ರಾಕ್ಷಸತನದ ಪರಮಾವಧಿ ಎಂದು ರಮೇಶ್ ಕುಮಾರ್ ಹೇಳಿದರು.

ಇನ್ನು ಕೆಲವೇ ತಿಂಗಳಲ್ಲಿ ಚುನಾವಣೆ ಬರುತ್ತಿದೆ. ಓಟಿನ ಡಬ್ಬ ತುಂಬುವ ರಾಜಕಾರಣಿಗಳು ಅಧಿಕಾರಕ್ಕಾಗಿ ಏನನ್ನೂ ಮಾಡಲು ಹಿಂಜರಿಯುವುದಿಲ್ಲ. ಮಂಗಳೂರಿನಲ್ಲಿ ಈ ರಾಜಕಾರಣಿಗಳಿಂದ ಇನ್ನೇನು ಕಾದಿದೆಯೋ ಗೊತ್ತಿಲ್ಲ. ಅವರೇನೋ ಒಳಗಿಂದೊಳಗೆ ವ್ಯಾಪಾರ ಆರಂಭಿಸತೊಡಗಿದ್ದಾರೆ. ಆದರೆ ಅದರ ಮರ್ಮಗಳನ್ನು ಅರಿಯದ ಜನಸಾಮಾನ್ಯರು ಹೊಡೆದಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಈ ಬಗ್ಗೆ ಎಲ್ಲರೂ ಎಚ್ಚರಿಕೆ ವಹಿಸಬೇಕು ಎಂದು ರಮೇಶ್ ಕುಮಾರ್ ಕರೆ ನೀಡಿದರು.

ಇಸ್ಲಾಮ್‌ನಲ್ಲಿ ಮೇಲು, ಕೀಳು ಎಂಬುದಿಲ್ಲ. ಎಲ್ಲರೂ ಸರಿಸಮಾನರು ಎಂದು ಪ್ರತಿಪಾದಿಸುತ್ತದೆ. ಮುಸ್ಲಿಮರು ಸಹೋದರತೆಗೆ ಆದ್ಯತೆ ನೀಡುತ್ತಾರೆ. ಕಷ್ಟದಲ್ಲಿ ಸಿಲುಕಿರುವವರಿಗೆ ಸದಾ ಸಹಾಯಹಸ್ತ ಚಾಚುತ್ತಾರೆ. ಅಪಘಾತ, ತುರ್ತು ಸಂದರ್ಭ ಸಹಾಯ ಮಾಡಲು ಧಾವಿಸುವ ಗುಣಸ್ವಭಾವ ಮುಸ್ಲಿಮರದ್ದಾಗಿದೆ. ಕೊರೋನ ಸಂದರ್ಭ ಮುಸ್ಲಿಂ ಸಮುದಾಯ ನೀಡಿದ ನೆರವನ್ನು ಮರೆಯಲು ಸಾಧ್ಯವಿಲ್ಲ ಎಂದು ಮಂಗಳೂರು ಧರ್ಮಪ್ರಾಂತದ ಬಿಷಪ್ ರೆ.ಫಾ ಪೀಟರ್ ಪೌಲ್ ಸಲ್ಡಾನ ತಿಳಿಸಿದರು. **(ವಾರ್ತಾ ಭಾರತಿ: 6–01–2023)**

==========================================================================

# ಕೂಲಿ ಆಗಿದ್ದಾತ ಅಮೆರಿಕದಲ್ಲಿ ಜಡ್ಜ್

## * ಕಾಸರಗೋಡಿನ ಸುರೇಂದ್ರನ್ ಯಶೋಗಾಥೆ

### 10ನೇ ತರಗತಿ ಬಳಿಕ ಒಂದು ವರ್ಷ ಶಿಕ್ಷಣ ಸ್ಥಗಿತ

**ಟೆಕ್ಸಾಸ್, ಜ. 8:** ಕಡು ಬಡತನದಿಂದಾಗಿ ಒಂದು ಹಂತದಲ್ಲಿ ವಿದ್ಯಾಭ್ಯಾಸ ಸ್ಥಗಿತಗೊಳಿಸಿದ್ದ ವ್ಯಕ್ತಿ ಈಗ ಅಮೆರಿಕದ ಟೆಕ್ಸಾಸ್‌ನ ಪೋರ್ಟ್ ಬೆಂಡ್ ಕೌಂಟಿ ಕೋರ್ಟ್‌ನ ನ್ಯಾಯಾಧೀಶ! ಇಂಥ ಸಾಧನೆ ಮಾಡಿದ್ದು ಕೇರಳದ ಕಾಸರಗೋಡು ಮೂಲದ ಸುರೇಂದ್ರನ್ ಕೆ. ಪಟ್ಟೇಲ್. ಅವರು 10ನೇ ತರಗತಿಯಲ್ಲಿದ್ದಾಗ ಬಡತನದಿಂದ ವಿದ್ಯಾಭ್ಯಾಸ ಸ್ಥಗಿತಗೊಳಿಸಿದ್ದರು. ಬಳಿಕ ಒಂದು ವರ್ಷ ಬೀಡಿ ಕಟ್ಟುತ್ತ, ಕೂಲಿ ಕೆಲಸ ಮಾಡುತ್ತ ದಿನದೂಡಿದ್ದರು. ಅನಂತರ ಗೆಳೆಯರ ಸಹಾಯದಿಂದ ವಿದ್ಯಾಭ್ಯಾಸ ಮುಂದುವರಿಸಿದ್ದರು. ಈಗ ಟೆಕ್ಸಾಸ್ ಜಿಲ್ಲಾ ಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಸುರೇಂದ್ರನ್, ಅಮೆರಿಕಕ್ಕೆ ಆಗಮಿಸಿದ ಸಂದರ್ಭದಲ್ಲಿ ನನ್ನ ವಿರುದ್ಧ ಸುಳ್ಳು ಪ್ರಚಾರ ನಡೆಸಲಾಗಿತ್ತು. ಆದರೆ ನಾನು ಡೆಮಾಕ್ರಾಟಿಕ್ ಪಕ್ಷದ ಪರ ಪ್ರಚಾರ ನಡೆಸಿದ್ದು ನೆರವಿಗೆ ಬಂತು ಎಂದು ಹೇಳಿದ್ದಾರೆ.

ಸುರೇಂದ್ರನ್ ಅವರ ಕುಟುಂಬ ಕಡು ಬಡತನದಲ್ಲಿ ಇದ್ದ ಕಾರಣ ಅವರಿಗೆ ಹತ್ತನೇ ತರಗತಿಯವರೆಗೆ ಒಂದು ಹಂತದಲ್ಲಿ ಕಷ್ಟದಿಂದ ಶಿಕ್ಷಣ ಪಡೆಯಲು ಸಾಧ್ಯವಾಗಿತ್ತು. ಅನಂತರ ಒಂದು ವರ್ಷದ ಕಾಲ ಬೀಡಿ ಕಟ್ಟುವುದು, ಕೂಲಿ ಕೆಲಸದ ಮೂಲಕ ಜೀವನ ನಿರ್ವಹಣೆ ಮಾಡಿ, ಕುಟುಂಬದ ನಿರ್ವಹಣೆ ಮಾಡಿದ್ದರು.

ಆ ಬಳಿಕ ಅವರು ನೀಲೇಶ್ವರದ ಇ.ಕೆ. ನಾಯನಾರ್ ಸ್ಮಾರಕ ಸರಕಾರಿ ಕಾಲೇಜಿನಲ್ಲಿ ಪದವಿ ಪಡೆಯಲು ಮುಂದಾದರು. ಕೆಲಸ ಹಾಗೂ ಶಿಕ್ಷಣದ ಅನಿವಾರ್ಯದಿಂದ ಅವರು ಭಾರೀ ಕಷ್ಟಗಳನ್ನು ಎದುರಿಸಬೇಕಾಯಿತು. ಅನಂತರ ಎಲ್‌ಎಲ್‌ಬಿ ಪದವಿಯನ್ನು 1995ರಲ್ಲಿ ಪಡೆದರು. 2007ರ ವರೆಗೆ ಕಾಸರಗೋಡಿನ ಹೊಸದುರ್ಗದಲ್ಲಿ ನ್ಯಾಯವಾದಿಯಾಗಿ ಜನಪ್ರಿಯತೆ ಪಡೆದುಕೊಂಡರು.

ಅದೇ ವರ್ಷ ಅವರ ಪತ್ನಿಗೆ ಅಮೆರಿಕದಲ್ಲಿ ಕೆಲಸ ಸಿಕ್ಕಿದ್ದರಿಂದ ಅವರು ಅಲ್ಲಿಗೆ ತೆರಳಬೇಕಾಯಿತು. ಅಲ್ಲಿ ಯೂನಿವರ್ಸಿಟಿ ಆಫ್ ಹ್ಯೂಸ್ಟನ್‌ನ ಲಾ ಸೆಂಟರ್‌ನಲ್ಲಿ ಎಲ್‌ಎಲ್‌ಎಂ ಪದವಿ ಪಡೆದು, ವಕೀಲಿ ವೃತ್ತಿ ಆರಂಭಿಸಿದರು. ಟೆಕ್ಸಾಸ್‌ನ ಕೋರ್ಟ್‌ನಲ್ಲಿ ಕೆಲಸಕ್ಕೆ ಸೇರಿ ಹಂತಹಂತವಾಗಿ ಮುಂದುವರಿದು ಈಗ ನ್ಯಾಯಮೂರ್ತಿ ಆಗಿದ್ದಾರೆ. **(ಉದಯವಾಣಿ 9–1–2023)**

==========================================================================

# 7 ವರ್ಷದ ಬಾಲಕನ ಬಾಯಲ್ಲಿ 527 ಹಲ್ಲು!

**ಚೆನ್ನೈ:** ತಮ್ಮ ಮಗನ ಬಲಬದಿಯ ಕೆನ್ನೆ ಊದಿಕೊಂಡಿರುವುದನ್ನು ಗಮನಿಸಿ ಪಾಲಕರು ದಂತವೈದ್ಯರ ಬಳಿಗೆ ದೌಡಾಯಿಸಿದಾಗ ಆಶ್ಚರ್ಯ ಕಾದಿತ್ತು. ಏಳು ವರ್ಷ ಬಾಲಕ ರವೀಂದ್ರನಾಥನ ಬಲ ದವಡೆಯ ಕೆಳಗೆ ಸುಮಾರು 527 ಹಲ್ಲುಗಳು ಬೆಳೆದುಕೊಂಡಿದ್ದವು!

ಹೌದು, ಇದನ್ನು ಕಂಡು ವೈದ್ಯರು ಕೂಡ ಕ್ಷಣಕಾಲ ಆಶ್ಚರ್ಯ ವ್ಯಕ್ತಪಡಿಸಿದ್ದರು. ಬಳಿಕ ಶಸ್ತ್ರಚಿಕಿತ್ಸೆ ನಡೆಸಿ ಅನಗತ್ಯ ಹಲ್ಲುಗಳನ್ನು ಕೀಳಲಾಗಿದ್ದು, ಕೇವಲ 21 ಅಗತ್ಯ ಹಲ್ಲುಗಳನ್ನು ಮಾತ್ರ ಉಳಿಸಲಾಗಿದೆ. ಈ ಅಪರೂಪದ ದಂತವೈದ್ಯಕೀಯ ಶಸ್ತ್ರಚಿಕಿತ್ಸೆ ನಡೆದಿದ್ದು ಚೆನ್ನೈನ ಸವೀತಾ ಡೆಂಟಲ್ ಕಾಲೇಜಿನಲ್ಲಿ. ನನ್ನ ಮಗ ಮೂರು ವರ್ಷದವನಿದ್ದಾಗ ಬಲಗೆನ್ನೆ ಊದಿಕೊಳ್ಳಲು ಆರಂಭಿಸಿತು. ಸರಕಾರಿ ಆಸ್ಪತ್ರೆಗೆ ಕರೆದೊಯ್ದಾಗ ಆತ ಪರೀಕ್ಷೆಗಳಿಗೆ ಕೂರಲು ಒಪ್ಪದೆ ಹಠ ಮಾಡಿದ. ಸಣ್ಣ ಮಗು ಎಂದು ನಾವು ಕೂಡ ನಿರ್ಲಕ್ಷ್ಯ ಮಾಡಿದೆವು. ಆದರೆ ನಂತರ ಹಲ್ಲುಗಳು ಹೆಚ್ಚಾಗುತ್ತಲೇ ಹೋಗಿ ಗಾಬರಿಗೊಂಡು ಮತ್ತೆ ಆಸ್ಪತ್ರೆಗೆ ಬಂದೆವು ಎಂದು ಬಾಲಕನ ತಂದೆ ಎಸ್. ಪ್ರಭುದಾಸ್

ಹೇಳಿದ್ದಾರೆ. ಸಣ್ಣ ಹಲ್ಲುಗಳ ಒಂದು ಚೀಲ ದವಡೆಯ ಕೆಳಗೆ ಬೆಳೆದಿತ್ತು ಎಂದು ಶಸ್ತ್ರಚಿಕಿತ್ಸೆ ನಡೆಸಿದ ಡಾ. ಸೆಂದಿಲ್‌ನಾಥನ್ ಹೇಳಿದ್ದಾರೆ.

**(ವಿಜಯ ಕರ್ನಾಟಕ 1–8–2019)**

==========================================================

## ಯಾವುದೇ ದಿನಾಂಕ ಹೇಳಿದರೂ ಇಂಥದ್ದೇ ವಾರ ಎನ್ನುವ ವಿದ್ಯಾರ್ಥಿ!

**ದುಬ್ಯಾ, ಜ. 5:** ಯುಎಐನಲ್ಲಿರುವ ಅನಿವಾಸಿ ಭಾರತೀಯ ವಿದ್ಯಾರ್ಥಿಯೋರ್ವ ಅಸಾಧಾರಣ ಜ್ಞಾಪಕ ಶಕ್ತಿ ಹೊಂದಿದ್ದಾನೆ. ತಮಿಳುನಾಡು ಮೂಲದ 19 ವರ್ಷದ ರೋಹಿತ್ ಪರಿಧಿ ರಾಮ ಕೃಷ್ಣನ್, 'ಆಟಿಸಂ' ಕಾಯಿಲೆಯಿಂದ ಬಳಲುತ್ತಿದ್ದರೂ ಗಣಿತದಲ್ಲಿ ಚಾಕಚಾಕ್ಯತೆ ಹೊಂದಿದ್ದಾನೆ. ಭೂತ ಹಾಗೂ ಭವಿಷ್ಯದ ಯಾವುದೇ ದಿನಾಂಕವನ್ನು ಕೇಳಿದರೆ, ಆ ದಿನವು ಇಂಥದ್ದೇ ದಿನ (ಭಾನು, ಸೋಮ ಇತ್ಯಾದಿ) ಆಗಿರುತ್ತದೆ ಎಂದು ಥಟ್ಟೆಂದು ಹೇಳಿ ನಿಬ್ಬೆರಗಾಗಿಸುತ್ತಾನೆ ಎಂದು ಇಲ್ಲಿನ ಮಾಧ್ಯಮ ವರದಿ ಮಾಡಿದೆ.

2018ರಲ್ಲಿ 10ನೇ ತರಗತಿ ಪಾಸಾಗಿರುವ ಈತ, ಸಾಮಾನ್ಯರಂತೆ ಶಾಲೆ ಕಾಲೇಜಿನಲ್ಲಿ ಓದಲು ಶಕ್ತನಾಗಿಲ್ಲ. ಜನಿಸಿದಾಗ ಕೇವಲ ಒಂದು ಕೆ.ಜಿ. ತೂಕ ಹೊಂದಿದ್ದ ಈತ ಹಲವು ಶಸ್ತ್ರಚಿಕಿತ್ಸೆಗೊಳಗಾಗಿದ್ದಾನೆ. ಆದರೂ ಬುದ್ಧಿ ಪಾದರಸದಂತೆ ಚುರುಕಾಗಿದೆ. ಹಲವು ಸ್ಪರ್ಧೆಗಳಲ್ಲಿ ವಿಜೇತನಾಗಿದ್ದಾನೆ. ಎರಡ್ಮೂರು ಬಾರಿ ಯಾವುದೇ ಸಂಗೀತವನ್ನು ಕೇಳಿದರೆ ಬಳಿಕ ಆತನೇ ಆ ಸಂಗೀತ ನುಡಿಸುವ ಸಾಮರ್ಥ್ಯ ಹೊಂದಿದ್ದಾನೆ. ಸಂಸ್ಕೃತ ಭಗವದ್ಗೀತೆಯ 40ಕ್ಕೂ ಹೆಚ್ಚು ಶ್ಲೋಕ ಪಠಿಸುತ್ತಾನೆ ಎಂದು ಆತನ ತಾಯಿ ಮಾಲಿನಿ ಹೆಮ್ಮೆಯಿಂದ ಹೇಳುತ್ತಾರೆ.

**(ಉದಯವಾಣಿ 6–1–2020)**

==========================================================

## ಈ ಮೀನಿನ ಬೆಲೆ 13 ಕೋಟಿ ರೂ.!

ನಾಯಿಗಳು ಸಹಿತ ಸಾಕು ಪ್ರಾಣಿಗಳು ಕೋಟ್ಯಂತರ ರೂ. ಬೆಲೆ ಬಾಳುವುದನ್ನು ಸಾಮಾನ್ಯವಾಗಿ ಕೇಳಿದ್ದೇವೆ. ಆದರೆ, ಇಲ್ಲೊಂದು ಮೀನು ಇದೆ. ಅದರ ಬೆಲೆ ಕೇಳಿದರೆ ನೀವು ಹೌಹಾರುವುದು ಖಚಿತ. ಊಹಿಸಲೂ ಸಾಧ್ಯವಿಲ್ಲ. ಜಪಾನ್‌ನಲ್ಲಿ ಬೃಹತ್ ಗಾತ್ರದ ಬ್ಲೂಫಿನ್ ಮೀನು ಬರೋಬ್ಬರಿ 13 ಕೋಟಿ ರೂ.ಗೆ ಮಾರಾಟವಾಗಿದೆ. ಟೋಕಿಯೋದಲ್ಲಿ 278 ಕೆ.ಜಿ. ತೂಕ ಹೊಂದಿದ್ದ ಬೃಹತ್ ಗಾತ್ರದ ಮೀನನ್ನು ಹರಾಜು ಹಾಕಲಾಗಿದ್ದು, ನೋಡ ನೋಡುತ್ತಿದ್ದಂತೆಯೇ 13 ಕೋಟಿ ರೂ.ಗೆ ಮಾರಾಟ ಆಗಿದೆ. ಈ ಮೀನು ಉತ್ತರದ ಔಮೋರಿ ಪ್ರದೇಶದಲ್ಲಿ ಸೆರೆ ಸಿಕ್ಕಿತ್ತು. ಹರಾಜು ಪ್ರಕ್ರಿಯೆಯಲ್ಲಿ ಉದ್ಯಮಿ ಕಿಯೋಷಿ ಕಿಮುರಾ ಅತಿ ಹೆಚ್ಚು ಬೆಲೆಗೆ ಬಿಡ್ ಮಾಡಿ ಮೀನಿನ ಮಾಲಕರಾಗಿದ್ದಾರೆ. ಇದೇ ಮೊದಲ ಬಾರಿಗೆ ಈ ಪ್ರಮಾಣದ ಮೊತ್ತಕ್ಕೆ ಮಾರಾಟವಾಗಿದೆ. ವಿಶ್ವದಲ್ಲೇ ಅತಿ ಪ್ರತಿಷ್ಠಿತ ಮತ್ಸ್ಯ ಎಂಬ ಖ್ಯಾತಿಗೆ ಇದು ಪಾತ್ರವಾಗಿದೆ.

**(ಉದಯವಾಣಿ 6–1–2020)**

==========================================================

## ಮಕ್ಕಳ ಊಟಕ್ಕಾಗಿ ಕೇಶಮುಂಡನ!

**ಸೇಲಂ, ಜ. 10:** ಸಾಲದ ಸುಳಿಯಲ್ಲಿ ಸಿಲುಕಿರುವ 31 ವರ್ಷದ ಮಹಿಳೆಯೊಬ್ಬರು ತನ್ನ ಮಕ್ಕಳ ಹೊಟ್ಟೆ ತುಂಬಿಸಲು ತನ್ನ ತಲೆಗೂದಲನ್ನೇ ಮಾರಾಟ ಮಾಡಿದ್ದಾರೆ. ಆಹಾರ ತಂದು ಉಳಿದ ಹಣದಲ್ಲಿ ಕೀಟನಾಶಕ ಕೊಂಡು, ಅದನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲೂ ಪ್ರಯತ್ನಿಸಿದ್ದಾರೆ. ಈ ಘಟನೆ ತಮಿಳುನಾಡಿನ ಪೊನ್ನಂಪೇಟೆಯಲ್ಲಿ ನಡೆದಿದೆ. ಮಹಿಳೆ ಪ್ರೇಮಾ (31)ರ ಪತಿ ಸೆಲ್ವಂ ಸಾಲ ಭಾದೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಮೂವರು ಮಕ್ಕಳಿಗೆ ಆಹಾರ ಒದಗಿಸಲು ಕಂಡಕಂಡವರ ಬಳಿ ಪ್ರೇಮಾ ಹಣಕ್ಕಾಗಿ ಅಂಗಲಾಚುತ್ತಿದ್ದರು. ಆದರೆ ಶುಕ್ರವಾರವಾದ ಕಾರಣ ಎಲ್ಲರೂ ಹಣ ನೀಡಲು ನಿರಾಕರಿಸಿದರು. ಕೊನೆಗೆ, ಕೂದಲು ಮಾರುವವರೊಬ್ಬರು ತಲೆ ಬೋಳಿಸಿ ಕೂದಲು ನೀಡಿದರೆ 150 ರೂ. ನೀಡುವುದಾಗಿ ಹೇಳಿದ್ದರು. ಕೂಡಲೇ ಪ್ರೇಮಾ ತಮ್ಮ ಕೂದಲು ಬೋಳಿಸಿ ಕೊಂಡು, ಅದರ ಹಣದಿಂದ ಮಕ್ಕಳ ಹಸಿವನ್ನು ನೀಗಿಸಿದ್ದಾರೆ. ಅನಂತರ ಆತ್ಮಹತ್ಯೆಗೆ ಯತ್ನಿಸಿದ ಆಕೆಯನ್ನು ಸ್ಥಳೀಯರು ಕಾಪಾಡಿದ್ದಾರೆ.

**(ಉದಯವಾಣಿ 11–1–2020)**

==========================================================


**"ಯುಗರಶ್ಮಿಗೆ" ಚಂದಾದಾರರಾಗಿರಿ**

ವಾರ್ಷಿಕ ಚಂದಾ : ರೂ. 60/–

ಅಂಚೆ ಮೂಲಕ : ರೂ. 70/–

ಸಂಪರ್ಕಿಸಿರಿ : 99 00 410 789

ವಾರ್ತೆ

# ಬುರ್ಕಿನಾ ಫಾಸೋದ ಮಸೀದಿಯಲ್ಲಿ ಉಂಟಾದ ಭೀಕರಾಕ್ರಮಣದಲ್ಲಿ ಒಂಬತ್ತು ಅಹ್ಮದಿ ಮುಸ್ಲಿಮರು ಕೊಲ್ಲಲ್ಪಟ್ಟರು

**ಜನವರಿ 16:** ಜನವರಿ 11 ಬುಧವಾರ ಬುರ್ಕಿನಾ ಫಾಸೋದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಸೀದಿಯೊಳಗೆ ಭೀಕರವಾದಿಗಳು ಪ್ರವೇಶಿಸಿ ಅತಿಕ್ರೂರವಾದ ರೀತಿಯಲ್ಲಿ ಒಂಬತ್ತು ಅಹ್ಮದಿ ಮುಸ್ಲಿಮರನ್ನು ಕೊಲೆಮಾಡಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಮಹ್‌ದಿಯಾಬಾದ್‌ನಲ್ಲಿರುವ ಮಸೀದಿಯಲ್ಲಿ ನಮಾಝ್ ಮಾಡಲು ಈ ಪ್ರದೇಶದ ಅಹ್ಮದಿಯರು ಸೇರಿದ್ದರು. ಡೋರಿ ಪಟ್ಟಣದ ಹತ್ತಿರವಿರುವ ಈ ಅಹ್ಮದಿಯಾ ಬಹುಸಂಖ್ಯಾತ ಪ್ರದೇಶದಲ್ಲಿ ಸುಮಾರು 650ರಷ್ಟು ಅಹ್ಮದಿಯರು ವಾಸಿಸುತ್ತಾರೆ.

ನಮಾಝಿಗೋಸ್ಕರ ಅಝಾನ್ ಕರೆ ನೀಡಿದಾಗ ಆಯುಧಧಾರಿಗಳಾದ ಎಂಟು ಉಗ್ರವಾದಿಗಳು ಮೋಟಾರ್ ಬೈಕ್‌ಗಳಲ್ಲಿ ಬಂದು ಮಸೀದಿಯೊಳಗೆ ಅತಿಕ್ರಮ ಪ್ರವೇಶ ಮಾಡಿ ಅಹ್ಮದಿಯರನ್ನು ಹೆದರಿಸಲು ತೊಡಗಿದರು.

ಇಮಾಂ ಮಸ್ಜಿದ್ ಸಹಿತ ಒಂಬತ್ತು ಪುರುಷರನ್ನು ಆಯ್ದು ಭಯೋತ್ಪಾದಕರು ಮಸೀದಿಯ ಅಂಗಣಕ್ಕೆ ಕೊಂಡೊಯ್ದರು. ಅವರು 67 ಹರೆಯದ ಇಮಾಂ ಅಲ್‌ಹಾಜ್ ಬೌರೈಮ ಬಿಡಿಗರೊಂದಿಗೆ, ಅವರ ವಿಶ್ವಾಸವನ್ನು ಪರಿತ್ಯಜಿಸಲು ಹೇಳಿದಾಗ, ಅವರು ಹೀಗೆ ಪ್ರತಿಕ್ರಿಯಿಸಿದರು: **"ನೀವು ಬೇಕಾದರೆ ನನ್ನ ತಲೆಯನ್ನು ತೆಗೆದುಕೊಳ್ಳಿರಿ. ಏನು ಸಂಭವಿಸಿದರೂ ನಾನು ಎಂದಿಗೂ ಇಸ್ಲಾಂ ಅಹ್ಮದಿಯತ್ ಪರಿತ್ಯಜಿಸಲಾರೆನು."** ಆಗ ಉಗ್ರವಾದಿಗಳು ಅವರನ್ನು ಗುಂಡಿಕ್ಕಿ ಕೊಂದರು.

ಆ ಬಳಿಕ ಅವರು ಇತರ ಎಂಟು ಮಂದಿಯೊಡನೆ, ಒಬ್ಬೊಬ್ಬರೊಂದಿಗೆ ಹೀಗೆ ಹೇಳಿದಾಗ ಅವರಲ್ಲಿ ಯಾರೊಬ್ಬರೂ ತಮ್ಮ ವಿಶ್ವಾಸವನ್ನು ಬಿಡಲು ಸಮ್ಮತಿಸಲಿಲ್ಲ. ಅವರು ಹಾಗೆ ಒಬ್ಬೊಬ್ಬರಾಗಿ ಗುಂಡೇಟಿಗೆ ಬಲಿಯಾದರು. ಪ್ರತಿಯೊಬ್ಬ ಹುತಾತ್ಮನ ಕಂಠದಿಂದ ಉಚ್ಚರಿಸಲ್ಪಟ್ಟ ಕೊನೆಯ ವಾಕ್ಯ ಅಲ್ಲಾಹು ಅಕ್ಬರ್ (ಅಲ್ಲಾಹು ಮಹೋನ್ನತನು) ಎಂದಾಗಿತ್ತು. ಮಸೀದಿಯಲ್ಲಿದ್ದ ಮಕ್ಕಳು ಮತ್ತು ಸ್ತ್ರೀಯರ ಸಹಿತ ಇತರ ವಿಶ್ವಾಸಿಗಳ ಕಣ್ಣಮುಂದೆ ಈ ಕ್ರೂರಕೃತ್ಯ ನಡೆಯಿತು.

ಅಹ್ಮದಿ ಮುಸ್ಲಿಮರು ತಮ್ಮ ನಂಬಿಯನ್ನು ಬಿಡದಿದ್ದರೆ ಅಥವಾ ಪುನಃ ಮಸೀದಿಯನ್ನು ತೆರೆದರೆ ನಾವು ಪುನಃ ಬಂದು ಗ್ರಾಮದಲ್ಲಿರುವ ಎಲ್ಲ ಅಹ್ಮದಿಯರನ್ನು ಕೊಲ್ಲುವೆವೆಂದು ಬೆದರಿಕೆ ಹಾಕಿ ಭಯೋತ್ಪಾದಕರು ತೆರಳಿದರು.

ಆ ಭೀಕರ ಪರಿಸ್ಥಿತಿಯಲ್ಲಿ ಮೃತದೇಹಗಳನ್ನು ತೆಗೆದರೆ ತಾವು ಸಹ ಕೊಲ್ಲಲ್ಪಡುವೆವೆಂದು ಜನರು ಭಯಪಟ್ಟ ಕಾರಣ ಹುತಾತ್ಮರ ಮೃತದೇಹಗಳು ರಾತ್ರಿಯಿಡೀ ಮಸೀದಿಯ ಅಂಗಣದಲ್ಲೇ ಇದ್ದವು. ಮರುದಿನ ದಫನ ಮಾಡಲಾಯಿತು.

ಬುರ್ಕಿನಾ ಫಾಸೋದ ಹುತಾತ್ಮರ ಹೆಸರುಗಳು:

1. ಅಲ್‌ಹಾಜ್ ಬಿಡಿಗ ಬೌರೈಮ – 67 ವರ್ಷ ಪ್ರಾಯ
2. ಮಾನಿಯಲ್ ಅಲ್‌ಹಸ್ಸನೆ – 70 ವರ್ಷ
3. ಇಬ್ರಾಹೀಂ ಸೋಲೆ – 66 ವರ್ಷ
4. ಮಾಲಿಯಲ್ ಒಸ್ಸೇನಿ – 66 ವರ್ಷ
5. ಅಬ್ದುರಮಾನೆ ಹಮೀದೌ – 66 ವರ್ಷ
6. ಸೌದೇಯೆ ಉಸ್ಮಾನೆ – 58 ವರ್ಷ
7. ಮಾಗುಅಲ್ ಅಗಾಲಿ – 52 ವರ್ಷ
8. ಇದ್ರಾಹಿ ಮೂಸ – 52 ವರ್ಷ
9. ಅಬ್‌ದ್ರಮಾನೆ ಅಗುಮ – 43 ವರ್ಷ




(ಆಧಾರ: **Pressahmadiyya.com**)

## ಮಂಗಳೂರಿನ ಲೇಡಿಗೋಶನ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ













## ಬೆಂಗಳೂರಿನಲ್ಲಿ ಸಾಹಿತ್ಯೋತ್ಸವ – 2022



Yuduveer Wadiyar
Maharaja of Mysore



Veerappa Moily
Former CM of Karnataka




Sudha Murthy
Chairperson Infosys Foundation




Swami Vishwananda
Guru & Founder of Bhakti Marga



Mohammad Kulai (Beary Novelist)
& Kathyayini Kunjibettu (Tulu Poet)



Registered with the Registrar of Newspapers for India No. R.N. 27354/75
**Yugarashmi** Kannada Quarterly, **February - 2023.** Price : **Rs. 15/-**




## ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

#STOPWW3

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in | www.mta.tv
www.alislam.org | www.stopww3.co.uk

islaminind    islaminindia

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore